₹35

Multiplex Vaahini Kannada Bi-Monthly

# ಮಲ್ಟಿಪ್ಲೆಕ್ಸ್ ವಾಹಿನಿ

ಕೃಷಿ ದ್ವೈಮಾಸಿಕ

Volume-8 | Issue-4 | Multiplex Vaahini Bi-Monthly | October - November 2023 | Pages - 36

ಸಂಪುಟ–8 | ಸಂಚಿಕೆ–4 | ಮಲ್ಟಿಪ್ಲೆಕ್ಸ್ ವಾಹಿನಿ | ದ್ವೈಮಾಸಿಕ | ಅಕ್ಟೋಬರ್ – ನವೆಂಬರ್ 2023 | ಪುಟಗಳು – 36



## ಎನ್ ಚಲುವರಾಯಸ್ವಾಮಿ ಸಂವಾದ, ಸಂದರ್ಶನ



## ಆಲೂಗಡ್ಡೆ ಕಲ್ಲಂಗಡಿ

## ಸುಧಾರಿತ ಬೇಸಾಯ

## ಆಹಾರ ಭದ್ರತೆ ಆದಾಯ ಭದ್ರತೆ

– ಎಂ. ಎಸ್. ಸ್ವಾಮಿನಾಥನ್

ISO 9001 & 14001 Certified Company


multiplex®

MULTIPLEX FARMER HAPPY FARMER

# ಗ್ರೀನ್ ಫಾಸ್ಫರಸ್

ಸಸ್ಯಗಳಿಗೆ ಅಗತ್ಯವಾಗಿ ಬೇಕಿರುವ ಇನ್ನೊಂದು ಪ್ರಧಾನ ಪೋಷಕಾಂಶ ಫಾಸ್ಫರಸ್ (ರಂಜಕ). ರಂಜಕವು ಸಸ್ಯಗಳ ಜೈವಿಕ ಕ್ರಿಯೆಗಳಾದ ದ್ಯುತಿ ಸಂಶ್ಲೇಷಣೆ, ಸಸ್ಯಗಳು ಸದೃಢವಾಗಲು, ಹೂವು ಮತ್ತು ಕಾಯಿ ಮೂಡುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಜೈವಿಕ ಮೂಲದ ಪದಾರ್ಥಗಳಿಂದಲೇ ತಯಾರಿಸಿರುವ ಮಲ್ಟಿಪ್ಲೆಕ್ಸ್ ಗ್ರೀನ್ ಫಾಸ್ಫರಸ್ ಸಸ್ಯಗಳಿಗೆ ಅಗತ್ಯವಿರುವ ಪ್ರಮಾಣದಲ್ಲಿ ರಂಜಕ ಒದಗಿಸುವುದಲ್ಲದೆ ಭೂಮಿಯಲ್ಲಿ ಅಲಭ್ಯರೂಪದಲ್ಲಿರುವ ರಂಜಕವನ್ನು ಕರಗಿಸಿ ಸಸ್ಯಗಳಿಗೆ ಒದಗುವಂತೆ ಮಾಡುತ್ತದೆ.

**ಶಿಫಾರಸ್ಸು ಮಾಡಿರುವ ಪ್ರಮಾಣ**: ಬಿತ್ತನೆಗೆ ಅಥವಾ ಸಸಿನಾಟಿ ಮಾಡುವ ಮುನ್ನ ಅಥವಾ ಬುಡಗಳಿಗೆ ಮಣ್ಣುಕೊಡುವಾಗ ಪ್ರತಿ ಎಕರೆಗೆ 60 ಕೆ.ಜಿ ಮಲ್ಟಿಪ್ಲೆಕ್ಸ್ ಗ್ರೀನ್ ಫಾಸ್ಫರಸ್ ಭೂಮಿಗೆ ಕೊಡಬೇಕು. ಬಹುವಾರ್ಷಿಕ ಬೆಳೆಗಳಿಗೆ ಪ್ರತಿ ಮರಕ್ಕೆ 100 ರಿಂದ 150 ಗ್ರಾಂ ಕೊಡಬೇಕು. ಪ್ರತಿ ಆರು ತಿಂಗಳಿಗೊಮ್ಮೆಯಂತೆ ವರ್ಷಕ್ಕೆ ಎರಡು ಬಾರಿ ಕೊಡಬೇಕು.




## ಉಪಯೋಗಗಳು

- ಸಂಪೂರ್ಣ ಸಾವಯವ ವಸ್ತುಗಳಿಂದಲೇ ತಯಾರಿಸಿರುವ ಮತ್ತು ಉಪಕಾರಿ ಸೂಕ್ಷ್ಮಾಣುಜೀವಿಗಳನ್ನೊಳಗೊಂಡ ಉತ್ಪನ್ನ.
- ಮಣ್ಣಿನಲ್ಲಿ ಸಾವಯವ ಪದಾರ್ಥಗಳನ್ನು ಹೆಚ್ಚಿಸುತ್ತದೆ, ಮಣ್ಣಿನ ರಸಸಾರತೆ ಸಮತೋಲನದಲ್ಲಿಡುತ್ತದೆ, ಮಣ್ಣು ಗಟ್ಟಿಯಾಗಲು ಬಿಡುವುದಿಲ್ಲ ಮತ್ತು ಒಳಸುರಿಗಳು ವಿಷಕಾರಿಯಾಗದಂತೆ ತಡೆಯುತ್ತದೆ.
- ಮಲ್ಟಿಪ್ಲೆಕ್ಸ್ ಗ್ರೀನ್ ಫಾಸ್ಫರಸ್ ಬಳಸುವುದರಿಂದ ಸಸ್ಯಗಳು ಉತ್ತಮವಾಗಿ ಬೆಳೆಯುತ್ತವೆ. ಬೆಳೆಯ ಇಳುವರಿ ಹಾಗೂ ಗುಣಮಟ್ಟ ಹೆಚ್ಚುತ್ತದೆ.

*Farmers' first choice since 1974*

**ಮಲ್ಟಿಪ್ಲೆಕ್ಸ್ ವಾಹಿನಿ**
ಕೃಷಿ ದ್ವೈಮಾಸಿಕ
ಸಂಪುಟ–8 ಸಂಚಿಕೆ–4
ಅಕ್ಟೋಬರ್ – ನವೆಂಬರ್ 2023

ಗೌರವ ಸಂಪಾದಕರು
**ಡಾ. ಜಿ ಪಿ ಶೆಟ್ಟಿ**

ಪ್ರಧಾನ ಸಂಪಾದಕರು
**ಮಹೇಶ್ ಜಿ ಶೆಟ್ಟಿ**

ಸಂಪಾದಕ
**ನಾಗೇಶ್ ಕೆ ಎನ್**

ಸಂಪಾದಕೀಯ ಸಲಹಾ ಮಂಡಳಿ
**ಕಿಶೋರ್ ಎಂ ಶೆಟ್ಟಿ**
**ಡಾ. ಎಂ ನಾರಾಯಣ ಸ್ವಾಮಿ**
**ಡಾ. ನಿರಂಜನ್**
**ಎಸ್ ಕುಮಾರ್**

ಮುಖಪುಟ ಮತ್ತು
ಒಳಪುಟ ವಿನ್ಯಾಸ
**ಮೋಹನ್ ಪಿ**

ಕಛೇರಿ ವಿಳಾಸ
**ಮಲ್ಟಿಪ್ಲೆಕ್ಸ್ ವಾಹಿನಿ**
# 180, 1ನೇ ಮುಖ್ಯರಸ್ತೆ, ಮಹಾಲಕ್ಷ್ಮೀ ಬಡಾವಣೆ,
ಬೆಂಗಳೂರು, 560086
ಫೋ: 080: 23497464/ 23494406
23497360

ಪ್ರಿಯ ಬಂಧುಗಳೇ,

ಕೃಷಿಯಲ್ಲಿ ಪರ್ಯಾಯ ಪೋಷಕಾಂಶಗಳ ಬಳಕೆಯನ್ನು ಪ್ರೋತ್ಸಾಹಿಸಬೇಕೆಂದು ಕೇಂದ್ರ ಸರ್ಕಾರ ತಾಕೀತು ಮಾಡಿದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲೂ ಪ್ರಧಾನ ಪೋಷಕಾಂಶಗಳಾದ ಪಾರಂಪರಿಕ ಎನ್.ಪಿ.ಕೆ ಗೊಬ್ಬರಗಳಿಗೆ ಬದಲಾಗಿ ನ್ಯಾನೋ ಯೂರಿಯಾ, ರಾಸಾಯನಿಕ ನೇರ ಪೊಟ್ಯಾಶ್ ಬದಲಾಗಿ ಪೊಟ್ಯಾಶ್ ಡಿರೈವ್ಡ್ ಫ್ರಮ್ ಮೊಲ್ಯಾಸಿಸ್ ಹಾಗೂ ನ್ಯಾನೋ ಡಿ.ಎ.ಪಿ. ಬಳಕೆಯನ್ನು ಉತ್ತೇಜಿಸಲಾಗುತ್ತಿರುವುದು ಸಂತಸದ ವಿಷಯ.

ಸಾಮಾನ್ಯವಾಗಿ ಪಾರಂಪರಿಕ ರಸಗೊಬ್ಬರಗಳನ್ನು ಭೂಮಿಗೆ ಕೊಟ್ಟ ಪ್ರಮಾಣದಷ್ಟು ಬಳಕೆಯಾಗುವುದಿಲ್ಲ. ಪರಿಸರದ ಮೇಲೂ ದುಷ್ಪರಿಣಾಮ ಉಂಟುಮಾಡುತ್ತವೆ. ಅಲ್ಲದೆ ಎನ್.ಪಿ.ಕೆ ಗೊಬ್ಬರಗಳಿಗೆ ಕೇಂದ್ರ ಸರ್ಕಾರ ನೀಡುವ ಸಬ್ಸಿಡಿ ಮೊತ್ತ ಲಕ್ಷ ಕೋಟಿ ರೂಪಾಯಿಗಳಿಗೂ ಮಿಗಿಲಾಗಿದೆ. ಹಾಗಾಗಿ ಪರ್ಯಾಯ ಪ್ರಧಾನ ಪೋಷಕಾಂಶಗಳನ್ನು ಬಳಸುವುದರಿಂದ ಪರಿಸರದ ಮೇಲಿನ ದುಷ್ಪರಿಣಾಮವನ್ನು ತಪ್ಪಿಸಿದಂತಾಗುತ್ತದೆ. ರಸಗೊಬ್ಬರಗಳಿಗೆ ಸಬ್ಸಿಡಿ ರೂಪದಲ್ಲಿ ನೀಡುತ್ತಿರುವ ಲಕ್ಷಾಂತರ ಕೋಟಿ ಹಣವನ್ನು ದೇಶದ ಬೊಕ್ಕಸಕ್ಕೆ ಉಳಿತಾಯ ಮಾಡಿದಂತಾಗುತ್ತದೆ.

ವಿನೂತನ ಉತ್ಪನ್ನಗಳನ್ನು ಉತ್ಪಾದಿಸುವ ಸಂಸ್ಥೆಗಳು ಅವುಗಳ ಗುಣಮಟ್ಟ ಕಾಪಾಡಿಕೊಳ್ಳಬೇಕು. ಈಗಾಗಲೇ ಪ್ರತಿಷ್ಠಿತ ಸುದ್ದಿ ಸಂಸ್ಥೆ ಡೌನ್ ಟು ಅರ್ಥ್ ತನ್ನ ವರದಿಯಲ್ಲಿ ಹೇಳಿರುವಂತೆ ನ್ಯಾನೋ ಯೂರಿಯಾ ನಿರೀಕ್ಷಿತ ಫಲಿತಾಂಶ ಕೊಟ್ಟಿಲ್ಲ ! ಅಂದ ಮೇಲೆ ಆ ಬಗ್ಗೆ ಹೆಚ್ಚಿನ ಸಂಶೋಧನೆ, ಪ್ರಾತ್ಯಕ್ಷಿಕೆಗಳು ನಡೆಯಬೇಕು. ರೈತರಿಗೆ ಗುಣಮಟ್ಟದ ಉತ್ಪನ್ನಗಳು ತಲುಪುವುದನ್ನು ರಾಜ್ಯ ಸರ್ಕಾರ ಖಾತ್ರಿಗೊಳಿಸಬೇಕು.

**ಕೃಷಿ ಉತ್ಪನ್ನಗಳ ಗುಣಮಟ್ಟಕ್ಕೆ ಹೆಸರಾದ ಮಲ್ಟಿಪ್ಲೆಕ್ಸ್**

ನಮ್ಮ ಸಂಸ್ಥೆಯು ಪರ್ಯಾಯ ಪೋಷಕಾಂಶಗಳಾಗಿ ಮಲ್ಟಿಪ್ಲೆಕ್ಸ್ ಲಿಕ್ವಿಡ್ ಎನ್, ಗ್ರೀನ್ ಫಾಸ್ಪರಸ್ ಹಾಗೂ ಗ್ರೀನ್ ಪೊಟ್ಯಾಶ್ ಮೌಲ್ಯವರ್ಧಿತ ಉತ್ಪನ್ನಗಳನ್ನು ಉತ್ಪಾದಿಸಿ ಮಾರುಕಟ್ಟೆಗೆ ಪರಿಚಯಿಸಿದೆ. ಒಂದು ಲೀಟರ್ ಲಿಕ್ವಿಡ್ ಎನ್ ಒಂದು ಬ್ಯಾಗ್ ಯೂರಿಯಾಗೆ ಸರಿಸಮಾನವಾಗಿದೆ ಎಂಬುದು ರೈತರ ಅಭಿಪ್ರಾಯವಾಗಿದೆ. ಅದೇ ರೀತಿ ಸರ್ಕಾರ ಪ್ರೋತ್ಸಾಹಿಸುತ್ತಿರುವ ಪೊಟ್ಯಾಶ್ ಡಿರೈವ್ಡ್ ಫ್ರಮ್ ಮೊಲ್ಯಾಸಿಸ್ ನಮ್ಮ ಸಂಸ್ಥೆಯ ಮಲ್ಟಿಪ್ಲೆಕ್ಸ್ ಗ್ರೀನ್ ಪೊಟ್ಯಾಶ್ ಬ್ರಾಂಡ್ ಹೆಸರಿನಲ್ಲಿ ಲಭ್ಯವಿದೆ. ಇದೂ ಕೂಡಾ ಎಕರೆಗೆ 80 ಕೆ.ಜಿಯಂತೆ ಬಳಸಿ ಅತ್ಯುತ್ತಮ ಫಲಿತಾಂಶ ಕಂಡುಬಂದಿದೆ. ಅಂತೆಯೇ ಮಲ್ಟಿಪ್ಲೆಕ್ಸ್ ಗ್ರೀನ್ ಫಾಸ್ಪರಸ್ ಕೂಡಾ.

**ಅಗತ್ಯ ಪರಿಕರಗಳಿಗೆ ಕಾನೂನಿನ ತೊಡರು**

ರೈತರ ನಡುವೆ ಬಹಳ ಬೇಡಿಕೆ ಇರುವ, ಬೆಳೆಗಳಿಗೆ ಅಗತ್ಯವಿರುವ ಅನೇಕ ಉತ್ಪನ್ನಗಳಿಗೆ ಸರ್ಕಾರ ಪರವಾನಿಗೆ ನೀಡುವ ಪ್ರಕ್ರಿಯೆ ಬಹಳ ವಿಳಂಬವಾಗುತ್ತಿರುವುದು ಹೊಸದೇನಲ್ಲ. ಹಾಗಾಗಿ ನಾವು, ಕೃಷಿ ಪರಿಕರಗಳ ಉತ್ಪಾದಕ ಕಂಪನಿಗಳು ಪ್ರಧಾನ ಮಂತ್ರಿಗಳಿಗೆ ಈ ಬಗ್ಗೆ ಪತ್ರ ಬರೆದಿದ್ದೇವೆ. ಕೇಂದ್ರದಿಂದ ಉತ್ತರ ನಿರೀಕ್ಷೆಯಲ್ಲಿದ್ದೇವೆ. ಇಂಥಃ ಕಾನೂನು ತೊಡಕಿನಿಂದ ರೈತರಿಗೆ ಹಾಗೂ ಒಟ್ಟಾರೆ ಕೃಷಿ ಕ್ಷೇತ್ರಕ್ಕೆ ನಷ್ಟವೇ ಹೊರತು ಬೇರಾರಿಗೂ ಅಲ್ಲ. ಈ ಹಿನ್ನೆಲೆಯಲ್ಲಿ ರೈತರಿಗೆ ಅಗತ್ಯವಿರುವ ಯಾವುದೇ ಉತ್ಪನ್ನಗಳ ಬಗ್ಗೆ ಕಾನೂನು ರೀತ್ಯಾ ಸಮಸ್ಯೆಗಳ ತೊಡಕು ಬರದಂತೆ ನೋಡಿಕೊಂಡಲ್ಲಿ ರೈತರಿಗೆ ಹೆಚ್ಚು ಪ್ರಯೋಜನವಾಗಲಿದೆ. ಆ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಚಿಂತಿಸುವಂತಾಗಲಿ ಎಂಬುದು ನಮ್ಮ ಆಶಯ. ಕರ್ನಾಟಕ ರಾಜ್ಯದ ಕೃಷಿ ಇಲಾಖೆ ಇದರ ಬಗ್ಗೆ ಒಂದು ದೃಢ ನಿರ್ಧಾರ ಕೈಗೊಂಡಲ್ಲಿ, ಆ ತೀರ್ಮಾನ ಇಡೀ ದೇಶಕ್ಕೆ ಮಾದರಿ ಅಥವಾ ದಿಕ್ಸೂಚಿ ಆಗಬಲ್ಲದು. ಆ ಕೆಲಸ ಪ್ರಸ್ತುತ ರಾಜ್ಯ ಸರ್ಕಾರದಲ್ಲಿ ಆಗಲಿ ಎಂದು ಆಶಿಸುತ್ತೇವೆ.

ನಿಮ್ಮ

GPShetty

**ಮಹೇಶ್ ಜಿ. ಶೆಟ್ಟಿ**
ಪ್ರಧಾನ ಸಂಪಾದಕರು

## ಒಳಪುಟಗಳಲ್ಲಿ...


| | |
|---|---|
| ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸಂವಾದ ಹಾಗೂ ಸಂದರ್ಶನ | 6 |
| ಆಲೂಗಡ್ಡೆ ಸುಧಾರಿತ ಬೇಸಾಯ ಕ್ರಮಗಳು | 11 |
| ದೇಶದ ಆಹಾರ ಭದ್ರತೆಯಿಂದ ರೈತರ ಆದಾಯ ಭದ್ರತೆವರೆಗೆ – ಡಾ. ಎಂ. ಎಸ್. ಸ್ವಾಮಿನಾಥನ್ | 16 |
| ಬದಲಾವಣೆ ಜಗದ ನಿಯಮ | 18 |
| ಕೈಕೊಟ್ಟ ಮುಂಗಾರು, ಕಂಗಾಲಾದ ರೈತ, ಬರಗಾಲ ಘೋಷಿಸಿದ ಸರ್ಕಾರ | 20 |
| ಕಲ್ಲಂಗಡಿ ಸುಧಾರಿತ ಬೇಸಾಯ | 24 |
| ಭತ್ತ ಬೆಳೆಯಲ್ಲಿ ಬಿ.ಪಿ.ಹೆಚ್ ಕೀಟ ನಿರ್ವಹಣೆ | 28 |
| ಅಡಿಕೆ ಬೆಳೆಯಲ್ಲಿ ಪೋಷಕಾಂಶಗಳು ಹಾಗೂ ತೇವಾಂಶ ನಿರ್ವಹಣೆ | 30 |
| ತುಂಗಭದ್ರಾ ಅಚ್ಚುಕಟ್ಟು ರೈತರಿಗೆ ನವೆಂಬರ್ 30 ರ ತನಕ ನೀರು | 32 |
| ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳು ಜಾಗತೀಕರಣದಲ್ಲಿ ಮುಂದಿವೆ | 33 |



ಮಲ್ಟಿಪ್ಲೆಕ್ಸ್ ವಾಹಿನಿ ಚಂದಾದಾರರಾಗಲು ಬಯಸುವವರು
ದೂ. 080 23214013 ಅಥವಾ
ಈಮೇಲ್ **karnataka@multiplexgroup.com**
ಮುಖಾಂತರ ನಮ್ಮನ್ನು ಸಂಪರ್ಕಿಸಬಹುದು.

**ಚಂದಾ ವಿವರ**

| | |
|---|---|
| ಎರಡು ವರ್ಷಕ್ಕೆ (12 ಸಂಚಿಕೆಗಳು) | : 400/– |
| ಆರು ವರ್ಷಕ್ಕೆ (36 ಸಂಚಿಕೆಗಳು) | : 1200/– |



# ಮಾರ್ಗ ತೋರಿದ
# ಮಹಾಚೇತನ

**ಡಾ. ಜಿ. ಪಿ. ಶೆಟ್ಟಿ**

# ಕೃಷಿ ಸಚಿವ

# ಎನ್. ಚಲುವರಾಯಸ್ವಾಮಿ

## ಮಾಧ್ಯಮ ಸಂವಾದ ಹಾಗೂ ಸಂದರ್ಶನ

**ರಾಜ್ಯದ ರೈತರು ಸರ್ಕಾರದಿಂದ ಸಹಾಯಧನದಡಿ ನೀಡಲಾಗುತ್ತಿರುವ ಸವಲತ್ತುಗಳ ಸದುಪಯೋಗ ಪಡೆದುಕೊಳ್ಳುವುದು. ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ಪಶು ಸಂಗೋಪನೆ, ತೋಟಗಾರಿಕೆ, ಅರಣ್ಯ, ರೇಷ್ಮೆ ಕೃಷಿ ಇತ್ಯಾದಿ ಅಳವಡಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು.**

ಕರ್ನಾಟಕ ರಾಜ್ಯ ಸರ್ಕಾರದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಆಗಸ್ಟ್ 31, 2023 ರಂದು ಬೆಂಗಳೂರು ಪ್ರೆಸ್ ಕ್ಲಬ್ ಆಯೋಜಿಸಿದ್ದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಸರ್ಕಾರ ಬಂದು ಈಗಾಗಲೇ ನೂರು ದಿವಸ ಆಗಿದೆ, ಪ್ರಾಯಶಃ ನಮ್ಮ ಸರ್ಕಾರ ಇಡೀ ರಾಷ್ಟ್ರದ ಗಮನ ಸೆಳೆದಿದೆ. ರಾಜ್ಯದ ಪ್ರತಿ ಮನೆಗೆ ತಲುಪುವ ಕಾರ್ಯಕ್ರಮಗಳನ್ನು ರಾಹುಲ್ ಗಾಂಧಿ, ಮಲ್ಲಿಕಾರ್ಜುನ್ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಜಾರಿಗೊಳಿಸಿದ್ದೇವೆ. ಸ್ವಾತಂತ್ರ್ಯ ನಂತರ ಏಕಕಾಲದಲ್ಲಿ ಇಷ್ಟು ದೊಡ್ಡ ಗಾತ್ರದ ಐದು ಗ್ಯಾರಂಟಿಗಳನ್ನು ಯಾವುದೇ ರಾಜ್ಯ ಸರ್ಕಾರ ಜಾರಿಗೊಳಿಸಿಲ್ಲ. ಮುಂದೆ ಇಂಥದೊಂದು ಆಗುತ್ತೋ ಇಲ್ಲವೋ ಗೊತ್ತಿಲ್ಲ, ಪ್ರಸಕ್ತ ವರ್ಷ ಗ್ಯಾರಂಟಿ ಯೋಜನೆಗಳಿಗೆ 35 ಸಾವಿರ ಕೋಟಿಗಳು ಬೇಕಿದೆ. ಮುಂಬರುವ ವರ್ಷದಿಂದ ಪ್ರತಿ ವರ್ಷ 56 ಸಾವಿರ ಕೋಟಿ ಅಗತ್ಯವಿದೆ. ಅದನ್ನು ಒದಗಿಸುವ ಕೆಲಸ ನಮ್ಮ ಸರ್ಕಾರ ಮಾಡಿಯೇ ತೀರುತ್ತದೆ ಎಂಬ ಭರವಸೆಯ ಮಾತುಗಳನ್ನಾಡಿದರು.

ರೈತರಿಗೆ ಇದೀಗ 5 ಲಕ್ಷದವರೆಗೆ ಬಡ್ಡಿರಹಿತ ಸಾಲ ಒದಗಿಸುತ್ತಿದ್ದೇವೆ. 15 ಲಕ್ಷದವರೆಗೆ 3% ಬಡ್ಡಿಗೆ ರೈತರಿಗೆ ಸಾಲ ಕೊಡುವ ವ್ಯವಸ್ಥೆ ಇದೆ. ಹಾಲಿನ ಬೆಲೆ ಹೆಚ್ಚು ಮಾಡಿರುವಷ್ಟು ಪ್ರಮಾಣ ನೇರ ರೈತರಿಗೇ ತಲುಪಿಸುವ ತೀರ್ಮಾನ ಮುಖ್ಯಮಂತ್ರಿಗಳು ಪ್ರಕಟಿಸಿದ್ದಾರೆ. ಇದು ರೈತರಿಗೆ ಅನುಕೂಲವಾಗಲಿದೆ ಎಂದರು.

ಮಂಡ್ಯ ಜಿಲ್ಲೆಯಲ್ಲಿ ಬಹುದೊಡ್ಡ ನಾಯಕರ ದಂಡೇ ಇತ್ತು. ಆದರೆ ಇದೇ ಮೊದಲಿಗೆ ಮಂಡ್ಯದಿಂದ ಬಂದ ನನಗೆ ಕೃಷಿ ಸಚಿವ ಸ್ಥಾನ ಒದಗಿಬಂದಿದೆ. ಆ ಬಗ್ಗೆ ನನಗೆ ಖುಷಿ ಇದೆ. ಇದೀಗ ಕೃಷಿ ಭಾಗ್ಯ ಯೋಜನೆ ಮುಂದುವರೆಸುತ್ತಿದ್ದೇವೆ ಎಂದರು.

ಪ್ರಸ್ತುತ ಹಂಗಾಮಿನಲ್ಲಿ ಮಳೆ ಹಿನ್ನೆಡೆಯಾಗಿದ್ರೂ ರಾಜ್ಯದಲ್ಲಿ ಶೇಕಡಾ 79 ರಷ್ಟು ಬಿತ್ತನೆ ಆಗಿದೆ. ಚಿತ್ರದುರ್ಗದಲ್ಲಿ ಶೇಕಡಾ 92 ರಷ್ಟು ಬಿತ್ತನೆ ಆಗಿದೆ. ಕಳೆದ ಮೂರು ತಿಂಗಳಲ್ಲಿ ರೈತರಿಗೆ ಯಾವುದೇ ಕೊರತೆ ಆಗದಂತೆ ನೋಡಿಕೊಂಡಿದ್ದೇವೆ.

ಗ್ರಾಮೀಣ ಪ್ರದೇಶದ ಎಫ್.ಪಿ.ಒ ಗಳ ಜೊತೆಗೆ ರೈತರು ಒಟ್ಟಾಗಿದ್ದಾರೆ. ನಂದಿನಿ ಮಾದರಿಯಲ್ಲಿ ಇತರೆ ಬೆಳೆಗಳಿಗೂ ಒಂದು ಸಾಂಸ್ಥಿಕ ಖರೀದಿ ವ್ಯವಸ್ಥೆ ಮಾಡುವ ಯೋಚನೆ ಇದೆ. ಮೌಲ್ಯಾಧಾರಿತ ಉತ್ಪನ್ನಗಳ ಬಗ್ಗೆ ಒತ್ತು ನೀಡುತ್ತೇವೆ ಎಂದು ತಿಳಿಸಿದರು.

ಚಿತ್ರದುರ್ಗದಲ್ಲಿ 4 ಎಕರೆ ಕೃಷಿ ಭೂಮಿಯಲ್ಲಿ ಸಮಗ್ರ ಕೃಷಿ ಮಾಡುತ್ತಿರುವ ರೈತನ ಬಗ್ಗೆ ಉಲ್ಲೇಖಿಸಿದ್ದು ವಿಶೇಷವಾಗಿತ್ತು. ಅವರ ಬಗ್ಗೆ ಮಾತನಾಡುತ್ತಾ ಮಳೆ ಬೀಳಲಿ ಬೀಳದೆ ಇರಲಿ ಯಾವುದೇ ಸಮಸ್ಯೆ ಬಂದರೂ ಆ ರೈತ ತನ್ನ ಜೀವನ ಸಮತೋಲನದಲ್ಲಿರುವ ಹಾಗೆ ವ್ಯವಸ್ಥೆ ಮಾಡಿಕೊಂಡಿದ್ದಾನೆ. ಪ್ರತಿ ವರ್ಷ ಖರ್ಚು ಕಳೆದು 10 ಲಕ್ಷ ಉಳಿಸುತ್ತಿರುವುದಾಗಿ ಹೇಳಿದರು. ಅಲ್ಲಿ ಅವರು ಬೆಳೆದ ಬೆಳೆಗೆ ಅವರೇ ಎಂ.ಆರ್.ಪಿ ಫಿಕ್ಸ್ ಮಾಡುತ್ತಾರೆ. ರಸಾಯನಿಕ ಬಳಸುವುದಿಲ್ಲ. ಉದಾಹರಣೆಗೆ ಟೊಮ್ಯಾಟೋ 40 ರೂಪಾಯಿ ಎಂದು ಮೊದಲೇ ಫಿಕ್ಸ್ ಮಾಡಿರುತ್ತಾರೆ, ಮಾರುಕಟ್ಟೆಯಲ್ಲಿ ಎಷ್ಟೇ ಬೆಲೆ ಇದ್ದರೂ ಇವರು ಮಾತ್ರ 40 ರೂಪಾಯಿಗೇ ಮಾರಾಟ ಮಾಡುವುದು. ಮಾರುಕಟ್ಟೆಯಲ್ಲಿ ಅದಕ್ಕಿಂತ ಕಡಿಮೆ ಬೆಲೆಗೆ ಟೊಮ್ಯಾಟೋ ಸಿಗುತ್ತಿದ್ದರೂ ಗ್ರಾಹಕರು ಇವರು ಬೆಳೆದ ಟೊಮ್ಯಾಟೋ ಖರೀದಿಸುತ್ತಿದ್ದಾರೆ. ಅದಕ್ಕೆ ಕಾರಣ ಬೆಳೆಯ ಗುಣಮಟ್ಟ. ಇದು ರೈತ ಮತ್ತು ಗ್ರಾಹಕರ ನಡುವೆ ಏರ್ಪಾಡಾಗಿರುವ ಬಹುದೊಡ್ಡ ಸಂಬಂಧ ಹಾಗೂ ನಂಬಿಕೆ.

ಆ ತೋಟದಲ್ಲಿ 20 ಹಸುಗಳನ್ನು ಸಾಕಲಾಗಿದೆ. ಹಸುಗಳ ಸಗಣಿ ಗಂಜಲ ಇಡೀ ಹೊಲಕ್ಕೆ ಗೊಬ್ಬರವಾಗಿ ಮಿಕ್ಕ ಗೊಬ್ಬರ 1.5 ಲಕ್ಷ ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳುವ ಮೂಲಕ ಸುಸ್ಥಿರ–ಸಮಗ್ರ ಕೃಷಿ ಮಾದರಿಯನ್ನು ಸಚಿವರು ಶ್ಲಾಘಿಸಿದರು.



# ಮಲ್ಟಿಪ್ಲೆಕ್ಸ್ ವಾಹಿನಿಗೆ ನೀಡಿದ ಸಂದರ್ಶನ



**ವಾಹಿನಿ:** ಕೃಷಿ ಕೂಲಿಗಳು ಸಿಗದೆ ಇರುವ ಈ ಹೊತ್ತಿನಲ್ಲಿ ಹೊಸ ಹೊಸ ಕೃಷಿ ತಂತ್ರಜ್ಞಾನದಿಂದ ಕೃಷಿ ಚಟುವಟಿಕೆಗಳನ್ನು ಸುಲಭ ಮಾಡಬಹುದಾದ ಕ್ರಮಗಳ ಬಗ್ಗೆ ಸರ್ಕಾರದಲ್ಲಿ ಚಿಂತನೆ ನಡೆದಿದೆಯೇ ? ನಡೆದಿದ್ದಲ್ಲಿ ವಿವರಿಸಿ.

**ಎನ್. ಚಲುವರಾಯಸ್ವಾಮಿ:** ರಾಜ್ಯದಲ್ಲಿ ಎಲ್ಲಾ ವರ್ಗದ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಕೃಷಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ, ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ ಹಾಗೂ ಹೆಚ್ಚಿನ ಇಳುವರಿ ಪಡೆಯಲು ನೆರವಾಗುವಂತೆ ಸಹಕಾರಿಯಾಗಲು ಕೃಷಿ ಯಾಂತ್ರೀಕರಣ ಯೋಜನೆಯಡಿ ರೈತರಿಗೆ 45 **PTO HP** ವರೆಗಿನ ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಜೊತೆಗೆ ಭೂಮಿ ಸಿದ್ಧತೆ ಉಪಕರಣಗಳು, ಬಿತ್ತನೆ/ನಾಟಿ ಮಾಡುವ ಉಪಕರಣಗಳು, ಶಕ್ತಿ ಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಶಕ್ತಿ ಚಾಲಿತ ಅಂತರ ಬೇಸಾಯ ಉಪಕರಣಗಳು, ಕೊಯ್ಲು ಮತ್ತು ಸಂಸ್ಕರಣಾ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ಡೀಸೆಲ್ ಪಂಪ್‌ಸೆಟ್‌ಗಳು ಇತ್ಯಾದಿ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ಒದಗಿಸಲಾಗುತ್ತಿದೆ. ಹೀಗೆ ಉಳುಮೆಯಿಂದ ಕೊಯ್ಲಿನವರೆಗೆ ಹಾಗೂ ಕೊಯ್ಲು ನಂತರ ಉಪಯುಕ್ತವಾಗುವ ವಿವಿಧ ನಮೂನೆಯ ಕೃಷಿ ಉಪಕರಣಗಳನ್ನು ಸಹಾಯಧನದಡಿ ರೈತರಿಗೆ ಒದಗಿಸಲಾಗುತ್ತಿದೆ. ಇದರಿಂದ ಹೊಸ ತಂತ್ರಜ್ಞಾನದ ವಿನೂತನ ಕೃಷಿ ಯಾಂತ್ರೀಕರಣಗಳನ್ನು ಸಹ ನೀಡಲಾಗುತ್ತಿದೆ.

ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ರೈತರಿಗೆ ಶೇಕಡಾ 50 ರಷ್ಟು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇಕಡಾ 90 ಗರಿಷ್ಟ ಒಂದು ಲಕ್ಷದ ಮಿತಿಯೊಳಗೆ ಸಹಾಯಧನವನ್ನು ನೀಡಲಾಗುತ್ತಿದೆ. ಟ್ರಾಕ್ಟರ್‌ಗಳಿಗೆ (45 ಪಿ.ಟಿ.ಒ ಹೆಚ್.ಪಿವರೆಗೆ) ಸಾಮಾನ್ಯ ರೈತರಿಗೆ ರೂ.0.75 ಲಕ್ಷ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ ಶೇ 90 ರ ಗರಿಷ್ಟ ರೂ 3.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.

**ವಾಹಿನಿ:** ಈ ಹಿಂದಿನ ಸರ್ಕಾರ ಡೈರೆಕ್ಟರೇಟ್ ಆಫ್ ಸೆಕೆಂಡರಿ ಅಗ್ರಿಕಲ್ಚರ್ ಸ್ಥಾಪಿಸಿತ್ತು, ಅದಕ್ಕೂ ಮುನ್ನ ಸಾವಯವ ಕೃಷಿ ಮಿಷನ್ ಇತ್ತು ಅವುಗಳ ಚಟುವಟಿಕೆಗಳೇನು? ನಿಮ್ಮ ಸರ್ಕಾರ ಅವುಗಳನ್ನು ಮುಂದುವರೆಸುತ್ತಿದೆಯೇ ?

**ಎನ್.ಚಲುವರಾಯಸ್ವಾಮಿ:** ಸಾವಯವ ಕೃಷಿಗೆ ಗರಿಷ್ಠ ಒತ್ತು ನೀಡುವ ಹಿನ್ನೆಲೆಯಲ್ಲಿ 2008-09 ರಿಂದ 2010-11ರವರೆಗೆ ಸಾವಯವ ಕೃಷಿ ಮಿಷನ್ ಕಾರ್ಯಕ್ರಮವನ್ನು ಮಾಡಲಾಗಿರುತ್ತದೆ.

ರಾಜ್ಯದಾದ್ಯಂತ 82,899 ರೈತರು ಸುಮಾರು 75,845 ಹೆಕ್ಟೇರ್ ಪ್ರದೇಶವನ್ನು ಸಾವಯವ ಕೃಷಿ ಪದ್ಧತಿಗೆ ಅಳವಡಿಸಿದ್ದಾರೆ.

ಯೋಜನೆಯಡಿ ರೈತರಿಗೆ ಹಸಿರೆಲೆ ಗೊಬ್ಬರ ಬೀಜ/ ನಾಟಿ ತಳಿ ಬೀಜ, ಎರೆಹುಳು ತೊಟ್ಟಿ ನಿರ್ಮಾಣ, ಜೈವಿಕ ಅನಿಲ ಸ್ಥಾವರ, ದೇಶೀ ಗೋ ತಳಿಗಳ ವಿತರಣೆ, ಮೇವಿನ ಸಂಪನ್ಮೂಲ ಅಭಿವೃದ್ಧಿ, ಜೇನು ಕೃಷಿ, ಬಯೋಡೈಜೆಸ್ಟರ್ ನಿರ್ಮಾಣ, ನೆಲ-ಜಲ ಸಂರಕ್ಷಣೆಗಾಗಿ ಕೃಷಿ ಹೊಂಡ, ಇಂಗು ಗುಂಡಿ, ಸಮಪಾತಳಿ ಬದುಗಳ ನಿರ್ಮಾಣ, ದವಸ-ಧಾನ್ಯ ಸಂಗ್ರಹಣೆಗೆ ಪಣತ, ಅಜೋಲ ತೊಟ್ಟಿ, ಕೊಟ್ಟಿಗೆ ಬಲವರ್ಧನೆ/ನಿರ್ಮಾಣ, ಫಲಾನುಭವಿಗಳಿಗೆ ತರಬೇತಿ ಮತ್ತು ಅಧ್ಯಯನ ಪ್ರವಾಸ ಇತ್ಯಾದಿ ಕಾರ್ಯಕ್ರಮ/ಘಟಕಗಳಿಗೆ ನೆರವು ನೀಡಲಾಗಿರುತ್ತದೆ.

**ವಾಹಿನಿ:** ರೈತರ ಮಕ್ಕಳ ವಲಸೆ ತಪ್ಪಿಸುವುದು ಮತ್ತವರನ್ನು ಇದ್ದೂರುಗಳಲ್ಲಿಯೇ ಕೃಷಿಯಲ್ಲಿ ತೊಡಗಿಸಲು ಪ್ರೋತ್ಸಾಹ ನೀಡುವ ಯಾವುದಾದರೂ ಯೋಜನೆ ಅಥವಾ ಚಿಂತನೆ ಸರ್ಕಾರದ ಮುಂದೆ ಇದೆಯೇ?

**ಎನ್.ಚಲುವರಾಯಸ್ವಾಮಿ:** **ಸಮಗ್ರ ಕೃಷಿ ಪದ್ಧತಿ** - ಉತ್ತಮ ಬೇಸಾಯ ಪದ್ಧತಿಗಳು ಹಾಗೂ ನೂತನ ತಾಂತ್ರಿಕತೆಗಳೊಂದಿಗೆ ಲಭ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಬಳಸಿಕೊಂಡು ಕೃಷಿಯೊಂದಿಗೆ ಪೂರಕ ಕೃಷಿ ಚಟುವಟಿಕೆಗಳನ್ನು (ತೋಟಗಾರಿಕೆ, ಅರಣ್ಯ ಕೃಷಿ, ಪಶುಸಂಗೋಪನೆ, ಕುರಿ/ಮೇಕೆ/ಮೀನು ಸಾಕಾಣಿಕೆ, ಜೇನು ಸಾಕಾಣಿಕೆ ಇತ್ಯಾದಿ) ಕೈಗೊಳ್ಳುವುದರ ಮೂಲಕ ರೈತರ ಆದಾಯ ಹೆಚ್ಚಿಸುವುದು.

**ಸೆಕೆಂಡರಿ ಕೃಷಿ ಚಟುವಟಿಕೆ** - ಕೃಷಿಯಲ್ಲಿ ಉತ್ಪಾದನೆಯೊಂದಿಗೆ ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ರೈತರು ತಾವು ಬೆಳೆದ ಉತ್ಪನ್ನಗಳನ್ನು ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಮೂಲಕ ಸೆಕೆಂಡರಿ ಕೃಷಿ ಚಟುವಟಿಕೆಗಳನ್ನು ಕೈಗೊಂಡು ತಮ್ಮ ಉತ್ಪನ್ನಗಳನ್ನು ಮಧ್ಯವರ್ತಿಗಳಿಲ್ಲದೆ ಮಾರಾಟ ಮಾಡಲು ಹಾಗೂ ಉದ್ಯಮಿಗಳಾಗಿ ಯಶಸ್ವಿಯಾಗಲು ಉತ್ತೇಜನ ನೀಡಲಾಗುತ್ತಿದೆ.

**ಕೃಷಿ ನವೋದ್ಯಮ** - ಕೃಷಿ ಕ್ಷೇತ್ರದಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸಲು ಹಾಗೂ ಗ್ರಾಮೀಣ ಭಾಗದ ಯುವಕರಿಗೆ ಉದ್ಯೋಗ ಸೃಜನೆಗಾಗಿ ಕೃಷಿಯಲ್ಲಿನ ನೂತನ ತಾಂತ್ರಿಕತೆಗಳು ಹಾಗೂ ನವೀನ ಪರಿಕಲ್ಪನೆಗಳ ವಾಣಿಜ್ಯೀಕರಣವನ್ನು ಉತ್ತೇಜಿಸಲು ಕೃಷಿ ನವೋದ್ಯಮ ಕಾರ್ಯಕ್ರಮವನ್ನು 2023-24 ನೇ ಸಾಲಿನಲ್ಲಿ ಅನುಷ್ಠಾನ ಮಾಡಲಾಗುತ್ತಿದೆ.

**ವಾಹಿನಿ:** ರೈತರು ಬೆಳೆದ ಬೆಳೆಗೆ ಲಾಭದಾಯಕ ಬೆಲೆ ಬೇಕೆಂಬುದು ಹಲವು ದಶಕಗಳ ಕೂಗು.. ಇದೀಗ ಡಾ. ಎಂ.ಎಸ್.ಸ್ವಾಮಿನಾಥನ್ ವರದಿಯಲ್ಲಿ ಉಲ್ಲೇಖಿಸಿರುವಂತೆ ಸಿ2+50% ಗಾಗಿ ರೈತರು ಬೇಡಿಕೆ ಇಟ್ಟಿದ್ದಾರೆ. ಆ ಬೇಡಿಕೆಯನ್ನು ಪೂರೈಸಿದ್ದೀರಾ?

**ಎನ್.ಚಲುವರಾಯಸ್ವಾಮಿ:** ಕೇಂದ್ರ ಸರ್ಕಾರವು ಈಗ ಬೆಳೆಯಲಾಗುವ 17 ತೋಟಗಾರಿಕಾ ಬೆಳೆಗಳಿಗೆ ಉತ್ಪಾದನಾ ವೆಚ್ಚವನ್ನು ಲೆಕ್ಕಾಚಾರಹಾಕಿ ಮುಂಗಾರು ಹಾಗೂ ಹಿಂಗಾರು ಹಂಗಾಮಿಗೆ ಮುಂಚಿತವಾಗಿ ಬೆಂಬಲ ಬೆಲೆಯನ್ನು ಘೋಷಿಸುತ್ತದೆ. ಉತ್ಪಾದನಾ ವೆಚ್ಚ ಲೆಕ್ಕಾಚಾರ ಹಾಕುವಲ್ಲಿ ಕೇಂದ್ರ ಸರ್ಕಾರದ ಸಿಎಸಿಪಿ ಸಂಸ್ಥೆಯು ಭರಿಸಿದ ವೆಚ್ಚ ಹಾಗೂ ಕುಟುಂಬ ಶ್ರಮ ಒಟ್ಟಾರೆ ಎ2 ಹಾಗೂ ಕುಟುಂಬದ ಶ್ರಮ ಎಫ್.ಎಲ್ ಒಟ್ಟಾರೆ ಎ2+ಎಫ್.ಎಲ್ ವೆಚ್ಚದ ಮೇಲೆ ಶೇಕಡಾ 50 ರಷ್ಟು ಲಾಭಾಂಶ ಸೇರಿಸಿ ಬೆಂಬಲ ಬೆಲೆಯನ್ನು ಘೋಷಿಸುತ್ತದೆ.

ಡಾ. ಎಂ. ಎಸ್. ಸ್ವಾಮಿನಾಥನ್ ಅವರು ರೈತರಿಗೆ ಲಾಭದಾಯಕ ಬೆಲೆ ದೊರಕಿಸಿಕೊಡುವಲ್ಲಿ ರೈತರು ಹೊಂದಿದ ಭೂಮಿಯ ಮೇಲಿನ ಗೇಣಿ ಕೂಡಾ ಪರಿಗಣಿಸಿ ಉತ್ಪಾದನಾ ವೆಚ್ಚ ಲೆಕ್ಕಾಚಾರಹಾಕಬೇಕೆಂಬುದಾಗಿದೆ. ರಾಜ್ಯದಲ್ಲಿ ಪ್ರಸ್ತುತ ಭೂ-ಗೇಣಿ ವ್ಯವಸ್ಥೆ ಇಲ್ಲವಾಗಿದ್ದು, ಅಂತಹ ಸಂದರ್ಭದಲ್ಲಿ ಒಟ್ಟು ಆದಾಯದ ಶೇಕಡಾ 25 ರಷ್ಟನ್ನು ಭೂ-ಗೇಣಿಯಾಗಿ ಪರಿಗಣಿಸಿ ರೈತರ ಉತ್ಪಾದನಾ ವೆಚ್ಚಕ್ಕೆ ಸೇರಿಸಬೇಕೆಂಬುದಾಗಿದೆ. ಇದನ್ನು ಸಿ-2 ವೆಚ್ಚವೆಂದು ಪರಿಗಣಿಸಲಾಗುತ್ತದೆ. ಅಂದರೆ ಭರಿಸಿದ ವೆಚ್ಚ, ಕುಟುಂಬ ಶ್ರಮ ಹಾಗೂ ಭೂ-ಗೇಣಿಗಳನ್ನು ಇದು ಒಳಗೊಂಡಿರುತ್ತದೆ.

ಕೇಂದ್ರ ಸರ್ಕಾರವು ಬೆಂಬಲ ಬೆಲೆ ಘೋಷಿಸುವಲ್ಲಿ ಭರಿಸಿದ ವೆಚ್ಚ ಹಾಗೂ ಕುಟುಂಬ ಶ್ರಮ ಅಂದರೆ ವೆಚ್ಚ ಎ2+ಎಫ್.ಎಲ್ ರ ಮೇಲೆ ಶೇಕಡಾ 50 ರ ಲಾಭಾಂಶ ಸೇರಿಸಿ ಬೆಂಬಲ ಬೆಲೆ ಘೋಷಿಸುವ ಮಾದರಿಯಲ್ಲಿ ಭರಿಸಿದ ವೆಚ್ಚ, ಕುಟುಂಬ ಶ್ರಮ ಹಾಗೂ ಭೂ-ಗೇಣಿಯನ್ನೊಳಗೊಂಡ ವೆಚ್ಚ ಸಿ2 ರ ಮೇಲೆ ಶೇಕಡಾ 50 ರಷ್ಟನ್ನು ಲಾಭಾಂಶ ಸೇರಿಸಿ ಬೆಂಬಲ ಬೆಲೆ ಘೋಷಿಸಬೇಕೆನ್ನುವುದು ಡಾ.ಎಂ. ಎಸ್ ಸ್ವಾಮಿನಾಥನ್ ಅವರ ಅಭಿಪ್ರಾಯವಾಗಿದೆ. ಇದರಂತೆ ಕೃಷಿ ಬೆಲೆ ಆಯೋಗವು ಕೂಡಾ ತನ್ನ ಪ್ರತಿ ವರ್ಷದ ವಾರ್ಷಿಕ ವರದಿಯಲ್ಲಿ ಕೇಂದ್ರ ಸರ್ಕಾರವು ಬೆಂಬಲ ಬೆಲೆ ಘೋಷಿಸುವಲ್ಲಿ ವೆಚ್ಚ ಸಿ 2 ರ ಮೇಲೆ ಶೇಕಡಾ 50 ರಷ್ಟು ಲಾಭಾಂಶ ಸೇರಿಸಿ ಕನಿಷ್ಟ ಬೆಂಬಲ ಬೆಲೆಯನ್ನು ಘೋಷಿಸಬೇಕೆಂದು ಶಿಫಾರಸ್ಸು ಮಾಡಿರುತ್ತದೆ.

ಇದರಿಂದಾಗಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ರೈತರ ಆದಾಯ ದ್ವಿಗುಣಗೊಳಿಸಬೇಕೆನ್ನುವ ಯೋಜನೆಗೆ ವೆಚ್ಚ ಸಿ2 ಮೇಲೆ ಶೇಕಡಾ 50 ರಷ್ಟು ಲಾಭಾಂಶ ಸೇರಿಸಿ ಬೆಂಬಲ ಬೆಲೆಯನ್ನು ಘೋಷಿಸಲು ಪರಿಗಣಿಸಿದಲ್ಲಿ ಸದರಿ ಯೋಜನೆ ಸಾಕಾರಗೊಳ್ಳಲಿದೆ.



**ವಾಹಿನಿ:** ಕೃಷಿಯಲ್ಲಿ ಪರ್ಯಾಯ ಪೋಷಕಾಂಶಗಳನ್ನು (ವಿಶೇಷವಾಗಿ ಪ್ರಧಾನ ಪೊಷಕಾಂಶಗಳು) ಪ್ರೋತ್ಸಾಹಿಸುವ ಬಗೆಗೆ ನಿಮ್ಮ ಸರ್ಕಾರದ ಕಾರ್ಯಕ್ರಮಗಳೇನು ವಿವರಿಸಿ?


**ಎನ್.ಚಲುವರಾಯಸ್ವಾಮಿ:** ಕೃಷಿಯಲ್ಲಿ ಪ್ರಧಾನ ಪೋಷಕಾಂಶಗಳಿಗೆ ಪರ್ಯಾಯ ಪೋಷಕಾಂಶಗಳನ್ನು ಪ್ರೋತ್ಸಾಹಿಸಲು ಇಲಾಖೆಯು ಈ ಕೆಳಕಂಡಂತೆ ಕ್ರಮವಹಿಸುತ್ತಿದೆ.

- ಇಲಾಖೆಯ ಸಾವಯವ ಇಂಗಾಲ ಯೋಜನೆ ಮತ್ತು ಆಹಾರ ಭದ್ರತಾ ಯೋಜನೆಯಡಿ ಸಾವಯವ ಗೊಬ್ಬರಗಳಾದ ಸಿಟಿ ಕಾಂಪೋಸ್ಟ್, ಎರೆಹುಳು ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ (PROM), ಹಸಿರೆಲೆ ಗೊಬ್ಬರದ ಬಿತ್ತನೆ ಬೀಜಗಳು, ಜೈವಿಕ ಗೊಬ್ಬರಗಳಾದ ರೈಝೋಬಿಯಂ, ಅಜಟೋಬ್ಯಾಕ್ಟರ್, ಅಝೋಸ್ಪಿರುಲಮ್, ಎನ್.ಪಿ.ಕೆ ಕನ್ಸೋರ್ಷಿಯಾಗಳನ್ನು ಸಹಾಯಧನದಲ್ಲಿ ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ವಿತರಿಸಲಾಗುತ್ತಿದೆ.
- ರಾಸಾಯನಿಕ ನೇರ ಪೊಟ್ಯಾಶ್ ರಸಗೊಬ್ಬರದ ಬದಲಾಗಿ ಪೊಟ್ಯಾಷ್ ಡಿರೈವ್ಡ್ ಫ್ರಮ್ ಮೊಲ್ಯಾಸಿಲ್ ಅನ್ನು ಉಪಯೋಗಿಸಲು ಉತ್ತೇಜಿಸಲಾಗುತ್ತಿದೆ.
- ನ್ಯಾನೋ ಗೊಬ್ಬರಗಳಾದ ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿ ರಸಗೊಬ್ಬರಗಳನ್ನು ಪರ್ಯಾಯ ಗೊಬ್ಬರಗಳಾಗಿ ಬಳಸಲು ಕೇಂದ್ರ ಸರ್ಕಾರದ ನಿರ್ದೇಶನದಂತೆ ಉತ್ತೇಜಿಸಲಾಗುತ್ತಿದೆ.
- ಕೃಷಿ ಇಲಾಖೆಯು ಇಫ್ಕೋ ಸಂಸ್ಥೆಯ ಸಹಯೋಗದೊಂದಿಗೆ ವ್ಯಾಪಕವಾದ ತರಬೇತಿ ಕಾರ್ಯಕ್ರಮಗಳು/ ಕಾರ್ಯಾಗಾರಗಳು ಮತ್ತು ಪ್ರಾತ್ಯಕ್ಷಿಕೆಗಳನ್ನು ನಡೆಸುವ ಮೂಲಕ ರೈತರಲ್ಲಿ ನ್ಯಾನೋ ಯೂರಿಯಾ, ನ್ಯಾನೋ ಡಿಎಪಿ ಬಳಕೆಯನ್ನು ಪ್ರೋತ್ಸಾಹಿಸುತ್ತಿದೆ. ಮುಂದುವರೆದು, ಕರ್ನಾಟಕ ಸರ್ಕಾರವು ನ್ಯಾನೋ ಯೂರಿಯಾ ಸ್ಥಾವರ ಸ್ಥಾಪನೆಗಾಗಿ ದೇವನಹಳ್ಳಿಯ ಹೈಟೆಕ್ ಏರೋಸ್ಪೇಸ್ ಪಾರ್ಕ್‌ನಲ್ಲಿ ಕೆಐಎಡಿಬಿ ಮೂಲಕ ಭೂಮಿಯನ್ನು ಮುಂಜೂರು ಮಾಡಿದ್ದು ಸದರಿ ಸ್ಥಳದಲ್ಲಿ ನ್ಯಾನೋ ಡಿಎಪಿ ಮತ್ತು ಯೂರಿಯಾ ಉತ್ಪಾದನಾ ಘಟಕವು ನಿರ್ಮಾಣ ಹಂತದಲ್ಲಿದೆ.

**ವಾಹಿನಿ:** ಒಟ್ಟಾರೆ ರಾಜ್ಯದ ರೈತರಿಗೆ ತಮ್ಮ ಸಲಹೆ ಹಾಗೂ ಮಾರ್ಗದರ್ಶನವೇನು?

**ಎನ್.ಚಲುವರಾಯಸ್ವಾಮಿ:** ರಾಜ್ಯದ ರೈತರು ಸರ್ಕಾರದಿಂದ ಸಹಾಯಧನದಡಿ ನೀಡಲಾಗುತ್ತಿರುವ ಸವಲತ್ತುಗಳ ಸದುಪಯೋಗ ಪಡೆದುಕೊಳ್ಳುವುದು. ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ಪಶು ಸಂಗೋಪನೆ, ತೋಟಗಾರಿಕೆ, ಅರಣ್ಯ, ರೇಷ್ಮೆ ಕೃಷಿ ಇತ್ಯಾದಿ ಅಳವಡಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು. ಮಳೆ ನೀರು ಕೊರತೆ ಇರುವ ಪ್ರದೇಶಗಳಲ್ಲಿ ಹತ್ತಿರದ ಕೃಷಿ ವಿಶ್ವವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ಮತ್ತು ಸಂಬಂಧಿತ ಇಲಾಖೆಗಳಿಂದ ಪರ್ಯಾಯ ಬೆಳೆ ಪದ್ದತಿಗಳ ಮಾಹಿತಿ ಪಡೆದು ಸೂಕ್ತ ಕ್ರಮ ಕೈಗೊಳ್ಳುವುದು. ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುವುದು.

ಕೃಷಿ ಇಲಾಖೆಯ ಯೋಜನೆಗಳ/ ಕಾರ್ಯಕ್ರಮಗಳ ಬಗ್ಗೆ ಸಂದೇಹ/ಸಮಸ್ಯೆಗಳಿಗೆ ನೂತನವಾಗಿ ಸೃಜಿಸಲಾದ ರೈತರ ಕರೆ ಕೇಂದ್ರ ಸಂಖ್ಯೆ **1800-425-3553** ಸಂಖ್ಯೆಗೆ ಕರೆ ಮಾಡುವ ಮೂಲಕ ಕುಂದುಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು.

# ಮಲ್ಟಿಪ್ಲೆಕ್ಸ್
# ಅನ್ನಪೂರ್ಣ

## 100% ಸಾವಯವ ಗೊಬ್ಬರ




ಮಲ್ಟಿಪ್ಲೆಕ್ಸ್ ಅನ್ನಪೂರ್ಣ ಸಂಪೂರ್ಣ ಕಳಿತ, ಸತ್ವಭರಿತ ಸಾವಯವ ಗೊಬ್ಬರ. ಟ್ರೈಕೋಡರ್ಮಾ, ಸಾರಜನಕ ಸ್ಥಿರೀಕರಿಸುವ ಹಾಗೂ ರಂಜಕ ಕರಗಿಸುವ ಲಕ್ಷಾಂತರ ಏಕಾಣುಜೀವಿಗಳಿವೆ. ಇದರೊಂದಿಗೆ ಜೈವಿಕ ಕೀಟನಾಶಕಗಳಿವೆ. ಬೇವು, ಹರಳು, ಹೊಂಗೆ ಹಿಂಡಿ ಹಾಗೂ ಎರೆಹುಳು ಗೊಬ್ಬರ ಅನ್ನಪೂರ್ಣದಲ್ಲಿ ಮಿಶ್ರಿತವಾಗಿದೆ. ಕಳೆ ಬೀಜಗಳಿಂದ ಮುಕ್ತವಾದ, ಅಧಿಕ ಹ್ಯೂಮಸ್ ಇರುವ ಈ ಉತ್ಪನ್ನದಲ್ಲಿ ಯಾವುದೇ ವಿಷಕಾರಿ ಅಂಶವಿಲ್ಲ, ಸಂಪೂರ್ಣ ನಿಸರ್ಗ ಸ್ನೇಹಿ.

# ಆಲೂಗಡ್ಡೆ – ಸುಧಾರಿತ ಬೇಸಾಯ ಕ್ರಮಗಳು





**ಗಡ್ಡೆಗಳನ್ನು ಮಣ್ಣಿನಿಂದ ತೆಗೆದ ನಂತರ ರಾಶಿಯಂತೆ ಶೇಕರಣೆ ಮಾಡದೆ ನೆಲದ ಮೇಳೆ ಮರಳನ್ನು ಹರಡಿ ಅದರ ಮೇಲೆ ತೆಳುವಾಗಿ ಹರಡಿ ಗಾಳಿಯಾಡಲು ಬಿಡಬೇಕು. ಹೀಗೆ ಮಾಡುವುದರಿಂದ ಗಡ್ಡೆಯ ಮೇಲಿನ ಸಿಪ್ಪೆ ಹದಕ್ಕೆ ಬರಲು ಸಹಾಯಕವಾಗುತ್ತದೆ.**

ಡಾ.ಎಂ. ನಾರಾಯಣಸ್ವಾಮಿ

ಆಲೂಗಡ್ಡೆ ಪ್ರಮುಖವಾದ ತರಕಾರಿ ಬೆಳೆ. ವರ್ಷದಲ್ಲಿ ಎರಡು ಬಾರಿ ಬೆಳೆ ತೆಗೆಯಬಹುದು. ದಕ್ಷಿಣ ಅಮೆರಿಕಾ ಮೂಲದ ಆಲೂಗಡ್ಡೆ ವಿಶ್ವದಾದ್ಯಂತ ಬೆಳೆಯಲಾಗುತ್ತಿದೆ. ಕರ್ನಾಟಕ ರಾಜ್ಯದಲ್ಲೂ ಆಲೂಗಡ್ಡೆ ಒಂದು ಪ್ರಮುಖವಾದ ವಾಣಿಜ್ಯ ಬೆಳೆಯಾಗಿದೆ. ಮಳೆಗಾಲದ ಪ್ರಾರಂಭದಲ್ಲಿ ಹಾಸನ, ಚಿಕ್ಕಮಗಳೂರು, ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ಚಳಿಗಾಲದಲ್ಲಿ ರಾಜ್ಯದ ದಕ್ಷಿಣ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ರಾಮನಗರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ.

ಭಾರತದಲ್ಲಿ ಆಲೂಗಡ್ಡೆ ಉತ್ಪಾದನೆ 368 ಮಿಲಿಯನ್ ಟನ್‌ಗಳಷ್ಟಿದ್ದು ಪ್ರಮುಖವಾಗಿ ಉತ್ಪಾದನೆ ಮಾಡುವ ರಾಜ್ಯಗಳೆಂದರೆ ಉತ್ತರ ಪ್ರದೇಶ, ಕರ್ನಾಟಕ, ಗುಜರಾತ್, ಹರಿಯಾಣ, ಪಂಜಾಬ್, ಪಶ್ಚಿಮ ಬಂಗಾಳ, ಬಿಹಾರ, ಅಸಾಂ, ಜಾರ್ಖಂಡ್ ಮತ್ತು ಮಧ್ಯಪ್ರದೇಶ. ಈ ರಾಜ್ಯಗಳಲ್ಲಿ ಬೆಳೆಯಲಾಗುವ ಆಲೂಗಡ್ಡೆ ಇಡೀ ದೇಶದಾದ್ಯಂತ ಮಾರಾಟವಾಗುತ್ತದೆ.

ಆಲೂಗಡ್ಡೆಯಲ್ಲಿ ಅಧಿಕ ಪ್ರಮಾಣದಲ್ಲಿ ಅನ್ನಾಂಗಗಳು, ಪೋಷಕಾಂಶಗಳು, ಆಂಟಿಆಕ್ಸಿಡೆಂಟ್‌ಗಳು ಮತ್ತು ಅಧಿಕ ಪ್ರಮಾಣದಲ್ಲಿ ನಾರಿನಂಶ ಹೊಂದಿದೆ. ಆಲೂಗಡ್ಡೆಯನ್ನು ಜೀವ ಉಳಿಸುವ ತರಕಾರಿ ಎಂದೂ ಹೇಳಲಾಗುತ್ತದೆ. ಇದರಲ್ಲಿ ಅನ್ನಾಂಗ ಸಿ ಅಧಿಕ ಪ್ರಮಾಣದಲ್ಲಿದ್ದು ಅನ್ನಾಂಗ ಸಿ ನ್ಯೂನತೆಯ ರೋಗವನ್ನು ನಿಯಂತ್ರಿಸುವ ಶಕ್ತಿ ಹೊಂದಿರುವುದಲ್ಲದೆ ಹೆಚ್ಚಿನ ಪೋಷಕಾಂಶಗಳನ್ನು ಹೊಂದಿದೆ. ಇದು ಮಾನವನ ದೇಹದಲ್ಲಿ ಎಲೆಕ್ಟ್ರೋಲೈಟ್ ಆಗಿ ಕಾರ್ಯ ನಿರ್ವಹಿಸುವುದರಿಂದ ಹೃದಯದ ಸ್ನಾಯುಗಳ ಕೆಲಸ ಮತ್ತು ನರಗಳ ಆರೋಗ್ಯ ಮತ್ತು ಕಾರ್ಯ ವೈಕರಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆಲೂಗಡ್ಡೆಯನ್ನು ದಿನನಿತ್ಯದ ಆಹಾರವಾಗಿ ಸಾಂಬಾರು, ಪಲ್ಯ, ಕುರುಕುತಿಂಡೀಗಳ ತಯಾರಿಕೆಯಲ್ಲೂ ಬಳಸಲಾಗುತ್ತಿದೆ.

**ಮಣ್ಣು:** ಆಲೂಗಡ್ಡೆಯನ್ನು ಎಲ್ಲಾ ವಿಧದ ಮಣ್ಣಿನಲ್ಲಿ ಬೆಳೆಯಬಹುದಾದರೂ ಹೆಚ್ಚು ನೀರು ನಿಲ್ಲುವ ಅಥವಾ ನೀರನ್ನು ತಡೆದಿಡುವ ಮಣ್ಣು ಸೂಕ್ತವಲ್ಲ. ಹೆಚ್ಚಿನ ಸಾವಯವ ಅಂಶ ಹೊಂದಿರುವ ಮರಳು ಮಿಶ್ರಿತ ಕೆಂಪು ಮಣ್ಣು ಇದಕ್ಕೆ ಬಹಳ ಸೂಕ್ತ. ಅತಿ ಹೆಚ್ಚು ಆಮ್ಲೀಯ ಅಥವಾ ಪ್ರತ್ಯಾಮ್ಲೀಯ ಮಣ್ಣಿನಲ್ಲಿ ಉತ್ತಮ ಬೆಳೆ ಮತ್ತು ಇಳುವರಿ ಪಡೆಯುವುದು ಕಷ್ಟ. ಉತ್ತಮ ಬೆಳೆ ತೆಗೆಯಲು ಮಣ್ಣಿನ ರಸಸಾರತೆ 5 ರಿಂದ 6.5 ಇದ್ದರೆ ಉತ್ತಮ.

**ವಾತಾವರಣ:** ಮಳೆ ಆಶ್ರಯದಲ್ಲಿ ಬೆಳೆಯುವುದಾದಲ್ಲಿ ಮುಂಗಾರಿನ ಮೇ–ಜೂನ್ ತಿಂಗಳಿನಲ್ಲಿ ಬಿತ್ತನೆ ಮಾಡುವುದರಿಂದ ಸಸ್ಯ ಬೆಳವಣಿಗೆಯ ಹಂತದಲ್ಲಿ ಬರುವ ಅಂಗಮಾರಿ ರೋಗದಿಂದ ಮುಕ್ತವಾಗಿಡಬಹುದಲ್ಲದೆ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿ. ಜೂನ್ ನಂತರ ಬಿತ್ತನೆ ಮಾಡಿದರೆ ರೋಗ ಉಲ್ಬಣಗೊಳ್ಳುವ ಸಾಧ್ಯತೆ ಹೆಚ್ಚು. ನೀರಿನ ಅನುಕೂಲತೆ ಇದ್ದಲ್ಲಿ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾಗಿ ಡಿಸೆಂಬರ್ ತಿಂಗಳಿನವರೆಗೆ ಬಿತ್ತನೆ ಮಾಡುವುದರಿಂದ ಉತ್ತಮ ಇಳುವರಿ ಪಡೆಯಬಹುದು. ಚಳಿಗಾಲದ ಆರಂಭ ಮತ್ತು ಚಳಿಗಾಲದಲ್ಲಿ ಬೆಳೆಯುವುದರಿಂದ ಸಾಮಾನ್ಯವಾಗಿ ಈ ಕಾಲದಲ್ಲಿ ಮಣ್ಣಿನ ಉಷ್ಣಾಂಶ 16–24 ಸೆಲ್ಸಿಯಸ್ ಇರುತ್ತದೆ. ಇಂಥಃ ವಾತಾವರಣದಲ್ಲಿ ಉತ್ತಮ ಇಳುವರಿ ಪಡೆಯಬಹುದು. ಒಂದು ವೇಳೆ ಹೆಚ್ಚಿನ ಉಷ್ಣಾಂಶವಿದ್ದರೆ ಇಳುವರಿ ಕುಂಟಿತವಾಗುವುದಲ್ಲದೆ ಗುಣಮಟ್ಟದ ಗಡ್ಡೆ ತೆಗೆಯಲು ಸಾಧ್ಯವಾಗುವುದಿಲ್ಲ.

**ಬೀಜದ ಗಡ್ಡೆಯ ಪ್ರಮಾಣ:** ನೀರಾವರಿ ಆಶ್ರಯದಲ್ಲಿ 600–800 ಕೆ.ಜಿ, ಮಳೆಯಾಶ್ರಯದಲ್ಲಿ 400–500 ಕೆ.ಜಿ ಗಡ್ಡೆ ಬೇಕಾಗುತ್ತದೆ. ಒಂದೊಮ್ಮೆ ಪೂರ್ಣ ಗಡ್ಡೆ ನಾಟಿಮಾಡುವುದಾದಲ್ಲಿ, ಕೆಲವೊಮ್ಮೆ ಮಾರುಕಟ್ಟೆಯಲ್ಲಿ ದಪ್ಪ ಗಡ್ಡೆಗಳು ಲಭ್ಯವಿಲ್ಲದೆ ಇದ್ದಲ್ಲಿ ಸಣ್ಣ ಸಣ್ಣ ಗೋಲಿ ಗಡ್ಡೆಗಳು ಲಭ್ಯವಿದ್ದರೆ ಶಿಫಾರಸ್ಸಿನ ಪ್ರಮಾಣಕ್ಕಿಂತ ಶೇಕಡಾ 25–30 ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುತ್ತದೆ.

**ಗಡ್ಡೆಯ ಆಯ್ಕೆ:** ಸಂಶೋಧನಾ ಕೇಂದ್ರಗಳ ಶಿಫಾರಸ್ಸಿನಂತೆ ಗುಣಮಟ್ಟದ ಆರೋಗ್ಯಕರವಾದ ಹಾಗೂ ಮೊಳಕೆ ಒಡೆಯಲು ಸೂಕ್ತವಾದ ಹಂತದ ಬೀಜದ ಗಡ್ಡೆಗಳನ್ನು ಪ್ರಮಾಣೀಕೃತ ಮಾರಾಟಗಾರರ ಬಳಿ ನಿಮ್ಮ ಪ್ರದೇಶಕ್ಕೆ ಹೊಂದಿಕೆ ಆಗುವ ತಳಿಗಳನ್ನೇ ಆಯ್ಕೆ ಮಾಡಿಕೊಳ್ಳುವುದು ಜಾಣತನ.

**ಬೀಜೋಪಚಾರ:** ಬಿತ್ತನೆಗೆ ಗಡ್ಡೆಗಳನ್ನು ಆಯ್ಕೆ ಮಾಡಿಕೊಂಡ ನಂತರ ಬಿತ್ತನೆಗೆ ಮುನ್ನ ಮುಂದೆ ಬರಬಹುದಾದ ರೋಗಗಳು ಮತ್ತು ಮಣ್ಣಿನಲ್ಲಿರುವ ರೋಗಕಾರಕಗಳನ್ನು ನಿಯಂತ್ರಿಸಲು ಬೀಜೋಪಚಾರ ಅಗತ್ಯ. ಬೀಜೋಪಚಾರ ಮಾಡುವುದರಿಂದ ಕೇವಲ ರೋಗ ನಿಯಂತ್ರಣ ಆಗುವುದಲ್ಲದೆ ಬೀಜದ ಗಡ್ಡೆಗಳ ಮೊಳಕೆಯ ವೇಗ ಮತ್ತು ಪ್ರಮಾಣವನ್ನು ಹೆಚ್ಚಿಸುತ್ತದೆ.

ಒಂದು ವೇಳೆ ದೊಡ್ಡ ಗಾತ್ರದ ಗಡ್ಡೆಗಳನ್ನು ಖರೀದಿಸಿದ್ದಲ್ಲಿ ಮೊಳಕೆಯ ಕಣ್ಣುಗಳಿಗೆ ಹಾನಿಯಾಗದಂತೆ, ಮೊಳಕೆಯ ಕಣ್ಣುಗಳಿದ್ದು 35–40 ಗ್ರಾಂ ತೂಕವಿರುವಂತೆ ಫಾರ್ಮಲಿನ್ ಅಥವಾ ಸ್ಪಿರಿಟ್ ನಲ್ಲಿ ಉಪಚರಿಸಿದ ಚಾಕುವಿನಿಂದ ಕತ್ತರಿಸಿ ನಂತರ ಬೀಜೋಪಚಾರಕ್ಕೆ ಬಳಸಬೇಕು.

ಒಂದು ಎಕರೆ ಜಾಗಕ್ಕೆ ಬೇಕಾದ ಸಣ್ಣ ಗಾತ್ರದ ಗಡ್ಡೆಗಳು ಅಥವಾ ಕತ್ತರಿಸಿದ ಗಡ್ಡೆಯ ತುಂಡುಗಳನ್ನು ಒಂದು ಕೆ.ಜಿ. ಚಿರಾಯು ಉತ್ಪನ್ನದಲ್ಲಿ ಉಪಚರಿಸಿ ನಂತರ ನಾಟಿಗೆ ಬಳಸಬೇಕು.

**ಬೀಜೋಪಚಾರದ ವಿಧಾನ:** ಶಿಫಾರಸ್ಸಿನ ಪ್ರಮಾಣದ ಬೀಜೋಪಚಾರಕ ಮಲ್ಟಿಪ್ಲೆಕ್ಸ್ ಚಿರಾಯು ವನ್ನು 200 ಲೀ ನೀರಿನಲ್ಲಿ ಕರಗಿಸಿಕೊಂಡು ಕತ್ತರಿಸಿದ ಅಥವಾ ಆಯ್ಕೆಮಾಡಿಕೊಂಡ ಸಣ್ಣ ಗಾತ್ರದ ಗಡ್ಡೆಗಳನ್ನು ಬೀಜೋಪಚಾರದ ದ್ರಾವಣದಲ್ಲಿ 20–25 ನಿಮಿಷ ನೆನೆಸಿ ನಂತರ 15–20 ನಿಮಿಷ ನೆರಳಿನಲ್ಲಿ ಒಣಗಿಸಿ ಬಿತ್ತನೆಗೆ ಬಳಸಬೇಕು.

## ■ ಭೂಮಿ ತಯಾರಿಕೆ ಅಥವಾ ಮಣ್ಣು ಹದಮಾಡುವುದು

ಬಿತ್ತನೆಗೆ ಆಯ್ಕೆಮಾಡಿಕೊಂಡ ಭೂಮಿಯಲ್ಲಿ ಮಣ್ಣಿನ ಮಾದರಿಯನ್ನು ಸಂಗ್ರಹಿಸಿ ಮಣ್ಣನ್ನು ಪರೀಕ್ಷಿಸಿ ಮಣ್ಣಿನ ಫಲವತ್ತತೆ ಅರಿಯಬೇಕು. ಈ ರೀತಿ ಮಣ್ಣಿನ ಪರೀಕ್ಷೆ ಮಾಡುವುದರಿಂದ ಉತ್ತಮ ಇಳುವರಿ ತೆಗೆಯಲು ಸಹಾಯಕವಾಗುವುದಲ್ಲದೆ ಬೆಳೆಯ ವೆಚ್ಚವನ್ನು ವೈಜ್ಞಾನಿಕವಾಗಿ ನಿರ್ವಹಸಲು ಸಹಕಾರಿ.



ಮಣ್ಣು ಪರೀಕ್ಷೆಯ ನಂತರ ಅವಶ್ಯಕತೆಗನುಗುಣವಾಗಿ ಭೂಮಿಯನ್ನು ಮೂರ್ನಾಲ್ಕು ಬಾರಿ ಉಳುಮೆ ಮಾಡಿ ಭೂಮಿ ತಯಾರಿಸಿಕೊಳ್ಳಬೇಕು. ಕೊನೆಯ ಹಂತದಲ್ಲಿ ಮಣ್ಣು ಹದ ಮಾಡುವ ಸಮಯದಲ್ಲಿ ಮಣ್ಣಿನ ಪರೀಕ್ಷೆಯಲ್ಲಿ ದೃಡಪಟ್ಟ ಮಣ್ಣಿನ ಸಾವಯವ ಇಂಗಾಲವನ್ನು ಆಧರಿಸಿ ಎಕರೆಗೆ 8–10 ಟನ್ ಸಾವಯವ ಗೊಬ್ಬರ ಅಥವಾ ಶಿಫಾರಸ್ಸಿನ ಅನ್ನಪೂರ್ಣ, ನಿಸರ್ಗ, ಸೇಫ್ ರೂಟ್, ಮೆಟರೈಜಿಯಂ ಮಣ್ಣಿಗೆ ಸೇರಿಸಿ ಉಳುಮೆ ಮಾಡಿಕೊಳ್ಳಬೇಕು. ಮಳೆ ಆಶ್ರಯದಲ್ಲಾದಲ್ಲಿ ಸಾಲಿನಿಂದ ಸಾಲಿಗೆ 45 ಸೆಂ.ಮೀ, ನೀರಾವರಿ ಆದಲ್ಲಿ 60–75 ಸೆಂ.ಮೀ ಅಂತರದಲ್ಲಿ ಗಡ್ಡೆಗಳಾನ್ನು ನಾಟಿಮಾಡಲು ಸಾಲುಗಳನ್ನು ಮಾಡಿಕೊಳ್ಳಬೇಕು. ಇಷ್ಟಾದ ಮೇಲೆ ಬೀಜೋಪಚಾರ ಮಾಡಿದ ಗಡ್ಡೆಗಳನ್ನು ನಾಟಿಮಾಡಬೇಕು.

**ನೀರಿನ ಅರೈಕೆ:** ಮಣ್ಣಿನ ಗುಣಧರ್ಮ ಆದರಿಸಿ ಹೆಚ್ಚು ತೇವಾಂಶವಿಲ್ಲದಂತೆ ಅಥವಾ ನೀರು ಕಡಿಮೆಯೂ ಆಗದಂತೆ ಅಗತ್ಯಕ್ಕನುಗುಣವಾಗಿ ನೀರು ಹಾಯಿಸಬೇಕು. ನೀರು ಹಾಯಿಸುವ ಸಮಯದಲ್ಲಿ ಭೂಮಿಯಲ್ಲಿ ಹೆಚ್ಚಿನ ಪ್ರಮಾಣದ ನೀರು ನಿಲ್ಲದಂತೆ ನಿಗಾವಹಿಸಬೇಕು.

## ■ ಪೋಷಕಾಂಶಗಳ ನಿರ್ವಹಣೆ

### ಸಾವಯವ ಗೊಬ್ಬರ

ಕೊಟ್ಟಿಗೆ ಗೊಬ್ಬರ 10 ಟನ್ ಮತ್ತು ಅನ್ನಪೂರ್ಣ 120 ಕೆ.ಜಿ. ಒಂದು ವೇಳೆ ಕೊಟ್ಟಿಗೆ ಗೊಬ್ಬರ ಲಭ್ಯವಿಲ್ಲವಾದಲ್ಲಿ ಜೈವಿಕ ಸಾವಯವ ಗೊಬ್ಬರ ಅನ್ನಪೂರ್ಣ 500 ಕೆ.ಜಿ ಯಿಂದ 1000 ಕೆ.ಜಿ ಕೊಡಬೇಕು. ಜೊತೆಗೆ ಮಣ್ಣಿನಿಂದ ಬರಬಹುದಾದ ರೋಗ ಮತ್ತು ಕೀಟ

ನಿಯಂತ್ರಿಸಲು ಮಲ್ಟಿಪ್ಲೆಕ್ಸ್ ನಿಸರ್ಗ 5 ಕೆ.ಜಿ., ಮಲ್ಟಿಪ್ಲೆಕ್ಸ್ ಸೇಫ್ ರೂಟ್ 5 ಕೆ.ಜಿ ಮತ್ತು ಮೆಟರೈಜಿಯಂ 5 ಕೆ.ಜಿ., ನವಜೀವನ್ ಜಿ 10 ಕೆ.ಜಿ ಕೊಡಬೇಕು.

**ರಾಸಾಯನಿಕ ಗೊಬ್ಬರ**

| | |
|---|---|
| ಮಲ್ಟಿಪ್ಲೆಕ್ಸ್ ಗ್ರೀನ್ ಫಾಸ್ಪರಸ್ | 83 ಕೆ.ಜಿ |
| ಡಿ.ಎ.ಪಿ | 43 ಕೆ.ಜಿ |
| ಮಲ್ಟಿಪ್ಲೆಕ್ಸ್ ಗ್ರೀನ್ ಪೊಟ್ಯಾಶ್ | 100 ಕೆ.ಜಿ |
| ಎಂ.ಓ.ಪಿ | 42 ಕೆ.ಜಿ |

**ಸೂಚನೆ:** ಶಿಫಾರಸ್ಸಿನ ಯೂರಿಯಾ ಹೊರತುಪಡಿಸಿ ಶಿಫಾರಸ್ಸಿನ ಸಾವಯವ ಗೊಬ್ಬರಗಳು, ಮಲ್ಟಿಪ್ಲೆಕ್ಸ್ ಗ್ರೀನ್ ಫಾಸ್ಪರಸ್, ಗ್ರೀನ್ ಪೊಟ್ಯಾಶ್, 25 ಕೆ.ಜಿ ಸಮೃದ್ಧಿ ಮತ್ತು 5 ಕೆ.ಜಿ ಸೃಷ್ಟಿಯನ್ನು ಗಡ್ಡೆ ನಾಟಿ ಮಾಡುವ ಮುನ್ನ ಮಣ್ಣಿಗೆ ಸೇರಿಸಬೇಕು.

ಶೇಕಡಾ 50 ರಷ್ಟು ಯೂರಿಯಾ, ಡಿಎಪಿ, ಎಂ.ಪ್.ಪಿ, ಸಮೃದ್ಧಿ ಮತ್ತು ಸೃಷ್ಟಿ ಗೊಬ್ಬರಗಳನ್ನು ಮಿಶ್ರಣ ಮಾಡಿಕೊಂಡು ಸಸಿಯ ಬುಡಗಳಿಗೆ ಮಣ್ಣುಕೊಡುವ (ಮಣ್ಣು ಏರಾಕುವ) ಸಮಯದಲ್ಲಿ ಕೊಡಬೇಕು.

ಉಳಿದಿರುವ ಶೇಕಡಾ 50 ರ ಯೂರಿಯಾವನ್ನು ಮೇಲುಗೊಬ್ಬರವಾಗಿ ಬುಡಕ್ಕೆ ಮಣ್ಣು ಏರಿಸಿದ 15 ದಿನಗಳ ನಂತರ ಕೊಡಬೇಕು.

ಹನಿನೀರಾವರಿ ಪದ್ದತಿಯಲಿ ಕೃಷಿ ಮಾಡುತ್ತಿದ್ದಲ್ಲಿ ಶಿಫಾರಸ್ಸಿನ ಗೊಬ್ಬರಗಳನ್ನು ಕೊಡಬೇಕಾದ ಹಂತಗಳು.

ಕೊನೆಯ ಹಂತದ ಭೂಮಿ ಹದಮಾಡುವ ಸಮಯದಲ್ಲಿ ಶಿಫಾರಸ್ಸಿನ ಸಾವಯವ ಗೊಬ್ಬರಗಳು ಮಲ್ಟಿಪ್ಲೆಕ್ಸ್ ಗ್ರೀನ್ ಫಾಸ್ಪರಸ್, ಮಲ್ಟಿಪ್ಲೆಕ್ಸ್ ಗ್ರೀನ್ ಪೊಟ್ಯಾಶ್ ಹಾಗೂ ಪೂರ್ಣ ಪ್ರಮಾಣದ ಸಮೃದ್ಧಿ , ಜ಼ಿಂಕ್ ಹೈ ಅಥವಾ ಸೃಷ್ಟಿಯನ್ನು ಮಣ್ಣಿಗೆ ಸೇರಿಸಿ ಗಡ್ಡೆ ನಾಟಿಮಾಡಲು ಹದಮಾಡಿಕೊಳ್ಳಬೇಕು.

## ಗಡ್ಡೆ ನಾಟಿ ಮಾಡಿದ ಮೂರು ದಿನಗಳ ನಂತರ

ಪ್ಲಾಂಟ್ ಏಯ್ಡ್ 250 ಗ್ರಾಂ, ಜೀವ್‌ರಸ್ 1 ಲೀಟರ್ ಮತ್ತು ಬಯೋ ಜೋಡಿ 1.5 ಕೆ.ಜಿಯನ್ನು 200 ಲೀ ನೀರಿನಲ್ಲಿ ಮಿಶ್ರಣ ಮಾಡಿ ಒಂದು ಎಕರೆ ಭೂಮಿಗೆ ಹಾಯಿಸಬೇಕು. ಹೀಗೆ ಮಾಡುವುದರಿಂದ ಗಡ್ಡೆಗಳ ಮೊಳಕೆ ಪ್ರಮಾಣ ಏಕರೂಪದಲ್ಲಾಗುತ್ತದೆ, ಗಡ್ಡೆಗಳಿಗೆ ಬರಬಹುದಾದ ರೋಗಗಳನ್ನು ನಿಯಂತ್ರಿಸಬಹುದು ಹಾಗೂ ಮೊಳಕೆ, ಬೇರು ಬೆಳವಣಿಗೆ ಚನ್ನಾಗಿ ಆಗುತ್ತದೆ.

**ಗಡ್ಡೆ ನಾಟಿಮಾಡಿದ 5 ನೇ ದಿನದಿಂದ 25 ನೇ ದಿನದವರೆಗೆ** (5,9,13,17,21,25 ದಿನಗಳಲ್ಲಿ) ಪ್ರತಿ ನಾಲ್ಕು ದಿನಕ್ಕೊಮ್ಮೆ 19:19:19 – 4 ಕೆ.ಜಿ ಮತ್ತು ಯೂರಿಯಾ 3.5 ಕೆ.ಜಿ ಕೊಡಬೇಕು. ಹಾಗೆಯೇ ಗಡ್ಡೆ ನಾಟಿ ಮಾಡಿದ 17 ಮತ್ತು 25 ನೇ ದಿನ ಮಲ್ಟಿಪ್ಲೆಕ್ಸ್ ಪ್ರೋಕಿಸಾನ್ 250 ಗ್ರಾಂ ಮತ್ತು ಮೆಗ್ನೀಷಿಯಂ ಸಲ್ಫೇಟ್ 1 ಕೆ.ಜಿ 19:19:19 ಮತ್ತು ಯೂರಿಯಾ ಜೊತೆಗೆ ಕೊಡಬೇಕು.

**ಗಡ್ಡೆ ನಾಟಿಮಾಡಿದ 28 ನೇ ದಿನದಿಂದ 40 ನೇ ದಿನದವರೆಗೆ** ಪ್ರತಿ ಎರಡು ದಿನಕ್ಕೊಮ್ಮೆ (28,30,32,34,36,38,40 ದಿನಗಳಲ್ಲಿ) 19:19:19–3.75 ಕೆ.ಜಿ, ಯೂರಿಯಾ 3 ಕೆ.ಜಿ 13:0:45– 3 ಕೆ.ಜಿ ಹಾಗೂ 28, 32, 38 ನೇ ದಿವಸ ಶಿಫಾರಸ್ಸಿನ ಗೊಬ್ಬರದ ಜೊತೆಯಲ್ಲಿ ಮೆಗ್ನೀಷಿಯಂ ಸಲ್ಫೇಟ್ 2 ಕೆ.ಜಿ ಮತ್ತು ಜ಼ಿಂಕ್ ಹೈ ಪೌಡರ್ 500 ಗ್ರಾಂ ಕೊಡಬೇಕು.

**ಗಡ್ಡೆ ನಾಟಿ ಮಾಡಿದ 42 ನೇ ದಿನದಿಂದ 60 ನೇ ದಿನದವರೆಗೆ** (42,44,46,48,50,52,54,56,58,60 ದಿನಗಳಲ್ಲಿ) 13:0:45– 2.25 ಕೆ.ಜಿ., ಯೂರಿಯಾ 3.75 ಕೆ.ಜಿ., ಮೆಗ್ನೀಷಿಯಂ ಸಲ್ಫೇಟ್ 2 ಕೆ.ಜಿ ಜೊತೆಗೆ 46,54 ಮತ್ತು 60 ನೇ ದಿನದಲ್ಲಿ 500 ಗ್ರಾಂ ಸೃಷ್ಟಿ– ಜ಼ಿಂಕ್ ಹೈ ಪೌಡರ್ ಕೊಡಬೇಕು.

## ಕಳೆ ನಿಯಂತ್ರಣ



ಆಲೂಗಡ್ಡೆ ಬೆಳೆಗೆ, ಬೆಳೆ ಆದಾರಿತ ಯಾವುದೇ ರಸಾಯನಿಕ ಕಳೆನಾಶಕವಿಲ್ಲದೆ ಇರುವುದರಿಂದ, ಕಳೆ ಮೊಳಕೆ ಆಗುವ ಮುನ್ನ ಸಿಂಪಡಿಸಲು ಶಿಫಾರಸ್ಸು ಮಾಡಲಾಗಿರುವ ಪೆಂಡಿಮೆಥಲಿನ್ 30 ಇ.ಸಿ 4 ಮಿ.ಲೀ ಪ್ರತಿ ಲೀಟರ್ ನೀರಿಗೆ ಅಥವಾ ಆಕ್ಸಿಫ್ಲೋರೋಫೆನ್ 23.5 ಇ.ಸಿ ಯನ್ನು 0.5 ಮಿ.ಲೀ ಪ್ರತಿ ಲೀಟರ್ ನೀರಿಗೆ ಅಥವಾ ಮೆಟ್ರಿಬ್ಯೂಜೆನ್ 70% ಅನ್ನು 1 ಗ್ರಾಂ ನಂತೆ ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿಕೊಂಡು ಗಡ್ಡೆ ಬಿತ್ತನೆ ಮಾಡಿದ ದಿನಸ ಅಥವಾ ಮೂರನೆಯ ದಿನವ ಭೂಮಿಯನ್ನು ತೇವ ಮಾಡಿಕೊಂಡು ಇಡೀ ಭೂಮಿಗೆ ಸಿಂಪಡಿಸಬೇಕು. ಸಸಿ ಬೆಳವಣಿಗೆಯ ದಿನಗಳಲ್ಲಿ ಬೆಳೆದ ಕಳೆಗಳನ್ನು ಕೂಲಿಗಳ ಸಹಾಯದಿಂದ ತೆಗೆದು ಹೊಲದಿಂದ ಹೊರಗೆ ಹಾಕಬೇಕು. ಹೀಗೆ ಮಾಡುವುದರಿಂದ ಸಸಿಗಳು ಆರೋಗ್ಯವಾಗಿ ಬೆಳೆಯುವುದಲ್ಲದೆ ಕೀಟ ಮಕ್ತವಾಗಿಯೂ ಬೆಳೆಯಲು ಸಹಾಯಕವಾಗುತ್ತದೆ.

## ಬೆಳೆ ಸಂರಕ್ಷಣೆ

**ಬೆಳೆಗೆ ಸಾಮಾನ್ಯವಾಗಿ ಕಾಡುವ ರೋಗಗಳು ಮತ್ತು ಕೀಟಗಳು**

**ರೋಗಗಳು:** ಮೊದಲ ಮತ್ತು ಕೊನೆಯ ಹಂತದ ಅಂಗಮಾರಿ ರೋಗ, ಎಲೆ ಸುರುಳಿ ರೋಗ, ದುಂಡಾಣುಕೊಳೆ ರೋಗ, ಮೊಜ಼ಾಯಕ್ ನಂಜು ರೋಗ ಮತ್ತು ಬೇರುಜಂತು ಹುಳು.









**ಕೀಟಗಳು:** ಆಲೂಗಡ್ಡೆ ಬೆಳೆಗೆ ಸಾಮಾನ್ಯವಾಗಿ ಬಾಧಿಸುವ ಕೀಟಗಳು– ರಸಹೀರುವ ಕೀಟಗಳು, ಗುಲಗಂಜಿ ಹುಳು, ಕಾಂಡ ಕತ್ತರಿಸುವ ಹುಳು, ಎಲೆ ತಿನ್ನುವ ಕೀಟ, ಗಡ್ಡೆ ಕೊರೆಯುವ ಹುಳು ಹಾಗೂ ಗೊಣ್ಣೆ ಹುಳು.








ಇಲ್ಲಿ ಪಟ್ಟಿಮಾಡಿರುವ ಕೀಟ ಹಾಗೂ ರೋಗ ಬೆಳೆಯ ಅವಧಿಯಲ್ಲಿ ವಾತಾವರಣ, ಅಕ್ಕ ಪಕ್ಕದ ತೋಟಗಳ ನಿರ್ವಹಣೆ ಮತ್ತು ಬೆಳೆಯ ಹಂತವನ್ನು ಆದರಿಸಿ ಇವುಗಳ ಬಾದೆ ನಿರೀಕ್ಷಿತ. ಕೀಟ ಹಾಗೂ ರೋಗ ಬಂದ ನಂತರ ನಿರ್ವಹಣೆ ಮಾಡುವುದಕ್ಕಿಂತ ಮೊದಲೇ ಶಿಫಾರಸ್ಸಿನಂತೆ ಸಿಂಪಡಣೆ ಕೊಡುವುದರಿಂದ ರೋಗ ಮುಕ್ತ ಹಾಗೂ ಕೀಟ ಮುಕ್ತ ಉತ್ತಮ ಬೆಳೆ ಮಾಡಬಹುದು.

## ■ ಕೀಟ ಮತ್ತು ರೋಗಗಳನ್ನು ನಿಯಂತ್ರಿಸಲು ಮುಂಜಾಗ್ರತಾ ಕ್ರಮವಾಗಿ ಕೈಗೊಳ್ಳಬೇಕಾದ ಸಿಂಪಡಣಾ ಕ್ರಮಗಳು

**ಒಂದನೆಯ ಸಿಂಪಡಣೆ:** ಗಡ್ಡೆ ನಾಟಿ ಮಾಡಿದ 15–21 ದಿನದಲ್ಲಿ ಮ್ಯಾಂಕೋಜೆಬ್ 2 ಗ್ರಾಂ/ಲೀ, ಮಹಾಫಲ್ 2.5 ಮಿ.ಲೀ/ಲೀ, ನವತಾರ 0.5 ಗ್ರಾಂ/ಲೀ ಮತ್ತು ಮ್ಯಾಕ್ಸಿವೆಟ್ 1 ಮಿ.ಲೀ/ಲೀ ನೀರಿಗೆ ಮಿಶ್ರಣ ಮಾಡಿಕೊಂಡು ಸಿಂಪಡಿಸುವುದರಿಂದ ರಸಹೀರುವ ಕೀಟ ನಿಯಂತ್ರಣದ ಜೊತೆಗೆ ಸಸ್ಯಗಳ ಬೆಳವಣಿಗೆ ವೃದ್ಧಿಯಾಗುವುದು.

**ಎರಡನೆಯ ಸಿಂಪಡಣೆ:** ಗಡ್ಡೆ ನಾಟಿ ಮಾಡಿದ 25–30 ದಿನಗಳಲ್ಲಿ ಎಂ ಅಂಡ್ ಎಂ 3 ಗ್ರಾಂ, ಪ್ರೋಕಿಸಾನ್ 1 ಗ್ರಾಂ, ಮಲ್ಟಿಪ್ಲೆಕ್ಸ್ ಸೂಪರ್ ಯೋದ 1.5 ಮಿ.ಲೀ ಮತ್ತು ಮ್ಯಾಕ್ಸಿವೆಟ್ 1 ಮಿ.ಲೀ ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿಕೊಂಡು ಸಿಂಪಡಿಸುವುದರಿಂದ ಎಲೆ ತಿನ್ನುವ, ಸುಳಿ ತಿನ್ನುವ ಹಾಗೂ ಬೂಜುರೋಗವನ್ನು ನಿಯಂತ್ರಿಸುವುದರ ಜೊತೆಗೆ ಈ ಹಂತದಲ್ಲಿ ಕಾಣುವ ಲಘುಪೋಷಕಾಂಶಗಳ ನ್ಯೂನತೆಯಿಂದ ಸಸ್ಯಗಳನ್ನು ಮುಕ್ತವಾಗಿರಿಸಬಹುದು.

**ಮೂರನೆಯ ಸಿಂಪಡಣೆ:** ಗಡ್ಡೆ ನಾಟಿ ಮಾಡಿದ 40–45 ದಿನದಲ್ಲಿ ಶೂಟ್ ಅಥವಾ ನಾಗ್ಫೆನ್ 2 ಮಿ.ಲೀ/ಲೀ, ಕ್ರಾಂತಿ 2.5 ಮಿ.ಲೀ/ಲೀ ಮತ್ತು ಮ್ಯಾಕ್ಸಿವೆಟ್ 1 ಮಿ.ಲೀ ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿಕೊಂಡು ಸಿಂಪಡಿಸುವುದರಿಂದ ಕಾಂಡಕೊರಕ, ಎಲೆ ತಿನ್ನುವ ಹುಳುಗಳನ್ನು ನಿಯಂತ್ರಿಸಬಹುದು. ಇದರಿಂದ ಸಸ್ಯ ಬೆಳವಣಿಗೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಮರಿಮೊಳಕೆಗಳನ್ನು ಬೆಳೆಯತ್ತವೆ.

**ನಾಲ್ಕನೆಯ ಸಿಂಪಡಣೆ:** ಗಡ್ಡೆ ನಾಟಿ ಮಾಡಿದ 50–55 ದಿನದಲ್ಲಿ ಮಲ್ಟಿಪ್ಲೆಕ್ಸ್ ಕ್ರಾಂತಿ 2.5 ಮಿ.ಲೀ, ಮಲ್ಟಿಕ್ಲಿಯರ್ 5 ಮಿ.ಲೀ ಮತ್ತು ಮಲ್ಟಿಪ್ಲೆಕ್ಸ್ ಮ್ಯಾಕ್ಸಿವೆಟ್ 1 ಮಿ.ಲೀ ಮತ್ತು ನಾಗೋರ್ 2 ಮಿ.ಲೀ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದರಿಂದ ಮೊದಲ ಹಾಗೂ ಕೊನೆಯ ಅಂಗಮಾರಿ ನಿಯಂತ್ರಣ, ರಸಹೀರುವ ಕೀಟಗಳ ನಿಯಂತ್ರಣದ ಜೊತೆಗೆ ಸಸ್ಯಗಳ ಬೆಳವಣಿಗೆ ವೃದ್ಧಿಯಾಗುತ್ತದೆ.

**ಐದನೆಯ ಸಿಂಪಡಣೆ:** ಗಡ್ಡೆ ನಾಟಿ ಮಾಡಿದ 60–65 ದಿನದಲ್ಲಿ ಮಲ್ಟಿಪ್ಲೆಕ್ಸ್ ಆಲ್ಬೋರ್ + 1.5 ಗ್ರಾಂ/ಲೀ, ರೈಜ್ 0.3 ಮಿ.ಲೀ, ಡ್ಯುಯೋ ಕೇರ್ 1 ಮಿ.ಲೀ ಮತ್ತು ಮ್ಯಾಕ್ಸಿವೆಟ್ 1 ಮಿ.ಲೀ ಮಿಶ್ರಣ ಮಾಡಿಕೊಂಡು ಸಿಂಪಡಣೆ ಕೊಡುವುದರಿಂದ ಗಡ್ಡೆ ಕೊರಕ, ಎಲೆ ತಿನ್ನುವ ಕೀಟ ಮತ್ತು ಕಾಂಡಕೊರಕ ನಿಯಂತ್ರಣದ ಜೊತೆಗೆ ಅಂಗಮಾರಿ ರೋಗ ನಿಯಂತ್ರಣವಾಗುವುದಲ್ಲದೆ ಗಡ್ಡೆಗಳ ಗಾತ್ರ ಮತ್ತು ಸಂಖ್ಯೆ ವೃದ್ಧಿಯಾಗುತ್ತದೆ.

## ■ ಕೊಯಿಲು

ಬೆಳೆಗೆ ಆಯ್ಕೆ ಮಾಡಿಕೊಂಡ ತಳಿ, ಪೋಷಕಾಂಶಗಳ ನಿರ್ವಹಣೆ, ನೀರಿನ ಆರೈಕೆ ಹಾಗೂ ವಾತಾವರಣದ ಮೇಲೆ ಇಳುವರಿ ನಿರ್ಧಾರವಾಗುತ್ತದೆ. ಸಾಮಾನ್ಯವಾಗಿ ಪೂರ್ಣವಾಗಿ ಬೆಳೆದ ಬೆಳೆಯ ಎಲೆ ಅಥವಾ ಸಸಿ ಸಂಪೂರ್ಣವಾಗಿ ಹಳದಿ ಬಣ್ಣಕ್ಕೆ ತಿರುಗಿ ಒಣಗಳು ಪ್ರಾರಂಭವಾಗುತ್ತದೆ.ಆಗ ಗಡ್ಡೆ ತೆಗೆಯಲು ಸಕಾಲ ಎಂದು ತಿಳಿಯಬೇಕು. ಗಡ್ಡೆಯನ್ನು ತೆಗೆಯುವಾಗ ಮಣ್ಣಿನ ಗುಣಧರ್ಮ ಆಧರಿಸಿ ನೀರು ಹಾಯಿಸಿ ಗಡ್ಡೆಗಳಿಗೆ ಪೆಟ್ಟು ಬೀಳದಂತೆ ಭೂಮಿಯಿಂದ ತೆಗೆಯಬೇಕು.

**ಇಳುವರಿ:** ನಿಮ್ಮ ಕೃಷಿ ಪರಿಸರಕ್ಕೆ ಸೂಕ್ತ ತಳಿ ಆಯ್ಕೆ ಮಾಡಿಕೊಂಡು ಸೂಕ್ತ ಬೆಳೆ ನಿರ್ವಹಣಾ ಕ್ರಮಗಳನ್ನು ಅನುಸರಿಸಿದರೆ ಪ್ರತಿ ಎಕರೆಗೆ 14 ರಿಂದ 18 ಟನ್ ಇಳುವರಿ ಪಡೆಯಬಹುದು.

**ಸೂಚನೆ:** ಕೊಯಿಲು ಮಾಡುವಾಗ ಅಥವಾ ಗಡ್ಡೆ ತೆಗೆಯುವ 7–10 ದಿವಸ ಮುನ್ನ ಭೂಮಿಯ ಮಟ್ಟಕ್ಕೆ ಸಸಿಗಳನ್ನು ಕತ್ತರಿಸಿ ತೆಗೆಯುವುದರಿಂದ ಮಣ್ಣಿನಲ್ಲಿರುವ ಗಡ್ಡೆಯ ಚರ್ಮ ದಪ್ಪವಾಗಿ ಸಿಪ್ಪೆ ಸುಲಿದುಕೊಳ್ಳುವ ಸಮಸ್ಯೆಯಿಂದ ತಪ್ಪಿಸಬಹುದು. ಹೀಗೆ ಮಾಡುವುದರಿಂದ ದೂರದ ಜಾಗಕ್ಕೆ ಸಾಗಿಸುವ ಸಮಯದಲ್ಲಿ ಗಡ್ಡೆಗಳು ಹಾಳಾಗುವುದಿಲ್ಲ.

ಗಡ್ಡೆಗಳನ್ನು ಮಣ್ಣಿನಿಂದ ತೆಗೆದ ನಂತರ ರಾಶಿಯಂತೆ ಶೇಕರಣೆ ಮಾಡದೆ ನೆಲದ ಮೇಳೆ ಮರಳನ್ನು ಹರಡಿ ಅದರ ಮೇಲೆ ತೆಳುವಾಗಿ ಹರಡಿ ಗಾಳಿಯಾಡಲು ಬಿಡಬೇಕು. ಹೀಗೆ ಮಾಡುವುದರಿಂದ ಗಡ್ಡೆಯ ಮೇಲಿನ ಸಿಪ್ಪೆ ಹದಕ್ಕೆ ಬರಲು ಸಹಾಯಕವಾಗುತ್ತದೆ.

ಗಡ್ಡೆಗಳು ಹದಕ್ಕೆ ಬಂದ ನಂತರ ಅವುಗಳನ್ನು ಮಾರುಕಟ್ಟೆಗೆ ತಲುಪಿಸುವವರೆಗೆ ಗುಡ್ಡೆ ಮಾಡಿ ಮೇಲೆ ಚೀಲವನ್ನು ಮುಚ್ಚಬೇಕು. ಅದರ ಮೇಲೆ ಶೇಕಡಾ 5 ರ ಮೆಲಾಥಿಯನ್ ಉದುರಿಸುವುದರಿಂದ ಸಂಗ್ರಹಣ ಜಾಗದಲ್ಲಿ ಕೀಟ ಮುಕ್ತವಾಗಿಡಬಹುದು.

ಒಂದೊಮ್ಮೆ ಗಡ್ಡೆಗಳನ್ನು ಹೆಚ್ಚುಕಾಲ ಶೇಕರಣೆ ಮಾಡುವ ಮುಂದಾಲೋಚನೆ ಇದ್ದಲ್ಲಿ ಪೊಟ್ಯಾಶ್ ಗೊಬ್ಬರವನ್ನು ಸಲ್ಫೇಟ್ ಆಫ್ ಪೊಟ್ಯಾಶ್ (ಎಸ್.ಒ.ಪಿ) ರೂಪದಲ್ಲಿ ಕೊಡುವುದು ಒಳ್ಳೆಯದು.

ಸಂಗ್ರಹಣೆ ಮಾಡಿರುವ ಜಾಗದಲ್ಲಿ ಕೊಳೆತ ಹಾಗೂ ಮೊಳಕೆ ಬಂದ ಗಡ್ಡೆಗಳನ್ನು ಆಗಾಗ ಬೇರ್ಪಡಿಸಿ ತೆಗೆಯುತ್ತಿರಬೇಕು.

ISO 9001 & 14001 Certified Company

multiplex®

MULTIPLEX FARMER HAPPY FARMER

# ಪ್ಲಾಂಟ್ ಏಯ್ಡ್

**ಉತ್ಪನ್ನದಲ್ಲಿ ಬೇರು ಬೆಳೆವಣಿಗೆ ಹಾಗೂ ಬೇರುಗಳನ್ನು ಹೆಚ್ಚು ಮಾಡಬಲ್ಲ ಆಕ್ಸಿನ್ಸ್ ಮತ್ತು ಬೇರು ಬೆಳೆವಣಿಗೆ ಪ್ರಚೋದನೆ ಮಾಡುವ ಹಾರ್ಮೋನುಗಳಿವೆ.**




## ಉಪಯೋಗಗಳು

- ಈ ಉತ್ಪನ್ನ ಬಳಸುವುದರಿಂದ ಬೇರುಗಳು ಶೀಘ್ರವಾಗಿ ವೃದ್ಧಿಯಾಗುತ್ತವೆ.
- ಬೇರುಗಳ ಉದ್ದ, ಗಾತ್ರ ಮತ್ತು ಬಿಳಲುಗಳು ಹೆಚ್ಚಾಗುತ್ತವೆ
- ಸಸ್ಯಗಳು ಶೀಘ್ರವಾಗಿ ಬೆಳವಣಿಗೆ ಹೊಂದುತ್ತವೆ.
- ಸಸ್ಯಗಳು ಭೂಮಿಯಿಂದ ನೀರು ಹಾಗೂ ಪೋಷಕಾಂಶಗಳನ್ನು ಹೀರಿಕೊಳ್ಳುವ ಪ್ರಮಾಣ ಹೆಚ್ಚಾಗಿ ಬೆಳೆ ಹಸುರಿನಿಂದ ಕಂಗೊಳಿಸುತ್ತದೆ ಹಾಗೂ ಆರೋಗ್ಯಪೂರ್ಣವಾಗಿರುತ್ತದೆ.

## ಬಳಕೆಯ ವಿಧಾನ ಮತ್ತು ಪ್ರಮಾಣ

**ಬೇರುಗಳನ್ನು ನೆನೆಸುವುದು:** ಪ್ರತಿ ಲೀಟರ್ ನೀರಿಗೆ 1 ಗ್ರಾಂ ಪ್ಲಾಂಟ್ ಏಯ್ಡ್ ಬೆರೆಸಿ ದ್ರಾವಣ ತಯಾರಿಸಿಕೊಳ್ಳಿ. ನಾಟಿಗೆ ಮುನ್ನ 30 ನಿಮಿಷಗಳ ಕಾಲ ಬೇರುಗಳನ್ನು ಈ ದ್ರಾವಣದಲ್ಲಿ ನೆನೆಸಿ.

**ನರ್ಸರಿ ಬೆಡ್‌ಗಳು:** ಪ್ರತಿ ಲೀಟರ್ ನೀರಿಗೆ 1 ಗ್ರಾಂ ಪ್ಲಾಂಟ್ ಏಯ್ಡ್ ಬೆರೆಸಿ ದ್ರಾವಣ ತಯಾರಿಸಿಕೊಳ್ಳಿ. ಆ ದ್ರಾವಣವನ್ನು ನರ್ಸರಿ ಬೆಡ್‌ಗಳು ನೆನೆಯುವಂತೆ ಚಿಮುಕಿಸಬೇಕು.

**ಡ್ರಿಪ್ ಮುಖೇನ ಕೊಡಲು:** 100 ಲೀಟರ್ ನೀರಿಗೆ 100 ಗ್ರಾಂ ಪ್ಲಾಂಟ್ ಏಯ್ಡ್ ಬೆರೆಸಿ ಡ್ರಿಪ್ ಮೂಲಕ ಕೊಡಬೇಕು.



# ದೇಶದ ಆಹಾರ ಭದ್ರತೆಯಿಂದ ರೈತರ ಆದಾಯ ಭದ್ರತೆವರೆಗೆ

## - ಡಾ. ಎಂ. ಎಸ್. ಸ್ವಾಮಿನಾಥನ್

1960 ರ ದಶಕ. ಭಾರತದಲ್ಲಿ ತೀವ್ರ ಬರಗಾಲ. ಅನ್ನಾಹಾರಗಳಿಗೆ ಆಹಾಕಾರ. ಆಗ ಭಾರತಕ್ಕೆ 'ಶಿಪ್ ಟು ಮೌತ್' ಎಂಬ ಕಳಂಕ. ಶಿಪ್ ಟು ಮೌತ್ ಎಂದರೆ ಅಮೆರಿಕಾದಿಂದ ಹಡಗಿನಲ್ಲಿ ಆಹಾರ ಧಾನ್ಯ ಬಂದಲ್ಲಿ ದೇಶವಾಸಿಗಳಿಗೆ ಒಪ್ಪೊತ್ತಿನ ಊಟ ಇಲ್ಲವೇ ಇಲ್ಲ ಎಂಬ ದುಸ್ಥಿತಿ. ಆ ಸಂದರ್ಭದಲ್ಲಿ ದೇಶದ ಆಹಾರ ಭದ್ರತೆಗಾಗಿ ಟೊಂಕ ಕಟ್ಟಿ ನಿಂತವರು ಆಗಿನ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ, ಕೃಷಿ ಸಚಿವ ಸಿ.ಸುಬ್ರಮಣಿಯಂ, ಇಂಧಿರಾ ಗಾಂಧಿ  ಹಾಗೂ ಡಾ.ಎಂ. ಎಸ್.ಸ್ವಾಮಿನಾಥನ್.



### ಸರ್ಕಾರಿ ಯೋಜನೆಯೊಂದು ಆಂದೋಲನವಾದ ಬಗೆ


1964 ಜೂನ್ ಮಾಹೆ. ಡಾ. ಎಂ.ಎಸ್. ಸ್ವಾಮಿನಾಥನ್ ಒಂದು ಸಾವಿರ ಸಣ್ಣ ರೈತರ ಹೊಲಗಳಲ್ಲಿ ನೀರಾವರಿ ವ್ಯವಸ್ಥೆಯೊಂದಿಗೆ ರಸಗೊಬ್ಬರ ಬಳಸಿ ಗೋಧಿ ಬೆಳೆಯುವ ಪ್ರಾತ್ಯಕ್ಷಿಕೆಗಳನ್ನು ಹಮ್ಮಿಕೊಳ್ಳುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತಾರೆ. ಕೃಷಿ ಸಚಿವಾಲಯ ಆ ಪ್ರಸ್ತಾವವನ್ನು ವಿರೋಧಿಸುತ್ತದೆ. ಆದಾಗ್ಯೂ ಆಗಿನ ಕೃಷಿ ಸಚಿವರಾದ ಸಿ. ಸುಬ್ರಹ್ಮಣಿಯನ್ 1964 ರ ಆಗಸ್ಟ್ ಮಾಹೆಯಲ್ಲಿ ಯೋಜನೆಗೆ ಹಸಿರು ನಿಶಾನೆ ತೋರಿಸುತ್ತಾರೆ. ಸ್ವಾಮಿನಾಥನ್ ಮತ್ತು ಅವರ ತಂಡ ಯೋಜನೆಯನ್ನು ಜಾರಿಗೊಳಿಸುತ್ತಾರೆ. ರಾಷ್ಟ್ರ ಮಟ್ಟದ ಆ ಪ್ರಾತ್ಯಕ್ಷಿಕೆಯಲ್ಲಿ ಸಣ್ಣ ರೈತರು ಒಂದು ಹೆಕ್ಟೇರ್ ಗೆ ನಾಲ್ಕರಿಂದ ಐದು ಟನ್ ಗೋಧಿ ಇಳುವರಿ ಪಡೆಯುತ್ತಾರೆ. ಆ ಸಂದರ್ಭದಲ್ಲಿ ಇತರೆ ಜಮೀನುಗಳಲ್ಲಿ ಒಂದು ಹೆಕ್ಟೇರ್ ಗೆ ಒಂದು ಟನ್ ಇಳುವರಿ ಮೀರಿರಲಿಲ್ಲ ಎಂಬುದು ಗಮನಾರ್ಹ ಸಂಗತಿ. ಈ ಯಶಸ್ಸು ರೈತರನ್ನು ಹುರಿದುಂಬಿಸುತ್ತದೆ. ನೋಡ ನೋಡುತ್ತಿದ್ದಂತೆಯೇ ಒಂದು ಸರ್ಕಾರಿ ಕಾರ್ಯಕ್ರಮ ದೇಶವ್ಯಾಪಿ ಆಂದೋಲನಾಗಿ ಬೆಳೆಯುತ್ತದೆ.

### ಬೀಜೋತ್ಪಾದನೆ ಮತ್ತು ಬೀಜ ಅಮದು

ರಾಷ್ಟ್ರೀಯ ಪ್ರಾತ್ಯಕ್ಷಿಕೆಗಳ ಅಭೂತಪೂರ್ವ ಯಶಸ್ಸಿನಿಂದಾಗಿ ಹೊಸ ಬಿತ್ತನೆ ಬೀಜಕ್ಕೆ ಬೇಡಿಕೆ ಆಹಾಕಾರದ ಸ್ವರೂಪ ಪಡೆಯುತ್ತದೆ. ಹಾಗಾಗಿ ಬೀಜೋತ್ಪಾದನೆಗೆ ಹೆಚ್ಚಿನ ಒತ್ತು ನೀಡಬೇಕಾಗುತ್ತದೆ. ಅದಾಗ ದೆಹಲಿ ರಾಜ್ಯದ ಜೌಂಟಿ ಗ್ರಾಮವನ್ನು ಬೀಜ ಗ್ರಾಮವನ್ನಾಗಿ ಮಾಡಲು ಸ್ವಾಮಿನಾಥನ್ ಚಿಂತನೆ ಮಾಡುತ್ತಾರೆ. ಹೊಸ ಬಿತ್ತನೆ ಬೀಜವನ್ನು ಅಭಿವೃದ್ಧಿಪಡಿಸಲು ಗ್ರಾಮಸ್ಥರ ಮನವೊಲಿಸಲು ಬೀಜ ತಜ್ಞ ಡಾ. ಅಮೀರ್ ಸಿಂಗ್ ಅವರಿಗೆ ಜವಾಬ್ಧಾರಿ ವಹಿಸುತ್ತಾರೆ. ಸಿಂಗ್ ಆ ಕೆಲಸವನ್ನು ಮುತುವರ್ಜಿಯಿಂದ ಮಾಡುತ್ತಾರೆ. ಎರಡನೆಯದಾಗಿ ಮೆಕ್ಸಿಕೋದಿಂದ ಅಗಾದ ಪ್ರಮಾಣದ ಬಿತ್ತನೆ ಬೀಜಗಳನ್ನು ತರಿಸುವ ಪ್ರಸ್ತಾವ ಮಂಡಿಸುತ್ತಾರೆ. ಕೃಷಿ ಸಚಿವ ಸಿ.ಸುಬ್ರಮಣಿಯಂ ಮತ್ತು ಇಂಧಿರಾ ಗಾಂಧಿ ಆ ಪ್ರಸ್ತಾವ ಒಪ್ಪಿಕೊಳ್ಳುತ್ತಾರೆ. ಅಂತೆಯೇ 1965 ಮತ್ತು 66 ರಲ್ಲಿ ಗೋಧಿಯ ಎರಡು ತಳಿಗಳಾದ ಲೆರ್ಮಾ ರೋಜೋ ಮತ್ತು ಸೊನಾರ 64 ವೆರೈಟಿಗಳನ್ನು ಕ್ರಮವಾಗಿ 200 ಮತ್ತು 18,000 ಟನ್ ಆಮದ ಮಾಡಿಕೊಳ್ಳಲಾಗುತ್ತದೆ. ಹೀಗೆ ಭಾರತದಲ್ಲಿ ಹಸಿರು ಕ್ರಾಂತಿ ಆರಂಭವಾದದ್ದು.

## ಬೀಜ ಗ್ರಾಮ

1967 ರಲ್ಲಿ ಇಂಧಿರಾ ಗಾಂಧಿ ಜೌಂಟಿ ಗ್ರಾಮಕ್ಕೆ ಬೇಟಿಕೊಟ್ಟು ಜವಹರ್ ಜೌಂಟಿ ಬೀಜ ಸಹಕಾರ ಸಂಘವನ್ನು ಉದ್ಘಾಟಿಸುತ್ತಾರೆ.



## ದೂರದರ್ಶನದಲ್ಲಿ ಕೃಷಿ ದರ್ಶನ ಆರಂಭಕ್ಕೆ ಕಾರಣವಾದ ಘಳಿಗೆ.

1967 ರ ಜನವರಿ ಮಾಹೆಯ ಒಂದು ಸಂಜೆ ಡಾ.ಎಂ.ಎಸ್. ಸ್ವಾಮಿನಾಥನ್ ಹಾಗೂ ಅಣುಶಕ್ತಿ ಆಯೋಗದ ಅಧ್ಯಕ್ಷರಾದ ವಿಕ್ರಮ್ ಸಾರಾಭಾಯಿ ದೆಹಲಿಯ ಸುತ್ತಮುತ್ತಲಿನ ಗೋಧಿ ಬೆಳೆಯುವ ಪ್ರದೇಶಗಳಿಗೆ ಭೇಟಿ ನೀಡಿ ಹಿಂದಿರುಗುವಾಗ, ಹೊಸ ವರೈಟಿ ಗೋಧಿ ಬೆಳೆಯುವಲ್ಲಿ ರೈತರು ತೋರುತ್ತಿದ್ದ ಆಸಕ್ತಿಯನ್ನು ಕಂಡ ಸಾರಾಭಾಯಿ ಪ್ರಭಾವಿತರಾಗಿರುತ್ತಾರೆ. ಮುಂದುವರೆದು ರೇಡಿಯೋ ಹಾಗೂ ಟೆಲಿವಿಷನ್ ಮೂಲಕ ವಿಜ್ಞಾನ ತಂತ್ರಜ್ಞಾನದ ಹೊಳಹುಗಳು ಹಾಗೂ ರೈತರ ದೈನಂದಿನ ಚಟುವಟಿಕೆಗಳ ನಡುವೆ ಇರುವ ಅಗಾಧವಾದ ಕಂದಕಕ್ಕೊಂದು ಸೇತುವೆ ಕಟ್ಟುವ ಕೆಲಸ ಆಗಬೇಕೆಂದು ಸ್ವಾಮಿನಾಥನ್ ಅವರ ಬಳಿ ಪ್ರಸ್ತಾಪಿಸಿದ್ದಲ್ಲದೆ ಆ ವಿಷಯವನ್ನು ಇಂದಿರಾ ಅವರಿಗೆ ಮುಟ್ಟಿಸಲು ಈರ್ವರೂ ಇಂದಿರಾ ಅವರ ಮನೆಗೆ ತೆರಳುತ್ತಾರೆ. ಇವರಿಬ್ಬರ ಪ್ರಸ್ತಾಪ ಆಲಿಸಿದ ಇಂಧಿರಾ ಕೂಡಲೇ ಮಾಹಿತಿ ಹಾಗೂ ಪ್ರಸಾರ ಇಲಾಖೆಯ ಸಚಿವರಿಗೆ ಫೋನ್ ಮಾಡಿ ಕೃಷಿ ದರ್ಶನ ಕಾರ್ಯಕ್ರಮ ಆರಂಭಿಸಲು ಸೂಚಿಸಿದ್ದಾರೆ. ಆಶ್ಚರ್ಯವೆಂಬಂತೆ 1967 ಜನವರಿ 26 ರಂದು ರೈತರಿಗೆ ಹೊಸ ಹೊಸ ಕೃಷಿ ತಂತ್ರಜ್ಞಾನಗಳ ಪರಿಚಯ ಮಾಡಿಕೊಡುವ ಕೃಷಿ ದರ್ಶನ ಕಾರ್ಯಕ್ರಮ ಪ್ರಸಾರ ಆರಂಭವಾಗಿಯೇ ಬಿಟ್ಟಿತು. ಭಾರತದಲ್ಲಿ ಹಸಿರು ಕ್ರಾಂತಿಯಾಗಲು ಈ ಕಾರ್ಯಕ್ರಮದ ಕೊಡುಗೆ ಪ್ರಮುಖವಾದುದು.

## ಬೆಳೆ ಆಯ್ಕೆ-ರೈತರ ಆದಾಯ ಮುಂತಾಗಿ

1960 ರ ದಶಕದಲ್ಲಿ ಎಕರೆವಾರು ಬೆಳೆ ಉತ್ಪಾದಕತೆ, ಇಳುವರಿ ಹೆಚ್ಚಳದ ಬಗೆಗೆ ಆಸಕ್ತಿವಹಿಸಿದ್ದ (ಅದು ಆಗಿನ ಅನಿವಾರ್ಯ ಅಗತ್ಯ) ಡಾ.ಎಂ.ಎಸ್. ಸ್ವಾಮಿನಾಥನ್ 2018 ಜುಲೈ 13 ರಂದು ಆಗಿನ ಕರ್ನಾಟಕದ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ಆಹ್ವಾನದ ಮೇರೆಗೆ ರಾಜ್ಯಕ್ಕೆ ಆಗಮಿಸಿದಾಗ ರೈತರ ಆದಾಯದ ಕುರಿತು ಮಾತನಾಡಿದ್ದರು. ಅಂದು ವಿಧಾನ ಸೌಧದಲ್ಲಿ ಮುಖ್ಯಮಂತ್ರಿ, ಕೃಷಿ ಸಚಿವ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಮಾತನಾಡುತ್ತಾ ತೋಟಗಾರಿಕಾ ಬೆಳೆಗಳು ವಿಶೇಷವಾಗಿ ಕಮರ್ಷಿಯಲ್ ಕ್ರಾಪ್ ಬೆಳೆಯಲು ಪ್ರೋತ್ಸಾಹ ಸಿಗಬೇಕು. ಬೆಳೆ ಉತ್ಪಾದಕತೆಗಷ್ಟೇ ಕಾಳಜಿವಹಿಸದೆ ಆದಾಯ ಹೆಚ್ಚಳದ ಬೆಗೆಗೆ ನಿಗಾವಹಿಸಬೇಕೆಂದಿದ್ದಾರೆ. ಕರ್ನಾಟಕದಲ್ಲಿ ತರಕಾರಿ ಹಾಗೂ ಹೂ ಬೆಳೆಗಳಿಗೆ ವಿಪುಲ ಅವಕಾಶಗಳಿವೆ ಎಂದೂ ಹೇಳಿದರು. ದೇಶದಲ್ಲಿ ತೋಟಗಾರಿಕಾ ಕ್ಷೇತ್ರಕ್ಕೆ ಪ್ರತ್ಯೇಕವಾದ ನಿರ್ದೇಶನಾಲಯ ಸ್ಥಾಪಿಸಿದ್ದು ಕರ್ನಾಟಕದಲ್ಲಿಯೇ ಮೊದಲು ಬೇರೆಡೆ ಕೃಷಿ ಇಲಾಖೆಯೇ ತೋಟಗಾರಿಕಾ ಕ್ಷೇತ್ರವನ್ನೂ ಒಳಗೊಂಡಿದೆ ಎಂದರು.



ಇನ್ನೊಂದು ವಿಷಯ – ಸಮುದ್ರ ನೀರಿನ ಕೃಷಿ ಪ್ರೋತ್ಸಾಹಿಸಬೇಕು. ವಿಶ್ವದ ಒಟ್ಟಾರೆ ನೀರಿನ ಪ್ರಮಾಣದ ಶೇಕಡಾ 97 ರಷ್ಟು ಸಮುದ್ರ ನೀರೇ ತುಂಬಿದೆ. ಕರ್ನಾಟಕದಲ್ಲಿ ಕೋಸ್ಟಲ್ ಏರಿಯಾ ಬಹಳ ದೊಡ್ಡದಿದೆ, ಹಾಗಾಗಿ ಆ ಪ್ರದೇಶದ ಹಾಗೂ ರೈತರ ಅಭಿವೃದ್ಧಿಗಾಗಿ ಸಮುದ್ರ ನೀರಿನ ಕೃಷಿ ಯೋಜನೆ ಮಾಡಬಹುದಾಗಿದೆ ಎಂದೂ ಸಲಹೆ ನೀಡಿದರು.



## ರೈತರ ಆದಾಯ

ರೈತರು ಬೆಳೆದ ಬೆಳೆಗಳಿಗೆ ಸಿ2+50% ಎಂ.ಎಸ್.ಪಿ ನೀಡಬೇಕೆಂಬ ಸ್ವಾಮಿನಾಥನ್ ಅವರ ಪ್ರಸ್ತಾವ ದೇಶದಾದ್ಯಂತ ದಿನಂಪ್ರತಿ ಚರ್ಚೆಯಲಿ ಇರುತ್ತದೆ. ಸಮರ್ಪಕವಾಗಿ ಊರ್ಜಿತವಾಗುತ್ತಿಲ್ಲ. ಇಡೀ ದೇಶಕ್ಕೆ ನಿಜಾರ್ಥದಲ್ಲಿ 'ಅನ್ನ ಭಾಗ್ಯ' ನೀಡಿದ ಸ್ವಾಮಿನಾಥನ್ ಅವರಿಗೆ ಈ ದೇಶ ಸಲ್ಲಿಸಬಹುದಾದ ನಿಜವಾದ ಗೌರವವೇನೆಂದರೆ ಅವರು ಪ್ರಸ್ತಾಪಿಸದಂತೆ ರೈತರ ಬೆಳೆಗಳಿಗೆ ಸಿ2+50% ಎಂ.ಎಸ್.ಪಿ. ನೀಡಬೇಕು

**ನಾಗೇಶ್ ಕೆ.ಎನ್.**



# ಬದಲಾವಣೆ ಜಗದ ನಿಯಮ

## –ಸುಸ್ಥಿರತೆಯೆಡೆಗೆ ಮತ್ತೊಂದು ಹೆಜ್ಜೆ



**ಸಾ**ವಿರಾರು ವರ್ಷಗಳಿಂದ ನಡೆದುಕೊಂಡುಬಂದಿರುವ ಕೃಷಿ ಪದ್ಧತಿಗಳಲ್ಲಿ ಕಾಲಕಾಲಕ್ಕೆ ಅನೇಕ ಬದಲಾವಣೆಗಳಾಗಿವೆ. ಬದಲಾವಣೆ ನಿತ್ಯ ನಿರಂತರ ಮತ್ತು ಬದಲಾವಣೆ ಜಗದ ನಿಯಮ. ಉದಾಹರಣೆಗೆ 1960 ರ ದಶಕ. ಭಾರತದಲ್ಲಿ ತೀವ್ರ ಬರಗಾಲ. ಆಹಾರ ಭದ್ರತೆಗಾಗಿ ದೇಶದಲ್ಲಿ ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅನುಸರಿಸಬೇಕಾಯಿತು. ಮೊನ್ನೆಯಷ್ಟೇ ತಮ್ಮ 98 ನೇ ವಯಸ್ಸಿನಲ್ಲಿ ವಯೋಸಹಜ ಅನಾರೋಗ್ಯದಿಂದ ನಿಧರಾದ ಖ್ಯಾತ ಕೃಷಿ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್ ನೇತೃತ್ವದ ತಂಡ ಆಗ ವೈಜ್ಞಾನಿಕ ಕೃಷಿ ಪದ್ಧತಿಯನ್ನು ಪ್ರಚುರಪಡಿಸುವ ಕೆಲಸ ಮಾಡಿತು.

ಭಾರತದಲ್ಲಿ ಮೊಟ್ಟಮೊದಲಿಗೆ ಹೈಬ್ರಿಡ್ ಬೀಜಗಳನ್ನು ಬಳಸಲಾಯಿತು. ರಸಾಯನಿಕ ಗೊಬ್ಬರಗಳು, ಕೀಟನಾಶಕಗಳು ಹಾಗೂ ಕಳೆನಾಶಕಗಳ ಬಳಕೆ ಕೃಷಿಯಲ್ಲಿ ಆರಂಭವಾಯಿತು. ಅದೇನು ಸುಲಭದ ಕೆಲಸ ಆಗಿರಲಿಲ್ಲ. ಆಗಲೂ ರೈತರ ಮನವೊಲಿಸಲು ವಿಜ್ಞಾನಿಗಳು ಪ್ರಯಾಸಪಟ್ಟಿದ್ದರು. ಒಂದು ಹೆಕ್ಟೇರ್ ಭೂಮಿಯಲ್ಲಿ ಒಂದು ಟನ್ ಗಿಂತಾ ಕಡಿಮೆ ಗೋಧಿ ಬೆಳೆಯುತ್ತಿದ್ದ ಕಾಲದಲ್ಲಿ ವಿಜ್ಞಾನಿಗಳು ವೈಜ್ಞಾನಿಕ ಕೃಷಿ ಪದ್ಧತಿಯ ಪ್ರಾತ್ಯಕ್ಷಿಕೆಗಳನ್ನು ಮಾಡಿ ಒಂದು ಹೆಕ್ಟೇರ್ ಗೆ ನಾಲ್ಕರಿಂದ ಐದು ಟನ್ ಗೋಧಿ ಇಳುವರಿ ತೆಗೆದಾಗ (1964–65) ರೈತ ಸಮುದಾಯ ಹುಬ್ಬೇರಿಸಿತ್ತು. ಆಗ ಹೈಬ್ರೀಡ್ ಬೀಜಗಳಿಗೆ ಬೇಡಿಕೆ ಹೆಚ್ಚಾಯಿತು. ಅದಾಗ ಸ್ಥಳೀಯವಾಗಿ ಬಿತ್ತನೆ ಬೀಜಗಳ ಉತ್ಪಾದನೆ ಮಾಡುವುದರ ಜೊತೆಗೆ ಹೆಚ್ಚಿನ ಮೊತ್ತದ ಬೀಜಗಳನ್ನು ಮೆಕ್ಸಿಕೋದಿಂದ ಆಮದು ಮಾಡಿಕೊಳ್ಳಲಾಗಿತ್ತು. ರೈತರು ಒಂದು ಹೊಸ ಕೃಷಿ ಪದ್ಧತಿಗೆ ಒಗ್ಗಿದರು.

ಕ್ರಮೇಣ ಕೃಷಿ ಭೂಮಿಯಲ್ಲಿ ಲಘುಪೋಷಕಾಂಶಗಳು ಕಡಿಮೆ ಆದವು. ಅದನ್ನು ಗುರುತಿಸಿ ಬೆಳೆಗಳಿಗೆ ಸಮತೋಲನವಾದ ಪೋಷಕಾಂಶಗಳು ಬೇಕು ಎಂಬ ವಿಷಯ ಮಂಡಿಸಿ ಮಣ್ಣಿನ ಆರೋಗ್ಯದ ಬಗೆಗೆ ಮಾತನಾಡಿದವರು ಸ್ವಾಮಿನಾಥನ್ ಅವರ ನಂತರದ ಪೀಳಿಗೆಯ ವಿಜ್ಞಾನಿಗಳು. ಅವರಲ್ಲಿ ಡಾ. ಗೋಪಾಲಕೃಷ್ಣ ಪೊಮ್ಮಯ್ಯ ಶೆಟ್ಟಿ ಕೂಡಾ ಪ್ರಮುಖರು. ಆಗ ಕೃಷಿ ಇಲಾಖೆಯಾಗಲಿ, ಸರ್ಕಾರಗಳಾಗಲಿ, ರೈತರಾಗಲಿ ಲಘುಪೋಷಕಾಂಶಗಳನ್ನು ಏಕಾಏಕಿ ಒಪ್ಪಿಕೊಳ್ಳಲಿಲ್ಲ. ಕ್ರಮೇಣ ಕೃಷಿ ಭೂಮಿಗಳಲ್ಲಿ ಪ್ರಾತ್ಯಕ್ಷಿಕೆ ಮಾಡಿ ಫಲಿತಾಂಶ ಕಂಡ ಮೇಲೆ ಒಪ್ಪಿದರು. ಮುಂದಿನ ದಿನಗಳಲ್ಲಿ ಲಘುಪೋಷಕಾಂಶಗಳ ಬಳಕೆ ಹೆಚ್ಚಾಯಿತು.

ಇದರ ತರುವಾಯ ಸಸ್ಯಗಳ ಬೆಳವಣಿಗೆಗೆ ಜೈವಿಕ ಪ್ರಚೋದಕಗಳು ಕೂಡಾ ಬಿಡುಗಡೆಯಾದವು, ಆರಂಭಿಕವಾಗಿ ಅವುಗಳ ಬಗ್ಗೆ ಹೆಚ್ಚೇನೂ ಆಸಕ್ತಿ ತೋರದ ರೈತರು ದಿನಕಳೆದಂತೆ ಅವುಗಳ ಮಹತ್ವ ಅರಿತು ಬಳಸಲಾರಂಭಿಸಿದರು. ಹೀಗೆ ಕೃಷಿ ಕ್ಷೇತ್ರದಲ್ಲಿ ಅನೇಕ ಹೊಸತುಗಳ ಬೆಳವಣಿಗೆ ನಿರಂತರ ಸಾಗುತ್ತಾ ಬಂದಿದೆ. ಈಗ ಇನ್ನೊಂದು ಹೆಜ್ಜೆ ಮುಂದೆ ಹೋಗಿ ಪಾರಂಪರಿಕ ರಸಾಯನಿಕ ಪ್ರಧಾನ ಪೋಷಕಾಂಶಗಳ ಬದಲಿಗೆ ಪರ್ಯಾಯ ಪೋಷಕಾಂಶಗಳಿಗೆ ಪ್ರಚಾರ ಸಿಗುತ್ತಿದೆ.


ಈಗಾಗಲೇ ಹೇಳಿದಂತೆ ಒಂದು ಕಾಲದಲ್ಲಿ ಕೇವಲ ಪ್ರಧಾನ ಪೋಷಕಾಂಶಗಳನ್ನೇ ಬಳಸಿ ಬೆಳೆ ಬೆಳೆಯುತ್ತಿದ್ದದ್ದು, ನಂತರ ಸಮತೋಲನವಾದ ಪೋಷಕಾಂಶಗಳ ನಿರ್ವಹಣೆ (ಮಧ್ಯಮ ಹಾಗೂ ಲಘುಪೋಷಕಾಂಶಗಳು). ಆಮೇಲೆ ಜೈವಿಕ ಪರಿಕರಗಳ ಪರ್ವದ ಆರಂಭ. ಇವೆಲ್ಲಕ್ಕೂ ಮಿಗಿಲಾಗಿ ಇತ್ತೀಚೆಗೆ ಅನೇಕ ವಿನೂತನ ಉತ್ಪನ್ನಗಳು ಮಾರುಕಟ್ಟೆಗೆ ಬರುತ್ತಿವೆ. ಅದೆಲ್ಲಾ ನಿರಂತರ ಸಂಶೋಧನೆಯ ಫಲಿತಾಂಶ.

ನಮ್ಮ ಸಂಸ್ಥೆಯು ಯಾವಾಗಲೂ ಹೊಸ ಉತ್ಪನ್ನಗಳ ಆವಿಷ್ಕಾರದಲ್ಲಿ ತೊಡಗಿರುತ್ತದೆ. ನಮ್ಮ ವಿಜ್ಞಾನಿಗಳ ತಂಡ ರೈತರ ಹೊಲಗಳಲ್ಲಿ ಬರುವ ಹೊಸ ಹೊಸ ಕೀಟ ರೋಗಗಳ ಬಗ್ಗೆ ನಿಗಾವಹಿಸಿರುತ್ತಾರೆ ಮತ್ತು ಅವುಗಳಿಂದ ಬೆಳೆ ರಕ್ಷಿಸಲು ಬೇಕಾದ ಉತ್ಪನ್ನಗಳ ತಯಾರಿಗೆ ಸಂಶೋಧನೆ ನಡೆಸುತ್ತಿರುತ್ತಾರೆ. ಸಂಶೋಧನೆ, ಹೊಸ ಪರಿಕರಗಳ ಆವಿಷ್ಕಾರ, ಉತ್ಪಾದನೆ, ಮಾರಾಟ ನಿತ್ಯ ನಿರಂತರ.

ಈಗಲೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರಚುರಪಡಿಸುತ್ತಿರುವ ಪಾರಂಪರಿಕ ಎನ್.ಪಿ.ಕೆ ಪೋಷಕಾಂಶಗಳಿಗೆ ಪರ್ಯಾಯವಾಗಿ ಮಲ್ಟಿಪ್ಲೆಕ್ಸ್ ಲಿಕ್ವಿಡ್ ಎನ್, ಮಲ್ಟಿಪ್ಲೆಕ್ಸ್ ಗ್ರೀನ್ ಫಾಸ್ಫರಸ್ ಮತ್ತು ಮಲ್ಟಿಪ್ಲೆಕ್ಸ್ ಗ್ರೀನ್ ಪೊಟ್ಯಾಶ್ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ಈ ಮೂರೂ ಮಹತ್ವದ ಮೌಲ್ಯವರ್ಧಿತ ಉತ್ಪನ್ನಗಳು. ಇವುಗಳ ಬಳಕೆಯಿಂದ ರೈತರಿಗೆ ಬಹಳಷ್ಟು ಅನುಕೂಲವಾಗಿರುವ ವರದಿಗಳು ನಮ್ಮ ಉತ್ಸಾಹ ಇಮ್ಮಡಿಗೊಳಿಸಿದೆ.

ಉತ್ತಮ ಗುಣಮಟ್ಟದ ಕೃಷಿ ಪರಿಕರಗಳ ಉತ್ಪಾದನೆ ಮತ್ತು ಮಾರಾಟ ರೈತರ ಹಿತದೃಷ್ಟಿಯಿಂದ ಮತ್ತು ಕೃಷಿ ಕ್ಷೇತ್ರದ ಏಳಿಗೆಗೆ ಬಹಳ ಮುಖ್ಯ. ಆ ಕೆಲಸ ನಮ್ಮ ಸಂಸ್ಥೆಯಲ್ಲಿ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಮುಂದೆಯೂ ಹೀಗೆಯೇ ಮುಂದುವರಿಯಲಿದೆ.

–ಸಂ



# ಅಗಲಿದ ಚೇತನಕ್ಕೆ ಅನಂತ ನಮನಗಳು





**2018 ರಲ್ಲಿ ಬೆಂಗಳೂರಿಗೆ ಆಗಮಿಸಿದ್ದ ಡಾ. ಎಂ. ಎಸ್. ಸ್ವಾಮಿನಾಥನ್ ಮಲ್ಟಿಪ್ಲೆಕ್ಸ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರಾದ ಡಾ. ಜಿ. ಪಿ. ಶೆಟ್ಟಿ ಹಾಗೂ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಮಹೇಶ್ ಜಿ ಶೆಟ್ಟಿ ಅವರನ್ನು ಭೇಟಿಯಾದ ಕ್ಷಣ.**

ಕರ್ನಾಟಕದ ಕೃಷಿ ಕ್ಷೇತ್ರದ ಏಳಿಗೆಗಾಗಿ ಸಲಹೆ ನೀಡಲು ರಾಜ್ಯದ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಲು ಬೆಂಗಳೂರಿಗೆ ಆಮಗಿಸಿದ್ದ ಡಾ. ಸ್ವಾಮಿನಾಥನ್ ಅವರನ್ನು ಮಲ್ಟಿಪ್ಲೆಕ್ಸ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷರು, ನಾಡಿನ ಖ್ಯಾತ ಕೃಷಿ ವಿಜ್ಞಾನಿ ಡಾ. ಜಿ.ಪಿ. ಶೆಟ್ಟಿ ಭೇಟಿ ಮಾಡಿ ಹೂಗುಚ್ಛ ನೀಡಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಲ್ಟಿಪ್ಲೆಕ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಮಹೇಶ್ ಜಿ ಶೆಟ್ಟಿ ಅವರು ಸ್ವಾಮಿನಾಥನ್ ಅವರೊಂದಿಗೆ ಸುಧಾರಿತ ಬೇಸಾಯ ಕ್ರಮಗಳ ಬಗೆಗಿನ ಮಾಹಿತಿ ಹಾಗೂ ಕೃಷಿ ಪರಿಕರಗಳನ್ನು ರೈತರ ಮನೆಬಾಗಿಲಿಗೆ ಕೊಂಡೊಯ್ಯುವ ವಿನೂತನ ಸಾಧ್ಯತೆಗಳ ಬಗೆಗೆ, ಕೃಷಿಯಲ್ಲಿ ಜೈವಿಕ ಪೋಷಕಾಂಶಗಳ ಬಳಕೆ ಹೆಚ್ಚಿಸಲು ತಾವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಿದರು.

ಮಲ್ಟಿಪ್ಲೆಕ್ಸ್ ಸಮೂಹ ಸಂಸ್ಥೆಗಳು ಜೈವಿಕ ಪರಿಕರಗಳಿಗೆ ನೀಡುತ್ತಿರುವ ಪ್ರೋತ್ಸಾಹದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಸ್ವಾಮಿನಾಥನ್ ಡಾ ಜಿ.ಪಿ. ಶೆಟ್ಟಿ ಹಾಗೂ ಮಹೇಶ್ ಜಿ ಶೆಟ್ಟಿ ಅವರನ್ನು ಅಭಿನಂದಿಸಿದರು.

–ಸಂ



# ಕೈಕೊಟ್ಟ ಮುಂಗಾರು ಕಂಗಾಲಾದ ರೈತ ಬರಗಾಲ ಘೋಷಿಸಿದ ಸರ್ಕಾರ

ಕರ್ನಾಟಕ ರಾಜ್ಯದಲ್ಲಿ ತೀವ್ರ ಬರಗಾಲ ತಲೆದೋರಿದೆ. ವಾಡಿಕೆಯ ಮಳೆ ತಡವಾಗಿತ್ತು. ಮಳೆ ಚದುರಿತ್ತು. ಬಿತ್ತನೆ ಪೂರ್ಣಪ್ರಮಾಣದಲ್ಲಿ ಆಗಿರಲಿಲ್ಲ. ಬಿತ್ತನೆ ಮಾಡಿದ ಕಡೆ ಬೆಳೆ ನಲುಗಿದೆ, ಸೊರಗಿದೆ. ರೈತ ಕಂಗಾಲಾಗಿದ್ದಾನೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ರಾಜ್ಯದ ಯಾವಾವ ತಾಲ್ಲೂಕುಗಳಲ್ಲಿ ತೀವ್ರ ಬರಗಾಲ ಪರಿಸ್ಥಿತಿ ಕಂಡುಬಂದಿದೆ ಮತ್ತೆ ಯಾವಾವ ತಾಲ್ಲೂಕುಗಳಲ್ಲಿ ಸಾಧಾರಣ ಬರ ಎದುರಾಗಿದೆ ಎಂದು ಇತ್ತೀಚೆಗೆ ಘೋಷಿಸಿದೆ. ಆ ಬಗ್ಗೆ ಸರ್ಕಾರದ ನಡವಳಿ ವಿವರ ವಾಹಿನಿ ಓದುಗರಿಗಾಗಿ ಇಲ್ಲಿ ನೀಡಲಾಗಿದೆ.

## ಬರ ಹಿನ್ನೆಲೆ

2023 ನೇ ಸಾಲಿನ ನೈರುತ್ಯ ಮುಂಗಾರು ರಾಜ್ಯಕ್ಕೆ ದಿನಾಂಕ 08-06-2023 ರಂದು ಪ್ರವೇಶಿಸಿ 14 ದಿನಗಳಲ್ಲಿ ರಾಜ್ಯದ ಎಲ್ಲೆಡೆ ವ್ಯಾಪಿಸಿತು. ಮುಂಗಾರು ಪ್ರವೇಶವಾಗಲು ಮತ್ತು ವ್ಯಾಪಿಸಲು ನಿರೀಕ್ಷಿತ ದಿನಕ್ಕಿಂತ ಒಂದು ವಾರ ತಡವಾಯಿತು. ಜೂನ್ ತಿಂಗಳಿನಲ್ಲಿ ಮುಂಗಾರು ದುರ್ಬಲಗೊಂಡು ವಾಡಿಕೆಗಿಂತ ಶೇಕಡಾ 56 ರಷ್ಟು ಮಳೆ ಕೊರತೆ ಉಂಟಾಯಿತು. ಜುಲೈ ತಿಂಗಳಿನಲ್ಲಿ ಮುಂಗಾರು ಚುರುಕಾಗಿ ವಾಡಿಕೆಗಿಂತಾ ಶೇಕಡಾ 29 ರಷ್ಟು ಹೆಚ್ಚು ಮಳೆಯಾಗಿದ್ದು, ಆ ಮಳೆಯು ಕೇವಲ ಒಂದು ವಾರ ಮಾತ್ರ ಕೇಂದ್ರೀಕೃತವಾಗಿತ್ತು. ಆಗಸ್ಟ್ ತಿಂಗಳಿನಲ್ಲಿ ವಾಡಿಕೆಗಿಂತಾ ಶೇಕಡಾ 73 ರಷ್ಟು ಮಳೆ ಕೊರತೆಯಾಗಿದ್ದು ಕಳೆದ 125 ವರ್ಷಗಳಲ್ಲಿ ಅತಿ ಕಡಿಮೆ ಮಳೆ ದಾಖಲಾಗಿರುವುದು ಕಂಡುಬಂದಿದೆ.

ದಿನಾಂಕ 01-06-203 ರಿಂದ 19-08-2023 ರ ಅವಧಿಯ ವರದಿಯಂತೆ ರಾಜ್ಯದಲ್ಲಿ 487 ಮಿ.ಮೀ ಮಳೆಯಾಗಿದ್ದು ವಾಡಿಕೆ ಮಳೆ 635 ಮಿ.ಮೀ ಗೆ ಹೋಲಿಸಿದಾಗ ಶೇಕಡಾ 23 ರಷ್ಟು ಮಳೆ ಕೊರತೆ ಕಂಡುಬಂದಿರುತ್ತದೆ. ಬರ ಕೈಪಿಡಿ 2020 ರ ಮಾರ್ಗಸೂಚಿಯನ್ವಯ ಬರ ಘೋಷಿಸಲು ಸೂಚಿಸಿರುವ ಖಡ್ಡಾಯ ಮಾನದಂಡಗಳಾದ ಶೇಕಡಾ 60 ಕ್ಕಿಂತ ಹೆಚ್ಚು ಮಳೆ ಕೊರತೆ ಅಥವಾ ಸತತ ಮೂರು ವಾರಗಳಲ್ಲಿ ಶುಷ್ಕ ವಾತಾವರಣ ಹಾಗೂ ತತ್ಪರಿಣಾಮ ಮಾನದಂಡಗಳಾದ ತೇವಾಂಶ ಕೊರತೆ, ಉಪಗ್ರಹ ಆಧಾರಿತ ಬೆಳೆ ಸೂಚ್ಯಂಕ, ಬೆಳೆ ಬಿತ್ತನೆ ಪ್ರದೇಶ ಹಾಗೂ ಬೆಳೆ ಸಂಪನ್ಮೂಲ ಸೂಚ್ಯಂಕದಲ್ಲಿನ ತೀವ್ರತೆಯನ್ನು ಆಧರಿಸಿ ಮೌಲ್ಯಮಾಪನ ಮಾಡಿ ಒಟ್ಟಾರೆ 113 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಕಂಡುಬಂದಿದೆ.

ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಯ ಕೃಷಿ, ತೋಟಗಾರಿಕೆ ಮತ್ತು ಕಂದಾಯ ಅಧಿಕಾರಿ/ಇತರೆ ಸಿಬ್ಬಂದಿಗಳನ್ನು ಒಳಗೊಂಡ ತಂಡಗಳನ್ನು ರಚಿಸಿ ಬರ ಪರಿಸ್ಥಿತಿ ಕಂಡುಬಂದ 113 ತಾಲ್ಲೂಕುಗಳ 1519 ಗ್ರಾಮಗಳನ್ನು ರಾಂಡಮ್ ಆಗಿ ಗುರುತಿಸಿ ಇವುಗಳಲ್ಲಿನ ಒಟ್ಟು 14,228 ಫ್ಲಾಟ್‌ಗಳಲ್ಲಿ ಮೊಬೈಲ್ ಆಪ್ ಮೂಲಕ ಬೆಳೆ ಹಾನಿ ಕ್ಷೇತ್ರ ದೃಢೀಕರಣವನ್ನು ಕೈಗೊಂಡಿರುತ್ತಾರೆ. ಅದರಂತೆ ಶೇಕಡಾ 50 ಕ್ಕಿಂತ ಹೆಚ್ಚು ಬೆಳೆ ನಷ್ಟವಾಗಿರುವ 62 ತಾಲ್ಲೂಕುಗಳನ್ನು ತೀವ್ರ ಬರ ಹಾಗೂ 33%-50% ರಷ್ಟು ಬೆಳೆ ನಷ್ಟವನ್ನು ವರದಿ ಮಾಡಿರುವ 51 ತಾಲ್ಲೂಕುಗಳು ಸಾಧಾರಣ ಬರ ಎಂದು ವರ್ಗೀಕರಿಸಲಾಗಿದೆ.

ದಿನಾಂಕ 01-06-2023 ರಿಂದ 02-09-2023 ಅವಧಿಯಲ್ಲಿ ರಾಜ್ಯದಲ್ಲಿ 512 ಮಿ.ಮೀ ಮಳೆಯಾಗಿದ್ದು ವಾಡಿಕೆ ಮಳೆಗೆ ಹೋಲಿಸಿದಾಗ ಶೇಕಡಾ 27 ರಷ್ಟು ಮಳೆ ಕೊರತೆ ಕಂಡು ಬಂದಿದೆ. ಬರ ಮಾನದಂಡಗಳನ್ನು ಪರಿಗಣಿಸಿ ಹೊಸದಾಗಿ 83 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಕಂಡುಬಂದಿರುವ ತಾಲ್ಲೂಕುಗಳೆಂದು ಕೆ.ಎಸ್.ಎನ್.ಡಿ.ಎಂ.ಸಿ ಸಂಸ್ಥೆಯು ವರದಿ ನೀಡಿದೆ. ಈ ವರದಿಯನುಸಾರ ರಾಜ್ಯದಲ್ಲಿ 83 ತಾಲ್ಲೂಕುಗಳು ಸೇರಿ 134 ತಾಲ್ಲೂಕುಗಳಲ್ಲಿ ಬೆಳೆ ಹಾನಿ ಕ್ಷೇತ್ರ ದೃಢೀಕರಣ ಕೈಗೊಳ್ಳಲಾಗಿದೆ

ದಿನಾಂಕ 13-09-2023 ರಂದು ಜರುಗಿದ ಸಚಿವ ಸಂಪುಟ ಉಪಸಮಿತಿಯು ಹೆಚ್ಚುವರಿಯಾಗಿ 134 ತಾಲ್ಲೂಕುಗಳಿಗೆ ಜಿಲ್ಲಾಧಿಕಾರಿಗಳಿಂದ ಬೆಳೆ ಹಾನಿ ಸಮೀಕ್ಷೆ ಬಗ್ಗೆ ವರದಿಯನ್ನು



ಪಡೆದು ಪರಿಶೀಲಿಸಿ, ಮೊದಲು ಸಾಧಾರಣೆವೆಂದು ಗುರುತಿಸಲಾದ 51 ತಾಲ್ಲೂಕುಗಳಲ್ಲಿ ಮತ್ತೊಮ್ಮೆ ಬೆಳೆ ಹಾನಿ ಕ್ಷೇತ್ರ ದೃಢೀಕರಣ ಕೈಗೊಂಡ ನಂತರ 41 ತಾಲ್ಲೂಕುಗಳು ತೀವ್ರ ಬರ ವರ್ಗದಲ್ಲಿ ಹಾಗೂ ಉಳಿದ 10 ತಾಲ್ಲೂಕುಗಳು ಸಾಧಾರಣ ಬರ ವರ್ಗದಲ್ಲಿ ಗುರುತಿಸಲಾಗಿದೆ. ಹೊಸದಾಗಿ ಬರಪರಿಸ್ಥಿತಿ ಕಂಡುಬಂದ 83 ತಾಲ್ಲೂಕುಗಳ ಪೈಕಿ 58 ತಾಲ್ಲೂಕುಗಳು ತೀವ್ರ ಬರ ಹಾಗೂ 24 ತಾಲ್ಲೂಕುಗಳು ಸಾಧಾರಣ ಬರವೆಂದು ನಿರ್ಣಯಿಸಿದೆ. ಅದರಂತೆ ಕೇಂದ್ರ ಸರ್ಕಾರ ಬರ ನಿರ್ವಹಣೆ ಕೈಪಿಡಿ 2020 ರಲ್ಲಿ ನೀಡಿರುವ ಬರ ಘೋಷಣೆಯ ಮಾರ್ಗಸೂಚಿಯನ್ವಯ ಬರ ಘೋಷಣೆಯ ಮಾನದಂಡಗಳನ್ನು ಪರಿಗಣಿಸಿ ಒಟ್ಟಾರೆಯಾಗಿ ರಾಜ್ಯದ 31 ಜಿಲ್ಲೆಗಳ 236 ತಾಲ್ಲೂಕುಗಳ ಪೈಕಿ 195 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಕಂಡುಬಂದಿದೆ. ಈ ಎಲ್ಲಾ ತಾಲ್ಲೂಕುಗಳಲ್ಲಿ ಬೆಳೆ ಹಾನಿ ಸಮೀಕ್ಷೆ ಕೈಗೊಂಡ ನಂತರ ಅಂತಿಮವಾಗಿ 161 ತಾಲ್ಲೂಕುಗಳನ್ನು ತೀವ್ರ ಬರ ಪೀಡಿತ ತಾಲ್ಲೂಕುಗಳು ಹಾಗೂ 34 ತಾಲ್ಲೂಕುಗಳನ್ನು ಸಾಧಾರಣ ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲೆಂದು ಅನುಮೋದನೆ ಪಡೆಯಲು ತೀರ್ಮಾನಿಸಲಾಯಿತು.

### ಬರ ಪರಿಸ್ಥಿತಿ ಘೋಷಣೆ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಬರ ನಿರ್ವಹಣೆ ಕೈಪಿಡಿ 2020 ರ ಬರ ಘೋಷಣೆ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ವಯ ಜಿಲಾಧಿಕಾರಿಗಳಿಂದ ಬೆಳೆಹಾನಿ ಸಮೀಕ್ಷೆಯ ವರದಿಯನುಸಾರ 2023 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದ 31 ಜಿಲ್ಲೆಗಳ 236 ತಾಲ್ಲೂಕುಗಳ ಪೈಕಿ 195 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಕಂಡು ಬಂದಿದ್ದು, ಈ ಪೈಕಿ 161 ತಾಲ್ಲೂಕುಗಳಲ್ಲಿ ತೀವ್ರ ಬರಪೀಡಿತ ತಾಲ್ಲೂಕು ಹಾಗೂ 34 ತಾಲ್ಲೂಕುಗಳಲ್ಲಿ ಸಾಧಾರಣ ಬರಪೀಡಿತ ತಾಲ್ಲೂಕು ಎಂದು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ 6 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ 13–09–2023 ರಂದು ಘೋಷಿಸಿ ಆದೇಶಿಸಿದೆ.

### ತೀವ್ರ ಬರಪೀಡಿತ 161 ತಾಲ್ಲೂಕುಗಳು

**ಬೆಂಗಳೂರು ನಗರ:** ಬೆಂಗಳೂರು ಪೂರ್ವ **ಬೆಂಗಳೂರು ಗ್ರಾಮಾಂತರ:** ದೇವನಹಳ್ಳಿ, ದೊಡ್ಡಬಳ್ಳಾಪುರ, ಹೊಸಕೋಟೆ, ನೆಲಮಂಗಲ **ರಾಮನಗರ:** ಕನಕಪುರ, ರಾಮನಗರ, ಹಾರೋಹಳ್ಳಿ **ಕೋಲಾರ:** ಬಂಗಾರಪೇಟೆ, ಕೋಲಾರ, ಮುಳಬಾಗಿಲು, ಶ್ರೀನಿವಾಸಪುರ, ಕೆ.ಜಿ.ಎಫ್ **ಚಿಕ್ಕಬಳ್ಳಾಪುರ:** ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ, ಶಿಡ್ಲಘಟ್ಟ **ತುಮಕೂರು:** ಚಿಕ್ಕನಾಯಕನಹಳ್ಳಿ, ಗುಬ್ಬಿ, ಕೊರಟಗೆರೆ, ಕುಣಿಗಲ್, ಮಧುಗಿರಿ, ಪಾವಘಡ, ಶಿರಾ, ತಿಪಟೂರು, ತುರುವೇಕೆರೆ **ಚಿತ್ರದುರ್ಗ:** ಚಳ್ಳಕೆರೆ, ಚಿತ್ರದುರ್ಗ, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ, ಮೊಳಕಾಲ್ಮೂರು **ದಾವಣಗೆರೆ:** ಚನ್ನಗಿರಿ, ದಾವಣಗೆರೆ, ಹರಿಹರ, ಹೊನ್ನಾಳಿ, ಜಗಳೂರು, ನ್ಯಾಮತಿ, ಮೈಸೂರು, ಹೆಚ್.ಡಿ.ಕೋಟೆ, ಹುಣಸೂರು **ಮೈಸೂರು:** ನಂಜನಗೂಡು, ಪಿರಿಯಾಪಟ್ಟಣ, ಟಿ.ನರಸೀಪುರ, ಸರಗೂರು, ಸಾಲಿಗ್ರಾಮ **ಮಂಡ್ಯ:** ಕೃಷ್ಣರಾಜಪೇಟೆ, ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ **ಬಳ್ಳಾರಿ:** ಸಂಡೂರು, ಬಳ್ಳಾರಿ, ಶಿರಗುಪ್ಪ, ಕುರಗೋಡು, ಕಂಪ್ಲಿ, ಕೊಪ್ಪಳ, ಗಂಗಾವತಿ, **ಕೊಪ್ಪಳ:** ಕುಷ್ಟಗಿ, ಯಲಬುರ್ಗಾ, ಕರಟಗಿ, ಕುಕನೂರು, ಕನಕಗಿರಿ **ರಾಯಚೂರು:** ಲಿಂಗಸುಗೂರು, ಮಾನ್ವಿ, ರಾಯಚೂರು, ಶಿರವಾರ **ಕಲಬುರಗಿ,** ಅಫಜ್ಜಲ್‌ಪುರ, ಆಳಂದ, ಚಿಂಚೋಳಿ, ಚಿತ್ತಾಪುರ, ಕಲುಬುರುಗಿ, ಜೇವರ್ಗಿ, ಸೇಡಂ, ಕಳಗಿ, ಕಮಲಪುರ, ಯಡ್ರಾಮಿ, ಶಾಹಬಾದ್ **ಬೀದರ್:** ಬಾಲ್ಕಿ, ಬಸವಕಲ್ಯಾಣ, ಹುಲಸೂರು **ಬೆಳಗಾವಿ:** ಅಥಣಿ, ಬೈಲಗೊಂಗಲ, ಚಿಕ್ಕೋಡಿ, ಗೋಕಾಕ್, ಹುಕ್ಕೇರಿ, ರಾಮದುರ್ಗ, ರಾಯಬಾಗ್, ಸವದತ್ತಿ, ಕಿತ್ತೂರು, ನಿಪ್ಪಾಣಿ, ಕಾಗವಾಡ, ಮುದಲಗಿ, ಯರಗಟ್ಟಿ

**ಬಾಗಲಕೋಟೆ**: ಬಾದಾಮಿ, ಬಾಗಲಕೋಟೆ, ಬೀಳಗಿ, ಹುನುಗುಂದ, ಜಮಖಂಡಿ, ಮುಧೋಳ, ಗುಳೇದಗುಡ್ಡ, ಇಳಕಲ್, ರಬಕವಿ ಬನಹಟ್ಟಿ **ವಿಜಯಪುರ**, ಬಸವನ ಬಾಗೇವಾಡಿ, ವಿಜಯಪುರ, ಇಚಿಡಿ, ಮುದ್ದೇಬಿಹಾಳ, ಸಿಂದಗಿ, ಬಬ್ಲೇಶ್ವರ, ಚಡಚಣ, ನಿಡಗುಂದಿ, ತಾಳಿಕೋಟೆ, ಕೊಲ್ಹಾರ, ದೇವರಹಿಪ್ಪರಗಿ, ಆಲಮೇಲ **ಗದಗ**: ಗದಗ, ನರಗುಂದ, ರೋಣ, ಶಿರಹಟ್ಟಿ, ಗಜೇಂದ್ರಘಡ, ಲಕ್ಷ್ಮೇಶ್ವರ **ಹಾವೇರಿ**, ಹಿರೇಕೆರೂರು, ಹಾವೇರಿ, ರಾಣೆಬೆನ್ನೂರು, ಸವಣೂರು, ರಟ್ಟಿಹಳ್ಳಿ **ಧಾರವಾಡ**: ಧಾರವಾಡ, ಹುಬ್ಬಳ್ಳಿ, ಕುಂದಗೋಳ, ನವಲಗುಂದ, ಹುಬ್ಬಳ್ಳಿ ನಗರ **ಶಿವಮೊಗ**: ಭದ್ರಾವತಿ, ಹೊಸನಗರ, ಸಾಗರ, ಶಿಕಾರಿಪುರ, ಶಿವಮೊಗ್ಗ, ಸೊರಬ, ತೀರ್ಥಹಳ್ಳಿ **ಹಾಸನ**: ಅರಕಲಗೋಡು: ಚಿಕ್ಕಮಗಳೂರು, ಕಡೂರು, ಅಜ್ಜಂಪುರ **ಕೊಡಗು**: ಮಡಿಕೇರಿ, ವಿರಾಜಪೇಟೆ, ಕುಶಾಲನಗರ **ಉಡುಪಿ**: ಕಾರ್ಕಳ **ಉತ್ತರ ಕನ್ನಡ**: ಹಳಿಯಾಳ, ಮುಂಡಗೋಡ್, ಶಿರಸಿ, ಯಲ್ಲಾಪುರ **ಯಾದಗಿರಿ**, ಶಹಾಪುರ, ವಡಗೇರಾ **ವಿಜಯನಗರ**: ಹೊಸಪೇಟೆ, ಹಡಗಲಿ, ಹಗರಿಬೊಮ್ಮನಹಳ್ಳಿ, ಹರಪ್ಪನಹಳ್ಳಿ, ಕೊಟ್ಟೂರು, ಕೂಡ್ಲಗಿ

### ಸಾಧಾರಣ ಬರ ಪೀಡಿತ 34 ತಾಲ್ಲೂಕುಗಳು

**ಬೆಂಗಳೂರು ನಗರ**: ಆನೇಕಲ್, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಯಲಹಂಕ **ರಾಮನಗರ**: ಚನ್ನಪಟ್ಟಣ, ಮಾಗಡಿ **ಕೋಲಾರ**: ಮಾಲೂರು **ತುಮಕೂರು**: ತುಮಕೂರು **ಚಾಮರಾಜನಗರ**, ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು **ರಾಯಚೂರು**: ದೇವದುರ್ಗ, ಮಸ್ಕಿ, ಹಾಸನ, ಬೇಲೂರು, ಚನ್ನರಾಯಪಟ್ಟಣ, ಹೊಳೆನರಸೀಪುರು, ಸಕಲೇಶಪುರ **ಚಿಕ್ಕಮಗಳೂರು**: ಕೊಪ್ಪ, ನರಸಿಂಹರಾಜಪುರು, ಶೃಂಗೇರಿ, ಕಳಸ **ಕೊಡಗು**: ಸೋಮವಾರಪೇಟೆ **ದಕ್ಷಿಣ ಮಂಗಳೂರು**: ಮೂಡಬಿದ್ರೆ **ಉಡುಪಿ**: ಬ್ರಹ್ಮಾವರ **ಉತ್ತರ ಕನ್ನಡ**: ಅಂಕೋಲ, ಭಟ್ಕಳ, ಕಾರವಾರ, ಕುಮುಟ, ಜೋಯಿಡ (ಸೂಪ) **ಯಾದಗಿರಿ**: ಶೋರಾಪುರ, ಯಾದಗಿರಿ, ಗುರಮಿಟ್ಕಲ್, ಹುಣಸಿಗಿ

–ಸಂ

# ರೈತರ ಹಿತ ಕಾಪಾಡಿ: ಕೇಂದ್ರ ತಂಡಕ್ಕೆ ಸಿಎಂ ಸಲಹೆ



ಕರ್ನಾಟಕ ರಾಜ್ಯದಲ್ಲಿ ಕೇಂದ್ರದ ಬರ ಅಧ್ಯಯನ ತಂಡ ಪ್ರವಾಸದಲ್ಲಿದೆ. ಪ್ರವಾಸಕ್ಕೂ ಮುನ್ನ ತಂಡವನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಅಧಿಕಾರಿಗಳಿಗೆ ರಾಜ್ಯದ ರೈತರ ಹಿತ ಕಾಪಾಡಿ ಎಂದು ಸಲಹೆ ನೀಡಿದ್ದಾರೆ.

ರಾಜ್ಯದ ಬರ ಪರಿಸ್ಥಿತಿಯನ್ನು ವಿವರಿಸಿದ ಮುಖ್ಯಮಂತ್ರಿಗಳು, ಕೇಂದ್ರದ ಮಾರ್ಗಸೂಚಿಯನ್ವಯ 195 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಇನ್ನೂ 32 ತಾಲ್ಲೂಕುಗಳು ನಿಗದಿತ ಮಾನದಂಡಗಳನ್ನು ಪೂರೈಸುತ್ತಿವೆ. ರಾಜ್ಯದಲ್ಲಿ ನೈಋತ್ಯ ಮುಂಗಾರು ವಿಳಂಬದಿಂದ ಹಾಗೂ ಮಳೆಯ ಕೊರತೆಯಿಂದ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ರಾಜ್ಯದಲ್ಲಿ ಶೇ. 90 ರಷ್ಟು ಬಿತ್ತನೆ ಆಗಿದ್ದು, ಅದರಲ್ಲಿ 42 ಲಕ್ಷ ಹೆಕ್ಟೇರ್ ಗೂ ಹೆಚ್ಚು ಪ್ರದೇಶದಲ್ಲಿ ಬೆಳೆಹಾನಿಯಾಗಿದೆ. ರೈತರ ಜಮೀನಿನಲ್ಲಿ ಹಸಿರು ಕಾಣಿಸಿದರೂ ಬೆಳೆಯಿಲ್ಲದ ಪರಿಸ್ಥಿತಿ ಉಂಟಾಗಿದ್ದು, ರಾಜ್ಯದಲ್ಲಿ ಹಸಿರು ಬರ ತಲೆದೋರಿದೆ ಎಂದು ವಾಸ್ತವ ಪರಿಸ್ಥಿತಿಯನ್ನು ವಿವರಿಸಿದರು.

ಪ್ರವಾಸದ ಸಂದರ್ಭದಲ್ಲಿ ರಾಜ್ಯದ ವಸ್ತುಸ್ಥಿತಿಯನ್ನು ಅರಿತು ಕೇಂದ್ರಕ್ಕೆ ಮನವರಿಕೆ ಮಾಡುವ ಮೂಲಕ ರೈತರ ಸಂಕಷ್ಟಕ್ಕೆ ಕೇಂದ್ರ ಸರ್ಕಾರ ತ್ವರಿತವಾಗಿ ಸ್ಪಂದಿಸಬೇಕೆಂದು ಅವರು ಅಭಿಪ್ರಾಯಪಟ್ಟರು.

ಕೊಡಗು ಜಿಲ್ಲೆಯಲ್ಲಿ ಮಳೆ ಕೊರತೆಯಿಂದಾಗಿ ಕೆ.ಆರ್. ಎಸ್. ಅಣೆಕಟ್ಟಿನಲ್ಲಿ ನೀರಿನ ಮಟ್ಟ ಕಡಿಮೆಯಾಗಿದೆ. ಕುಡಿಯುವ ನೀರಿಗಾಗಿಯೇ ರಾಜ್ಯಕ್ಕೆ 33 ಟಿಎಂಸಿ ನೀರಿನ ಅವಶ್ಯಕತೆಯಿದೆ. ಆದರೆ ಮಳೆಯ ಕೊರತೆಯಿಂದ ಆತಂಕದ ಸ್ಥಿತಿ ಎದುರಾಗಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ಸಣ್ಣ ಮತ್ತು ಮಧ್ಯಮ ರೈತರ ಸಂಖ್ಯೆ ಹೆಚ್ಚಿದ್ದು, ಇವರ ದತ್ತಾಂಶವನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ಸಂಗ್ರಹಿಸಲಾಗಿದೆ. ಜೊತೆಗೆ ಬೆಳೆ ಸಮೀಕ್ಷೆಯನ್ನು ಸಹ ಡಿಜಿಟೈಸ್ ಮಾಡಿರುವುದರಿಂದ ನಿಖರ ಮಾಹಿತಿ ದೊರೆಯುವುದು. ರೈತರಿಗೆ ಎನ್.ಡಿ. ಆರ್.ಎಫ್. ಮಾರ್ಗ ಸೂಚಿಯಲ್ಲಿ ನಿಗದಿ ಪಡಿಸಿರುವ ಬೆಳೆ ನಷ್ಟ ಪರಿಹಾರ ಅತ್ಯಂತ ಕಡಿಮೆಯಿದ್ದು, ಹೆಚ್ಚಿಸುವ ಅಗತ್ಯವಿದೆ. ರಾಜ್ಯದಲ್ಲಿ ಹೆಚ್ಚುವರಿಯಾಗಿ ಬೆಳೆ ನಷ್ಟ ಪರಿಹಾರ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಕಂದಾಯ ಇಲಾಖೆ ಕಾರ್ಯದರ್ಶಿ ರಶ್ಮಿ ವಿ. ಮಹೇಶ್, ಕೇಂದ್ರ ತಂಡದ ಮುಖ್ಯಸ್ಥ ಅಜಿತ್ ಕುಮಾರ್ ಸಾಹು ಹಾಗೂ ತಂಡದ ಸದಸ್ಯರು ಉಪಸ್ಥಿತರಿದ್ದರು.

***

# ಬಿ.ಟಿ.ಸಿ

## ಬಯೋ ಎನ್‌ಜೈಮ್

ಹತ್ತಿ ಬೆಳೆಗೆ ಅಗತ್ಯವಿರುವ
ಲಘು ಪೋಷಕಾಂಶಗಳ
ಮಿಶ್ರಣ ಇರುವ ಗೊಬ್ಬರ.
ಇದು ಬೆಳೆಯ ಆರೋಗ್ಯವನ್ನು
ಸಮತೋಲನದಲ್ಲಿಡುವುದಲ್ಲದೆ
ಇಳುವರಿ ಹೆಚ್ಚಿಸುವಲ್ಲಿ
ಸಹಕಾರಿಯಾಗಿರುತ್ತದೆ.



# ಕಲ್ಲಂಗಡಿ
## ಸುಧಾರಿತ ಬೇಸಾಯ




ಡಾ. ಹೆಚ್.ಜಿ. ನಿರಂಜನ್

ಕಲ್ಲಂಗಡಿ ಹಣ್ಣಿನ ಮೂಲ ದಕ್ಷಿಣ ಆಫ್ರಿಕಾ ಎಂದು ಹೇಳಲಾಗಿದೆ. ಇದೀಗ ಭಾರತದಲ್ಲಿ ಬಹಳ ಮುಖ್ಯವಾದ ಹಣ್ಣಿನ ಬೆಳೆಯಾಗಿದೆ. ಕಲ್ಲಂಗಡಿಯನ್ನು ಭಾರತದ ಬಹುತೇಕ ಎಲ್ಲಾ ರಾಜ್ಯಗಳಲ್ಲಿಯೂ ಬೆಳೆಯಲಾಗುತ್ತಿದೆ. ಇದೊಂದು ಬೇಸಿಗೆಯ ಬೆಳೆ. ಈ ಹಣ್ಣು ಮತ್ತಿದರ ಜ್ಯೂಸ್ ದೇಹಕ್ಕೆ ತಂಪೆರೆಯುತ್ತದೆ. ಇದರ ತಿರುಳು ಶೇಕಡಾ 92 ರಷ್ಟು ನೀರು, 0.2 % ಪ್ರೋಟೀನ್, 0.3 ರಷ್ಟು ಮಿನರಲ್ಸ್ ಮತ್ತು 7% ಕಾರ್ಬೋಹೈಡ್ರೇಟ್ಸ್ ಒಳಗೊಂಡಿದೆ.

**ಮಣ್ಣು ಮತ್ತು ವಾತಾವರಣ:** ಮರಳು ಮತ್ತು ಮರುಳು ಮಿಶ್ರಿತ ಗೋಡು ಮಣ್ಣು ಕಲ್ಲಂಗಡಿ ಬೆಳೆಗೆ ಉತ್ತಮ. ಮಣ್ಣಿನ ರಸಸಾರ 6.5 ರಿಂದ 7.5 ಇದ್ದು ಚನ್ನಾಗಿ ನೀರು ಬಸಿದುಹೋಗುವ ಮಣ್ಣು ಒಳ್ಳೆಯದು. ಇದು ಬಿಸಿಲು ಕಾಲದ ಬೆಳೆ, ಹೆಚ್ಚು ಉಷ್ಣಾಂಶವಿರುವ ಪ್ರದೇಶಗಳಲ್ಲಿ ಚನ್ನಾಗಿ ಬೆಳೆಯುತ್ತದೆ. ಬೀಜ ಮೊಳಕೆ ಬರಲು ವಾತಾವರಣದಲ್ಲಿ 25 ರಿಂದ 30 ಡಿಗ್ರಿ ಸೆಲ್ಸಿಯಸ್ ಇದ್ದಲ್ಲಿ ಉತ್ತಮ. ಹಣ್ಣು ಬೆಳೆಯುವಾಗ ಒಣ ಹಾಗೂ ಹೆಚ್ಚಿನ ಉಷ್ಣಾಂಶ ಇರುವ ಹಗಲಿನ ಸಮಯ ಒಳ್ಳೆಯದು. ಹಣ್ಣಿನಲ್ಲಿ ಉತ್ತಮ ಸಕ್ಕರೆ ಅಂಶ ವೃದ್ಧಿಯಾಗಲು ರಾತ್ರಿ ಸಮಯ ತಂಪಾಗಿರಬೇಕು. ಇದೀಗ ರಂಜಾನ್ ಮಾಸದ ಸಮಯಕ್ಕೆ ಕಲ್ಲಂಗಡಿ ಬೆಳೆಯುವುದು ವಾಡಿಕೆಯಾಗಿದೆ. (ಏಪ್ರಿಲ್ ನಿಂದ ಜೂನ್ ಮಾಸ). ಕಟಾವಿನ ಸಮಯದಲ್ಲಿ ಮಳೆ ಬಂದಲ್ಲಿ ಹಣ್ಣಿನ ಸಿಹಿ ಅಂಶ ಕಡಿಮೆಯಾಗುತ್ತದೆ ಮತ್ತು ಹಣ್ಣು ಕೊಳೆ ರೋಗ ಉಲ್ಬಣವಾಗುತ್ತದೆ.

**ಕಲ್ಲಂಗಡಿ ವರೈಟಿಗಳು:** ಮಾರುಕಟ್ಟೆಯಲ್ಲಿ ಎರಡು ವರೈಟಿಗಳಿವೆ

- **ಜೂಬಿಲೀ:** ಪಾರಂಪರಿಕವಾದ 5 ರಿಂದ 7 ಕೆ.ಜಿ ತೂಗುವ ಸಿಪ್ಪೆಯ ಮೇಲೆ ಪಟ್ಟಿಗಳಿರುವ ವರೈಟಿ.



- **ಐಸ್ ಬಾಕ್ಸ್ ವರೈಟಿ:** 2 ರಿಂದ 3 ಕೆ.ಜಿ ಆಯತಾಕಾರದ ಹಣ್ಣುಗಳು, ಪಟ್ಟಿಯುಳ್ಳ ಅಥವಾ ಏಕರೂಪದ ಕಡುಹಸಿರು ಬಣ್ಣದ ಹಣ್ಣು. ಇದು ನಗರ ಪ್ರದೇಶಗಳ ಮಾರುಕಟ್ಟೆಗೆ ಸೂಕ್ತ.



**ಬೀಜದ ಪ್ರಮಾಣ:** 300 ರಿಂದ 400 ಗ್ರಾಂ ಪ್ರತಿ ಎಕರೆಗೆ ಅಥವಾ 4000 ಸಸಿಗಳು. ಬೀಜ ಅಥವಾ ಸಸಿಗಳ ಪ್ರಮಾಣ ವರೈಟಿಯ ಮೇಲೆ ಅವಲಂಭಿತ. ಬೀಜೋಪಚಾರ ಮಾಡಿದ ಬೀಜಗಳನ್ನೇ ಬಳಸಿ ಅಥವಾ ಒಂದು ಎಕರೆಗೆ ಅಗತ್ಯವಿರುವ ಬಿತ್ತನೆ ಬೀಜಗಳಿಗೆ 25 ಗ್ರಾಂ ಚಿರಾಯು ವಿನಿಂದ ಉಪಚರಿಸಿ. ಟ್ರೇಗಳಲ್ಲಿ ಪ್ರತಿ ಗುಣಿಗೆ ಒಂದು ಬೀಜ ಬಿತ್ತನೆ ಮಾಡಿ ಕೋಕೋ ಪೀಟ್‌ನಿಂದ ಮುಚ್ಚಬೇಕು.

ಎಳೆಯ ಸಸಿಗಳನ್ನು ಮಲ್ಟಿಪ್ಲೆಕ್ಸ್ ಪ್ಲಾಂಟ್ ಏಯ್ಡ್ 0.5 ಗ್ರಾಂ/ಲೀ + ಮಲ್ಟಿಪ್ಲೆಕ್ಸ್ ಬಯೋಜೋಡಿ 3 ಗ್ರಾಂ/ಲೀ ನಿಂದ ತೋಯಿಸುವುದರಿಂದ ಶೀತಕೊಳೆ ರೋಗವನ್ನು ತಡೆಗಟ್ಟಬಹುದು. ( ಬಿತ್ತನೆ ಮಾಡಿದ 14–15 ದಿನಗಳಲ್ಲಿ ಸಸಿಗಳು ನಾಟಿಗೆ ಸಿದ್ಧವಾಗುತ್ತವೆ.)

**ಭೂಮಿ ತಯಾರಿ:** ಭೂಮಿಯನ್ನು ಎರಡರಿಂದ ಮೂರು ಬಾರಿ ಉಳುಮೆ ಮಾಡಿ ಮಣ್ಣನ್ನು ಹದಮಾಡಿಕೊಳ್ಳಬೇಕು. ಎರಡು ಅಡಿ ಅಗಲದ ಅರ್ಧ ಅಡಿ ಎತ್ತರದ ಏರು ಮಡಿಗಳನ್ನು ಮಾಡಿಕೊಳ್ಳಬೇಕು. ಸಾಲಿನಿಂದ ಸಾಲಿಗೆ 6 ಅಡಿ ಮತ್ತು ಸಸಿಯಿಂದ ಸಸಿಗೆ 2 ಅಡಿ ಅಂತರ ಕೊಡಬೇಕು.

**ಪೋಷಕಾಂಶಗಳ ನಿರ್ವಹಣೆ:** ಏರು ಮಡಿಗಳ ಮೇಲೆ ಪ್ರತಿ ಎಕರೆಗೆ 10–12 ಟನ್ ಕೊಟ್ಟಿಗೆ ಗೊಬ್ಬರ, 120–150 ಕೆ.ಜಿ ಮಲ್ಟಿಪ್ಲೆಕ್ಸ್ ಅನ್ನಪೂರ್ಣ, 5 ಕೆ.ಜಿ ತ್ರಿಶೂಲ್ ಮತ್ತು 2 ಕೆ.ಜಿ ಸೇಫ್ ರೂಟ್ ಕೊಡಬೇಕು.

ಎನ್.ಪಿ.ಕೆ 40–35–40 ಕೆ.ಜಿ ಪ್ರತಿ ಎಕರೆಗೆ ಕೊಡಬೇಕು. ಶಿಫಾರಸ್ಸು ಮಾಡಿರುವ ಗೊಬ್ಬರ ಯೂರಿಯಾ 30 ಕೆ.ಜಿ, ಗ್ರೀನ್ ಫಾಸ್ಪರಸ್ 150 ಕೆ.ಜಿ, ಗ್ರೀನ್ ಪೊಟ್ಯಾಷ್ 80 ಕೆ.ಜಿ, ಸಮೃದ್ಧಿ 50 ಕೆ.ಜಿ



ಪ್ರತಿ ಎಕರೆಗೆ ಮೂಲಗೊಬ್ಬರವಾಗಿ ಕೊಡಬೇಕು. ಜೊತೆಗೆ ಮಲ್ಟಿಪ್ಲೆಕ್ಸ್ ನವಜೀವನ್ ಜಿ– 10 ಕೆ.ಜಿ ಮತ್ತು ಮಲ್ಟಿಪ್ಲೆಕ್ಸ್ ಸೃಷ್ಟಿ 10 ಕೆ.ಜಿ ಪ್ರತಿ ಎಕರೆಗೆ ಕೊಡಬೇಕು.

**ಡ್ರಿಪ್ ಮತ್ತು ಮಲ್ಚಿಂಗ್ ಅಳವಡಿಕೆ:** ಏರು ಮಡಿಗಳ ಮೇಲೆ 30 ಸೆಂ.ಮೀ ಅಂತರಕ್ಕೆ ಗಂಟೆಗೆ 2 ಲೀಟರ್ ನೀರು ಹರಿಯುವಂತೆ ಹನಿನೀರಾವರಿ ಪೈಪನ್ನು ಅಳವಡಿಸಬೇಕು. ಪ್ರತಿಪಲಿತ (ರಿಫ್ಲೆಕ್ಟೀವ್) ಪ್ಲಾಸಿಕ್ ಮುಚ್ಚುಗೆಯನ್ನು ಬಳಸಿ. 30 ಮೈಕ್ರಾನ್ ದಪ್ಪ ಮತ್ತು 4 ಅಡಿ ಅಗಲದ ಮುಚ್ಚುಗೆ ಪೇಪರ್ ಬೆಳ್ಳಿ ಬಣ್ಣ ಮೇಲ್ಭಾಗಕ್ಕಿರುವಂತೆ ಹಾಸಬೇಕು.

**ಸಸಿ ನಾಟಿ:** ಮುಖ್ಯ ಭೂಮಿಯಲ್ಲಿ ಬೇರುಗಳು ಅಡಚಣೆಯಾಗದಂತೆ ಸಸಿಗಳನ್ನು ನಾಟಿ ಮಾಡಬೇಕು.

## ರಸಾವರಿ ಪದ್ಧತಿ

| | | | |
|---|---|---|---|
| ಸಸ್ಯ ಬೆಳವಣಿಗೆಯ ಹಂತ | 3 ದಿನಗಳ ನಂತರ | ಎನ್.ಪಿ ಪ್ಲಸ್ + ಪ್ಲಾಂಟ್ ಏಯ್ಡ್ +ಬಯೋಜೋಡಿ 5 ಗ್ರಾಂ/ಲೀ | 3 ಕೆ.ಜಿ+ 250 ಗ್ರಾಂ |
| | 7 ದಿನಗಳ ನಂತರ | ಎನ್.ಪಿ ಪ್ಲಸ್+ ಜೀವರಸ್ | 3 ಕೆ.ಜಿ + 1 ಲೀಟರ್ |
| | 12 ದಿನಗಳ ನಂತರ | ಪ್ರಮುಖ್ + ಪ್ರೋಕಿಸಾನ್ ನಿಸರ್ಗ + ತ್ರಿಶೂಲ್ | 3 ಕೆ.ಜಿ + 200 ಗ್ರಾಂ + 1 ಕೆ.ಜಿ + 1 ಲೀಟರ್ |
| | 17 ದಿನಗಳ ನಂತರ | 19:19:19 + ಮಹಾಫಲ್ + ನಾಗ್‌ಕಾರ್ಜಿಮ್ | 3 ಕೆ.ಜಿ + 1 ಲೀಟರ್ + 500 ಗ್ರಾಂ |
| | 21 ದಿನಗಳ ನಂತರ | ಪ್ರಮುಖ್ + ನಿಸರ್ಗ | 3 ಕೆ.ಜಿ + 1ಕೆ.ಜಿ |
| | 25 ದಿನಗಳ ನಂತರ | ಪ್ರಮುಖ್ + MgSo4 + ವಿಶೇಶ್ | 3 ಕೆ.ಜಿ + 2 ಕೆ.ಜಿ +500 ಗ್ರಾಂ |
| ಹೂವು ಮೂಡುವ ಹಂತ | 30 ದಿನಗಳ ನಂತರ | ಟ್ವಿನ್ + ಪ್ರೋಕಿಸಾನ್ | 3 ಕೆ.ಜಿ + 250 ಗ್ರಾಂ |
| ಹಣ್ಣು ಬೆಳೆಯುವ ಹಂತ | 37 ದಿನಗಳ ನಂತರ | ತ್ರಿಶಕ್ತಿ + ಮಲ್ಟಿಕ್ಲಿಯರ್ | 4 ಕೆ.ಜಿ + 500 ಮಿ.ಲೀ |
| | 45 ದಿನಗಳ ನಂತರ | ತ್ರಿಶಕ್ತಿ + ವಿಶೇಶ್ | 4 ಕೆ.ಜಿ + 500 ಗ್ರಾಂ |
| | 52 ದಿನಗಳ ನಂತರ | ಓನ್ಲಿ ಕೆ + ಪ್ರೋಕಿಸಾನ್ | 3 ಕೆ.ಜಿ + 250 ಗ್ರಾಂ |
| | 57 ದಿನಗಳ ನಂತರ | ನೈಟ್ರೋಕಾಲ್ + ಆಲ್ಬೋರ್ | 4 ಕೆ.ಜಿ + 250 ಗ್ರಾಂ |
| | 62 ದಿನಗಳ ನಂತರ | ಓನ್ಲಿ ಕೆ + ಆಲ್ಬೋರ್ ಪ್ಲಸ್ | 3 ಕೆ.ಜಿ + 500 ಗ್ರಾಂ |

**ಕೀಟ ಮತ್ತು ರೋಗಗಳು:** ಕಲ್ಲಂಗಡಿಗೆ ಅನೇಕ ಕೀಟಗಳ ಬಾದೆ ಇರುತ್ತದೆ, ನುಸಿ, ಸಸ್ಯ ಹೇನು, ಜೇಡನುಶಿ, ಹಣ್ಣಿನ ನೊಣ ಮತ್ತು ಸರ್ಪಾಕಾರದ ರಂಗೋಲಿ ಹುಳು.

**ರೋಗಗಳು:** ತುಪ್ಪಳಿನ ರೋಗ, ಬೂದಿ ರೋಗ, ಚಿಬ್ಬು ರೋಗ, ಅಂಟು ಅಂಗಮಾರಿ ರೋಗ, ಫ್ಯುಸೇರಿಯಂ ಅಂಗಮಾರಿ ರೋಗ.













**ಪೋಷಕಾಂಶಗಳ ನಿರ್ವಹಣೆ ಸರಿಯಾಗಿ ಇಲ್ಲದಿದ್ದರೆ, ನೀರಾವರಿ ಸರಿ ಇಲ್ಲದಿದ್ದರೆ ಅಥವಾ ವಾತಾವರಣದಲ್ಲಿ ಏರುಪೇರಾದರೆ ಕಲ್ಲಂಗಡಿಯಲ್ಲಿ ಅನೇಕ ನ್ಯೂನತೆಗಳು ಕಂಡುಬರುತ್ತವೆ. ಬಹಳ ಸಾಮಾನ್ಯವಾದ ನ್ಯೂನತೆ ಎಂದರೆ ಸನ್ ಬರ್ನ್, ಹಣ್ಣು ತುದಿಕೊಳೆ ರೋಗ, ಹಾಲೋ ಹಾರ್ಟ್. ಹಾಗಾಗಿ ಪೋಷಕಾಂಶಗಳು, ಕೀಟ, ರೋಗ ಹಾಗೂ ನ್ಯೂನತೆಗಳು ಬಾರದಂತೆ ನೋಡಿಕೊಳ್ಳಲು ಈ ಕೆಳಗಿನ ಸಿಂಪಡಣೆಗಳನ್ನು ಕೊಡಬೇಕು.**

| | | |
|---|---|---|
| ನಾಟಿ ಮಾಡಿದ 5 ದಿನಗಳ ನಂತರ (ಸಿಂಪಡಣೆ) | ಮಹಾಫಲ್ + ನಾಗ್‌ಮಿಡಾ + ಸ್ಪೀಡ್ + ಮ್ಯಾಕ್ಸಿವೆಟ್ | 3 ಮಿ.ಲೀ/ ಲೀ + 0.5 ಮಿ.ಲೀ/ ಲೀ + 2 ಗ್ರಾಂ/ ಲೀ + ಗ್ರಾಂ/ ಲೀ + 1 ಮಿ.ಲೀ / ಲೀ |
| ನಾಟಿ ಮಾಡಿದ 10–15 ದಿನಗಳ ನಂತರ (ಸಿಂಪಡಣೆ) | ಲಿಕ್ವಿಡ್ ಎನ್ + ಪ್ರೋಕಿಸಾನ್ + ಪೈರಿಫೋ ಇ +ನಾಗ್‌ಕಾರ್ಜಿಮ್ + ಮ್ಯಾಕ್ಸಿವೆಟ್ | 3 ಮಿ.ಲೀ / ಲೀ + 0.5 ಗ್ರಾಂ / ಲೀ + 1.5 ಮಿ.ಲೀ / ಲೀ + 2 ಗ್ರಾಂ / ಲೀ + 1 ಮಿ.ಲೀ/ ಲೀ |
| ನಾಟಿ ಮಾಡಿದ 20–23 ದಿನಗಳ ನಂತರ (ಸಿಂಪಡಣೆ) | ಲಿಕ್ವಿಡ್ ಎನ್ + ಸಮರಸ್ + ಝಿಂಕ್ ಇಡಿಟಿಎ + ಜೋಡಿ + ಮ್ಯಾಕ್ಸಿವೆಟ್ | 3 ಮಿ.ಲೀ + 2.5 ಮಿ.ಲೀ/ ಲೀ + 0.75 ಗ್ರಾಂ / ಲೀ + 2 ಗ್ರಾಂ/ ಲೀ + 1 ಮಿ.ಲೀ/ ಲೀ |
| ನಾಟಿ ಮಾಡಿದ 30 ದಿನಗಳ ನಂತರ (ಸಿಂಪಡಣೆ) | ಪ್ರಣಾಮ್ ಸಿಎ + ನಾಗ್‌ಝೋಲ್+ ನಾಗೋರ್ + ಮ್ಯಾಕ್ಸಿವೆಟ್ | 3 ಮಿ.ಲೀ/ ಲೀ + 2 ಮಿ.ಲೀ/ ಲೀ + 2 ಮಿ.ಲೀ/ ಲೀ ಐ + 1 ಮಿ.ಲೀ/ ಲೀ |
| ನಾಟಿ ಮಾಡಿದ 40 ದಿನಗಳ ನಂತರ (ಸಿಂಪಡಣೆ) | ಕ್ರಾಂತಿ + ಋದ್ಧಿ + ಯೋಧ + ಮ್ಯಾಕ್ಸಿವೆಟ್ | 2.5 ಮಿ.ಲೀ/ ಲೀ + 2 ಗ್ರಾಂ/ ಲೀ + 1 ಗ್ರಾಂ/ ಲೀ + 1 ಮಿ.ಲೀ/ ಲೀ |
| ನಾಟಿ ಮಾಡಿದ 50 ದಿನಗಳ ನಂತರ (ಸಿಂಪಡಣೆ) | ಝೀಗ್ರೀನ್ + ಎಂ ಅಂಡ್ ಎಂ+ ನಾಗ್ಪ್ಯಾಮಿಪ್ರಿಡ್ + ಮ್ಯಾಕ್ಸಿವೆಟ್ | 2 ಮಿ.ಲೀ/ ಲೀ + 3 ಗ್ರಾಂ/ ಲೀ + 0.5 ಗ್ರಾಂ/ ಲೀ + 1 ಮಿ.ಲೀ/ ಲೀ |
| (ಸಿಂಪಡಣೆ) | ಝೀ ಗ್ರೀನ್ + ಆಲ್ಬೋರ್ ಪ್ಲಸ್ + ಮ್ಯಾಕ್ಸಿವೆಟ್ | 2 ಮಿ.ಲೀ + 1 ಗ್ರಾಂ/ ಲೀ + 1.5 ಗ್ರಾಂ / ಲೀಟರ್ + 1 ಮಿ.ಲೀ/ ಲೀಟರ್ |

**ಇಳುವರಿ/ ಕಟಾವು**: ಕುಡಿಗಳು ಒಣಗಿದಾಗ ಕಟಾವು ಮಾಡಬೇಕು, ಹಣ್ಣಿನ ತಳಭಾಗ ಹಳದಿ ಬಣ್ಣಕ್ಕೆ ತಿರುಗಿರುವುದು ಕೂಡಾ ಕಟಾವಿಗೆ ಬಂದಿದೆ ಎಂದರ್ಥ. ಈ ಸಮಯದಲ್ಲಿ ಹಣ್ಣುಗಳನ್ನು ಬಡಿದಾಗ ದಬ್ ದಬ್ ಸದ್ದು ಬರುತ್ತದೆ.

**ಇಳುವರಿ:** ಪ್ರತಿ ಎಕರೆಗೆ ಸರಾಸರಿ 25 ರಿಂದ 35 ಟನ್ ಇಳುವರಿ ಪಡೆಯಬಹುದು.





ಮಲ್ಟಿಪ್ಲೆಕ್ಸ್

# ಫಾಲ್ಕನ್

**ಜೈವಿಕ-ಪ್ರಚೋದಕ**

ಮಲ್ಟಿಪ್ಲೆಕ್ಸ್ ಫಾಲ್ಕನ್ ಸಸ್ಯ ಪೋಷಕಾಂಶಗಳು ಹಾಗೂ ಜೈವಿಕ ಪ್ರಚೋದಕಗಳಾದ ಆಲ್ಜಿನಿಕ್ ಆಮ್ಲ, ವಿಟಮಿನ್, ಆಕ್ಸಿನ್ಸ್ ಮತ್ತು ಗಿಬ್ಬರ್ಲಿನ್ಸ್ ಒಳಗೊಂಡಿದೆ.




ಬೆಳೆಯ ಜೀವಿತಾವಧಿಯಲ್ಲಿ ಮೂರು ಸಿಂಪಡಣೆಗಳನ್ನು ಕೊಡಬೇಕು

ಸಸಿ ನಾಟಿ ಮಾಡಿದ 15 ರಿಂದ 20 ದಿನಗಳಲ್ಲಿ, ಹೂವು ಮೂಡುವ ಸಮಯ ಹಾಗೂ ಕಾಯಿ ಬೆಳವಣಿಗೆಯ ಹಂತದಲ್ಲಿ

## ಪ್ರಯೋಜನಗಳು

ಹವಾಮಾನ ವೈಪರೀತ್ಯವನ್ನು ಸಸ್ಯಗಳು ತಡೆದುಕೊಳ್ಳುವ ಶಕ್ತಿ ವೃದ್ಧಿಯಾಗುತ್ತದೆ.

ಹಣ್ಣಿನಲ್ಲಿ ಸಿಹಿ ಅಂಶ ಹೆಚ್ಚುತ್ತದೆ


ಹಣ್ಣಿನ ಬಣ್ಣ, ಘಮ, ರುಚಿ ಹಾಗೂ ದಾಸ್ತಾನಿಡಬಹುದಾದ ಸಮಯ ಹೆಚ್ಚುತ್ತದೆ

ಬೆಳೆಯ ಗುಣಮಟ್ಟ ಹಾಗೂ ಇಳುವರಿ ಹೆಚ್ಚುತ್ತದೆ

# ಭತ್ತ ಬೆಳೆಯಲ್ಲಿ ಬಿ.ಪಿ.ಹೆಚ್ ಕೀಟ ನಿರ್ವಹಣೆ

ಮೇಘನಾ






ಭಾರತದಲ್ಲಿ ಭತ್ತ ಪ್ರಮುಖ ಧಾನ್ಯ ಬೆಳೆ. ಹೆಚ್ಚಿನ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಭತ್ತ ಬೆಳೆಯುವಾಗ ಅನೇಕ ಪ್ರಾಕೃತಿಕ ಅಡೆತಡೆಗಳು ಎದುರಾಗುತ್ತವೆ. ಅವುಗಳಲ್ಲಿ ಕೀಟ ಬಾದೆಯೂ ಒಂದು. ಭತ್ತ ಬೆಳೆಗೆ ಬರುವ ಕೀಟಗಳಲ್ಲಿ ಕಾಂಡ ಕೊರಕ, ಬಿ.ಪಿ.ಹೆಚ್ (ನೀಲಪರ್ವತ ಲುಗೆನ್ಸ್) ಅಥವಾ ಕಂದು ಸಸ್ಯಜಿಗಿಹುಳು, ಜಿ.ಎಲ್.ಹೆಚ್ ಅಥವಾ ಹಸಿರು ಎಲೆಜಿಗಿಹುಳು ಬಹಳ ಪ್ರಮುಖವಾದವು. ಇಂದು ಬಿ.ಪಿ.ಹೆಚ್ ಬಗ್ಗೆ ತಿಳಿಯೋಣ.

ಈಗಾಗಲೇ ಹೇಳಿದಂತೆ ಭತ್ತಕ್ಕೆ ಬರುವ ಪ್ರಮುಖ ಕೀಟ ಬಿ.ಪಿ.ಹೆಚ್. ಈ ಕೀಟ ಶೇಕಡಾ 40 ರಷ್ಟು ಬೆಳೆ ಹಾನಿ ಮಾಡುತ್ತದೆ. ಕೆಲವೊಮ್ಮೆ ಶೇಕಡಾ 70 ರಷ್ಟು ಬೆಳೆ ಹಾನಿಯುಂಟು ಮಾಡಿರುವ ಉದಾಹರಣೆಗಳೂ ಉಂಟು. ಈ ಕೀಟವು ರ್‍ಯಾಗ್ಡ್ ಸ್ಟಂಟ್ ಮತ್ತು ಗ್ರಾಸಿ ಸ್ಟಮ್ಟ್ ರೋಗಗಗಳನ್ನು ಪಸರಿಸುತ್ತದೆ.

## ಜೀವನಚಕ್ರ

ಹೆಣ್ಣು ಕೀಟಗಳು ಎಲೆಗಳ ನಡುದಿಂಡಿನಲ್ಲಿ ಮೊಟ್ಟೆಗಳನ್ನಿಡುತ್ತವೆ. 4–8 ದಿನಗಳ ಅವಧಿಯಲ್ಲಿ ಮೊಟ್ಟೆಗಳು ಮರಿಯಾಗುತ್ತವೆ. 2–3 ವಾರದಲ್ಲಿ ಪ್ರೌಢಾವಸ್ಥೆಗೆ ತಲುಪುತ್ತವೆ. ಈ ಜೀವನ ಚಕ್ರ ಮರುಕಳಿಸುತ್ತಿರುತ್ತದೆ.

ಮರಿಹುಳುಗಳು ಹಾಗೂ ಪ್ರೌಢಾವಸ್ಥೆಯ ಹುಳುಗಳು ಎಲೆಗಳಲ್ಲಿ ರಸಹೀರುವುದರಿಂದ ಸಸ್ಯಗಳು ಪೋಷಕಾಂಶಗಳನ್ನು ಹೀರಿಕೊಳ್ಳುವ ಪ್ರಮಾಣ ಕಡಿಮೆ ಆಗುತ್ತದೆ. ಎಲೆಗಳು ಸುಟ್ಟಂತಾಗುತ್ತವೆ. ಈ ಕೀಟಗಳ ನಿಯಂತ್ರಣಕ್ಕೆ ದೇಹಾಂತರ್ಗತ ಹಾಗೂ ಸಂಪರ್ಕ ಕೀಟನಾಶಕಗಳು ಉತ್ತಮ.

ಈ ಕೀಟ ಮಾಡುವ ಹಾನಿಯ ಆರಂಭಿಕ ಹಂತದಲ್ಲಿ ಎಲೆಗಳಲ್ಲಿ ಹಳದಿ ಬಣ್ಣದ ವೃತ್ತಾಕಾರದ ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ಕ್ರಮೇಣ ಈ ಮಚ್ಚೆಗಳು ಕಂದು ಬಣ್ಣಕ್ಕೆ ತಿರುಗಿ ಸಸ್ಯಗಳು ಸಾಯುತ್ತವೆ.


## ನಿರ್ವಹಣೆ

- ಭತ್ತ ಬೆಳೆಯುವ ಭೂಮಿ ಹಾಗೂ ಬದುಗಳನ್ನು ಸ್ವಚ್ಛವಾಗಿಡಿ.
- ಸಸ್ಯಗಳನ್ನು ಒತ್ತೊತ್ತಾಗಿ ನಾಟಿ ಮಾಡಬಾರದು. ಹಾಗೆ ಮಾಡಿದಲ್ಲಿ ಬಿ.ಪಿ.ಹೆಚ್. ಸಂತಾನಕ್ಕೆ ಪೂರಕ ವಾತಾವರಣ ನೀಡಿದಂತಾಗುತ್ತದೆ.
- ಕೀಟ ನಿರೋಧಕ ಶಕ್ತಿ ಉಳ್ಳ ತಳಿಗಳನ್ನೇ ಆಯ್ಕೆ ಮಾಡಿಕೊಳ್ಳಿ
- ಶೀಘ್ರ ಫಲಸು ಕೊಡುವ ತಳಿಗಳನ್ನು ಆಯ್ಕೆ ಮಾಡಿಕೊಳ್ಳಿ. ಇದರಿಂದ ಕೀಟದಾಳಿಯ ತೀವ್ರತೆ ಬರುವ ಸಮಯದಲ್ಲಿ ಫಸಲು ಕೈಸೇರಿರುತ್ತದೆ.
- ಭತ್ತದ ಗದ್ದೆಯಲ್ಲಿ ದಿನ ಬಿಟ್ಟು ದಿನ ತೇವಾಂಶ ಇರುವಂತೆ ಮತ್ತು ಭೂಮಿ ಒಣಗಿರುವ ಹಾಗೆ ನೋಡಿಕೊಳ್ಳಿ
- ಹೆಚ್ಚಿನ ಪ್ರಮಾಣದ ಸಾರಜನಕ ಕೊಡಬಾರದು. ಹೆಚ್ಚಿನ ಸಾರಜನಕ ನೀಡುವುದರಿಂದ ಎಲೆಗಳಲ್ಲಿ ಹಸಿರುಬಣ್ಣ ಹೆಚ್ಚಾಗಿ ಬಿ.ಪಿ.ಹೆಚ್. ಕೀಟವನ್ನು ಆಕರ್ಷಿಸುತ್ತದೆ. ಹಾಗಾಗಿ ಸಾರಜನಕವನ್ನು ಕಂತುಗಳಲ್ಲಿ ಕೊಡುವುದು ಒಳ್ಳೆಯದು.

# ಬಿ.ಪಿ.ಹೆಚ್ ನಿರ್ವಹಣೆ



ಕೀಟ ಜೀವನ ಚಕ್ರದ ವಿವಿಧ ಹಂತಗಳಲ್ಲಿ ಕೊಡಬೇಕಾದ ಕೀಟನಾಶಕಗಳನ್ನು ಇಲ್ಲಿ ಸೂಚಿಸಲಾಗಿದೆ. ಪ್ರತಿ ಹಂತಕ್ಕೆ ಸೂಚಿಸಿರುವ ಕೀಟನಾಶಕಗಳ ಗುಂಪಿನಲ್ಲಿ ಯಾವುದಾದರೊಂದು ಸಿಂಪಡಣೆ ಕೊಡಬೇಕು. ಮುಂದಿನ ಸಿಂಪಡಣೆಗೆ ಕೀಟನಾಶಕವನ್ನು ಇಲ್ಲಿ ನಮೂದಿಸಿರುವಂತೆ ಬದಲಿಸಬೇಕು. ಇದರಿಂದ ಕೀಟಗಳು ನಿರೋಧಕ ಶಕ್ತಿ ಬೆಳೆಸಿಕೊಳ್ಳಲಾಗುವುದಿಲ್ಲ. ಕೀಟದ ಸಂತತಿ ಹೆಚ್ಚುವುದಿಲ್ಲ. ಕೀಟ ನಿಯಂತ್ರಣದಲ್ಲಿರುತ್ತದೆ.




**TOXICITY LABEL**

- 3 ಎ – ಸಿಂಥೆಟಿಕ್ ಪೈರೇಥ್ರಾಯಿಡ್ಸ್
- 4 ಎ – ನಿಯೋನಿಸಿಟಿನಾಯಿಡ್ಸ್
- 9 ಬಿ– ಪೈರಿಡಿನೆನ್ ಅಝೋಮೆಥೈನ್ ಡಿರೈವೇಟೀವ್ಸ್
- ಯು ಎನ್* ಅನ್‌ನೋನ್
- ಇತರೆ



# ಅಡಿಕೆ ಬೆಳೆಯಲ್ಲಿ ಪೋಷಕಾಂಶಗಳು ಹಾಗೂ ತೇವಾಂಶ ನಿರ್ವಹಣೆ

ಡಾ. ಎಂ. ನಾರಾಯಣಸ್ವಾಮಿ



**ಕ**ರ್ನಾಟಕದಲ್ಲಿ ವಿವಿಧ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿನ ಕೃಷಿ ಚಟುವಟಿಕೆಗಳಲ್ಲಿ ತನ್ನದೇ ಆದ ವೈವಿಧ್ಯತೆಯನ್ನು ಹೊಂದಿದೆ. ರಾಜ್ಯದಲ್ಲಿ 250 ಮಿ.ಮೀ ಮಳೆಯಿಂದ 7000 ಮಿ.ಮೀ ಮಳೆ ಬೀಳುವ ಜಿಲ್ಲೆಗಳನ್ನು ನೋಡುತ್ತೇವೆ. ಅದರಂತೆ ಮಳೆಯ ಪ್ರಮಾಣವನ್ನು ಆದರಿಸಿ ಮತ್ತು ವಲಯಕ್ಕೆ ಸೂಕ್ತವಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ 1248 ಮಿ.ಮೀ ಇದ್ದು ಮಳೆಯ ಪ್ರಮಾಣವನ್ನು ಆದರಿಸಿ ಮೂರು ವಲಯಗಳಾಗಿ ವಿಂಗಡಣೆ ಮಾಡಲಾಗಿದೆ. ಉತ್ತರ ವಲಯ, ದಕ್ಷಿಣ ವಲಯ ಮತ್ತು ಕರಾವಳಿ ವಲಯ.

ಕರಾವಳಿಯ ವಲಯದ ಸರಾಸರಿ ಮಳೆಯ ಪ್ರಮಾಣ3456 ಮಿ.ಮೀ ಮಳೆಯಿದ್ದು ಕರ್ನಾಟಕದ ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದೆ. ಕರಾವಳಿ ಮತ್ತು ಅರೆಮಲೆನಾಡು ಪ್ರದೇಶಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೂರ್ಗ್ ಮತ್ತು ಅರೆಮಲೆನಾಡಿನ ಜಿಲ್ಲೆಗಳಾದ ಹಾಸನ ಬಾಗದಲ್ಲಿ ಪ್ರದಾನ ಬೆಳೆಯಾಗಿ ಅಡಿಕೆ ಮತ್ತು ಕಾಫಿಯನ್ನು ಬೆಳೆಯುತ್ತಿದ್ದು ಮಿಶ್ರಬೆಳೆಯಾಗಿ ಕಾಳುಮೆಣಸು, ಏಲಕ್ಕಿ, ಕೋಕೋ, ಬೆಳೆಯಲಾಗುತ್ತಿದೆ ಅಲ್ಲದೆ ಭತ್ತ, ಅನಾನಸ್, ಬಾಳೆ, ಶುಂಠಿ ಮತ್ತು ಪಪಾಯವನ್ನು ಬೆಳೆಯಲಾಗುತ್ತಿದೆ.

ಹೆಚ್ಚು ಮಳೆ ಬೀಳುವ ಬಾಗಕ್ಕೆ ಸೂಕ್ತವಾದ ಬೆಳೆಗಳನ್ನು ಮಳೆ ಅಥವಾ ಮಣ್ಣಿನಲ್ಲಿ ತೇವಾಂಶ ಕಡಿಮೆಯಾದಾಗ ಈ ಬೆಳೆಗಳನ್ನು ಕಾಪಾಡುವುದು ಕಷ್ಟಕರ. ವಾಸ್ತವವಾಗಿ ಮಳೆಯ ವಾತಾವರಣವನ್ನು ಅನುಸರಿ ಹೇಳುವುದಾದರೆ ಹಿಂದಿನ ವರ್ಷಗಳಿಗೆ ಹೋಲಿಸಿದಾಗ ಈ ಬಾರಿ 2023-24 ರಲ್ಲಿ ವಾಡಿಕೆಗಿಂತ ಶೇಕಡಾ 72 ರಷ್ಟು ಮಳೆ ಕಡಿಮೆಯಾಗಿರುವುದು ಕಾಣುತ್ತೇವೆ. ಸಾಮಾನ್ಯವಾಗಿ ಮಲೆನಾಡಿನಲ್ಲಿ ಜೂನ್ ಅಥವಾ ಜುಲೈನಲ್ಲಿ ಪ್ರಾರಂಭವಾಗಿ ಸೆಪ್ಟೆಂಬರ್‌ವರೆಗೆ ಧಾರಾಕಾರವಾದ ಮಳೆಯಾಗುವುದು ವಾಡಿಕೆ ಹಾಗೂ ಕೇವಲ ತಿಳಿಸಿದ  ತಿಂಗಳಿಗೆ ಸೀಮಿತವಾಗದೆ ವರ್ಷಪೂರ್ತಿ ಆಗಾಗ ಅಡ್ಡಮಳೆಯಾಗುವುದು ಬೆಳೇಗೆ ಅನುಕೂಲಕರವಾಗುವುದಲ್ಲದೆ ಕೃಷಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಹಾಯಕವಾಗುತ್ತದೆ.

ಆದರೆ ಈ ವರ್ಷ ವರ್ಷದ ಪ್ರಾರಂಭದಿಂದಲೇ ಕೃಷಿಕರು ಬರಗಾಲ ಎದುರಿಸುತ್ತಿದ್ದಾರೆ. ಹೀಗಿರುವಾಗ ಮುಂದಿನ ದಿನಗಳಲ್ಲಿ ಬೆಳೆಯನ್ನು ಕಾಪಾಡುವುದು ಹೇಗೆಂಬ ಯೋಚನೆ ಕೃಷಿಕರಲ್ಲಿ ಮೂಡಿರುವುದು ಸುಳ್ಳಲ್ಲ. ಹಾಗಾಗಿ ಈ ಟಿಪ್ಪಣಿ.

ಈಗ ಅಂದರೆ ಅಕ್ಟೋಬರ್ ನಿಂದ ಪ್ರಾರಂಭವಾಗಿ ಮುಂದಿನ ಜೂನ್ ಜುಲೈವರೆಗೆ ಮಳೆಯಾಗುವುದು ಕಡಿಮೆ. ಆದರೂ ಸಣ್ಣ ಪ್ರಮಾಣದಲ್ಲಿ ಮಳೆ ಆಗಬಹುದು, ಹೀಗಿರುವಾಗ ಮಲೆನಾಡಿನ ಬೆಳೆಗಳನ್ನು ಕಾಪಾಡುವುದು ಕಷ್ಟ. ಅಲ್ಲದೆ ಈ ತೋಟಗಾರಿಕಾ ಬೆಳಗಳಲ್ಲಿ ಆರೋಗ್ಯವಾದ ಹೆಚ್ಚಿನ ಇಳುವರಿ ತೆಗೆಯಲು ಸಾಮಾನ್ಯವಾಗಿ ವರ್ಷಕ್ಕೆ ಎರಡು ಬಾರಿ ಭೂಮಿಯ ಆರೈಕೆ ಮತ್ತು ಅವಶ್ಯಕತೆ ಇದ್ದಲ್ಲಿ ಸಸ್ಯ ಸಂರಕ್ಷಣಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಸಾಮಾನ್ಯ. ಈ ಬಾರಿ ಮಳೆಯಿಲ್ಲದ ಕಾರಣ ಪೋಷಕಾಂಶಗಳ ನಿರ್ವಹಣೆ ಅಥವಾ ಭೂಮಿಯ ಆರೈಕೆ ಮಾಡುವುದು ಕಷ್ಟವಾಗಿದ್ದು ಇರುವ ತೇವಾಂಶವನ್ನು ಹೆಚ್ಚು ಸಮಯ ತಡೆದಿಡುವುದು ಸವಾಲಿನ ವಿಷಯವಾಗಿದೆ.

ಈ ಹಿನ್ನೆಲೆಯಲ್ಲಿ ಮಲೆನಾಡಿನ ಕೃಷಿಕರಿಗೆ ಹೇಳುವ ಕಿವಿಮಾತೇನೆಂದರೆ, ರಸಾಯನಿಕ ಗೊಬ್ಬರಗಳನ್ನು ಯತೇಚ್ಛವಾಗಿ ಕೊಡುವುದಕ್ಕಿಂತ ಮಣ್ಣಿನ ಪರೀಕ್ಷೆ ಆದರಿಸಿ ಅವಶ್ಯಕತೆಗೆ ಅನುಗುಣವಾಗಿ ರಸಾಯನಿಕ ಗೊಬ್ಬರಗಳನ್ನು ನೀಡುವುದು, ಜೊತೆಗೆ ಕೊಟ್ಟಂತಃ ಪೋಷಕಾಂಶಗಳನ್ನು ಸಸ್ಯಗಳು ಸಂಪೂರ್ಣ ಬಳಕೆ ಮಾಡಿಕೊಳ್ಳಲು ಹಾಗೂ ಇರುವಂತಃ ತೇವಾಂಶವನ್ನು ಹಾವಿಯಾಗಿ ಹೋಗದಂತೆ ಎಚ್ಚರವಹಿಸುವುದು ಮುಖ್ಯ.

ಈ ನಿಟ್ಟಿನಲ್ಲಿ ಯೋಚಿಸುವುದಾದಲ್ಲಿ ಭೂಮಿಗೆ ನೀಡೂವ ಸಾವಯವ ಗೊಬ್ಬರ ಪ್ರಮುಖ ಪಾತ್ರವಹಿಸುತ್ತದೆ. ಸಾಮಾನ್ಯವಾಗಿ ಕೃಷಿಕರು ಕೊಟ್ಟಿಗೆ ಗೊಬ್ಬರ ಅಥವಾ ಕುರಿಗೊಬ್ಬರ ಕೊಡುವುದು ವಾಡಿಕೆ. ಈ ಗೊಬ್ಬರಗಳನ್ನು ಭೂಮಿಗೆ ಸೇರಿಸಿದ ಕೆಲವೇ ದಿನಗಳಲ್ಲಿ ಮಣ್ಣಿನಲ್ಲಿ ಮಿಶ್ರಣವಾಗಿ ಕಾಣದಾಗುವುದರಿಂದ ರಾಸಾಯನಿಕ ಗೊಬ್ಬರಗಳ ಸೋರುವಿಕೆ ಮತ್ತು ತೇವಾಂಶವು ಒಣಗಿಹೋಗುತ್ತದೆ. ಆದ್ದರಿಂದ ತೆಂಗಿನ ನಾರಿನಿಂದ ಕೂಡಿದ ಜೈವಿಕ ಸಾವಯವ ಗೊಬ್ಬರ ಅನ್ನಪೂರ್ಣ ಮತ್ತು ಮೈಕೋರೈಜ಼ಾ (ತ್ರಿಶೂಲ್) ಕೊಡುವುದರಿಂದ ಕೊಟ್ಟಂತಃ ರಸಾಯನಿಕ ಗೊಬ್ಬರ ಸೋರಿಕೆ ಹಾಗೂ ತೇವಾಂಶ ಹಾವಿಯಾಗಿ ಹೋಗುವುದನ್ನು ತಡೆಯಬಹುದು. ಅನ್ನಪೂರ್ಣದಲ್ಲಿ ಶೇಕಡಾ 60 ರಷ್ಟು ತೆಂಗಿನ ನಾರಿನಂಶವಿದ್ದು, ನಾರಿನಲ್ಲಿ ಲಿಗನಿನ್ ಅಂಶವಿರುವುದರಿಂದ ಮಣ್ಣಿನಲ್ಲಿ ತೆಂಗಿನ ನಾರು ಬೇಗ ಕಳಿಯುವುದಿಲ್ಲ, ಇದರ ಜೊತೆಗೆ ಮೈಕೋರೈಜ಼ಾ (ತ್ರಿಶೂಲ್) ಬಳಸುವುದರಿಂದ – ಇದು ಬೆಳೆಯಲು ಬೇರುಗಳ ಅವಶ್ಯಕತೆಯಿದ್ದು ಬೇರಿನ ಮೇಲೆ ಬೆಳೆದು ಮೈಕೋರೈಜ಼ಾವಿನ ಮೈಸಿಲಿಯಾ ವಿಶಾಲವಾಗಿ ಚಾಪೆಯಂತೆ ಮಣ್ಣಿನಲ್ಲಿ ಬೆಳೆಯುವುದರಿಂದ ತೇವಾಂಶ ಹಾವಿಯಾಗಿ ಹೋಗದಂತೆ ತಡೆಯುವುದಲ್ಲದೆ ಬೇರು ಜಂತುಳುಳು ಮತ್ತು ಮಣ್ಣಿನ ಸವಕಳಿಯಿಂದ ಕಾಪಾಡುತ್ತದೆ. ಇದರೊಂದಿಗೆ ಸೋರಿಕೆಯಾಗಿ ಬೇರಿನಿಂದ ದೂರ ಸರಿದಿರುವ ಪೋಷಕಾಂಶಗಳನ್ನು ಹೀರಿ ಬೇರಿಗೆ ಒದಗಿಸುತ್ತದೆ ಹಾಗೂ ಮಣ್ಣಿನಲ್ಲಿ ಲಭ್ಯವಿಲ್ಲದ ರೀತಿಯಲ್ಲಿ ಶೇಖರಣೇಯಾಗಿರುವ ರಂಜಕವನ್ನು ಕರಗಿಸಿ ಕೊಡಲು ಸಹಾಯ ಮಾಡುತ್ತದೆ. ಆದ್ದರಿಂದ ಮಲೆನಾಡಿನ ಕೃಷಿಕರಿಗೆ ತಿಳಿಸುವ ವಿಷಯವಿಷ್ಟೇ. ಜೈವಿಕ ಸಾವಯ ಅಗೊಬ್ಬರ ಅನ್ನಪೂರ್ಣ ಮತ್ತು ಮೈಕೋರೈಜ಼ಾವನ್ನು ಬಳಕೆ ಮಾಡಿಕೊಂಡು ಅವಶ್ಯಕತೆ ಮತ್ತು ವಾತಾವರಣವನ್ನು ಅನುಸರಿಸಿ ಶಿಫಾರಸ್ಸಿನ ರಾಸಾಯನಿಕ ಗೊಬ್ಬರಗಳನ್ನು ಕೊಟ್ಟು ಬೆಳೆ ಆರೈಕೆ ಮಾಡುವುದು ಒಳ್ಳೆಯದು.

ವಾತಾವರಣ, ಸಸ್ಯದ ಬೆಳವಣಿಗೆ ಹಾಗೂ ಮುಂದಿನ ಇಳುವರಿಯನ್ನಾಧರಿಸಿ ಇರುವಂತಃ ಅಡಿಕೆ ಮರಗಳನ್ನು ಕಾಪಾಡಲು ಇಲ್ಲಿ ಸೂಚಿಸಿರುವ ಗೊಬ್ಬರಗಳನ್ನು ಕೊಡುವುದು ಅವಶ್ಯ.

**ಸಾವಯವ ಗೊಬ್ಬರ – ಪ್ರತಿ ಮರಕ್ಕೆ**

| | |
|---|---|
| ಅನ್ನಪೂರ್ಣ | 2–3 ಕೆ.ಜಿ |
| ತ್ರಿಶೂಲ್ (ಮೈಕೋರೈಜ಼ಾ) | 100 ಗ್ರಾಂ |
| ಯೂರಿಯಾ | 115 ಗ್ರಾಂ |
| ಡಿಎಪಿ | 65 ಗ್ರಾಂ |
| ಎಂಒಪಿ | 140 ಗ್ರಾಂ |
| ಮಲ್ಟಿಪ್ಲೆಕ್ಸ್ ಸಮೃದ್ಧಿ | 150 ಗ್ರಾಂ |
| ಮಲ್ಟಿಪ್ಲೆಕ್ಸ್ ಅಡಿಕೆ ಸ್ಪೆಷಲ್ | 65 ಗ್ರಾಂ |

ಶಿಫಾರಸ್ಸಿನಂತೆ ಪಟ್ಟಿಮಾಡಿದ ಸಮತೋಲನ ಪೋಷಕಾಂಶಗಳನ್ನೊಳಗೊಂಡ ರಾಸಾಯನಿಕ ಗೊಬ್ಬರಗಳನ್ನು ಮಿಶ್ರಣ ಮಾಡಿಕೊಂಡು ಅಡಕೆ ಮರದಿಂದ ಒಂದೂವರೆ ಅಡಿ ದೂರದಲ್ಲಿ ಬೇರು ಕಾಣುವ ಮಟ್ಟಕ್ಕೆ ಮಣ್ಣನ್ನು ಬಿಡಿಸಿ ಮೊದಲಿಗೆ ಶಿಫಾರಸ್ಸಿನ ಅನ್ನಪೂರ್ಣ, ತ್ರಿಶೂಲ್ ಕೊಟ್ಟು ನಂತರ ಸೂಚಿಸಿದ ರಸಾಯನಿಕ ಗೊಬ್ಬರಗಳ ಮಿಶ್ರಣವನ್ನು ಮರದ ಸುತ್ತ ಸಾವಯವ ಗೊಬ್ಬರದ ಮೇಲೆ ಕೊಟ್ಟು ಗೊಬ್ಬರ ಮುಚ್ಚುವ ಮಟ್ಟಕ್ಕೆ ಮಣ್ಣನ್ನು ಮುಚ್ಚಿ ತೇವಾಂಶ ಹಾವಿಯಾಗಿ ಹೋಗದಂತೆ ಸೋಗೆಯ ಹೊದಿಕೆಯನ್ನು ಕೊಡಬೇಕು. ಚಳಿಗಾಲ ಮುಗಿದು ಬೇಸಿಗೆ ಸಮೀಪಿಸುತ್ತಿದ್ದಂತೆ ತೋಟದ ಸುತ್ತಾ ಕಟ್ಟಿಗೆಯ ಅಥವಾ ಅಗಸೆ ಸಸಿಯನ್ನು ತಡೆಗೋಡೆಯಂತೆ ಬೆಳೆಸಿ ಗಾಳಿ ತೋಟದ ಮುಖಾಂತರ ಹಾದುಹೋಗದಂತೆ ಮುನ್ನೆಚ್ಚರಿಕೆ ಕ್ರಮವಹಿಸುವುದರಿಂದ ಇರುವಂತಃ ತೇವಾಂಶವನ್ನು ಹೆಚ್ಚು ಸಮಯ ಕಾಪಾಡಬಹುದು. ಇದರ ಜೊತೆಗೆ ಕಳೆನಿಯಂತ್ರಣಕ್ಕೆ ಈ ಬಾರಿ ಕಳೆನಿಯಂತ್ರಕಗಳನ್ನು ಸಿಂಪಡಿಸುವ ಬದಲು ಕಳೆ ಕತ್ತರಿಸುವ ಯಂತ್ರಗಳನ್ನು ಬಳಕೆ ಮಾಡಿಕೊಂಡು ಬೆಳೆದಿರುವ ಹುಲ್ಲನ್ನು ಕತ್ತರಿಸಿ ಮಣ್ಣಿಗೆ ಹೊದಿಕೆ ಕೊಡುವುದರಿಂದ ತೇವಾಂಶವನ್ನು ಹೆಚ್ಚು ಸಮಯ ತಡೆದಿಡಲು ಸಹಾಯಕವಾಗುವುದಲ್ಲದೆ ಗುಣಮಟ್ಟದ ಹೆಚ್ಚಿನ ಇಳುವರಿ ಪಡೆಯಲು ಸಹಾಯಕವಾಗುತ್ತದೆ.



# ತುಂಗಭದ್ರಾ ಅಚ್ಚುಕಟ್ಟು ರೈತರಿಗೆ ನವೆಂಬರ್ 30 ರ ತನಕ ನೀರು



ತುಂಗಭದ್ರಾ ಜಲಾಯಶಯದಲ್ಲಿ ಪ್ರಸ್ತುತ 53 ಟಿಎಂಸಿ ನೀರಿನ ಲಭ್ಯತೆ ಇದ್ದು, ಎಡದಂಡೆ ಮುಖ್ಯಕಾಲುವೆಗೆ 4100 ಕ್ಯೂಸೆಕ್ ನಂತೆ ನ.30ರವರೆಗೆ ನೀರಿನ ಲಭ್ಯತೆ ಆಧಾರದ ಮೇಲೆ ನೀರು ಹರಿಸಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರೂ ಆದ ತುಂಗಭದ್ರಾ ನೀರಾವರಿ ಸಲಹಾ ಸಮಿತಿ ಅಧ್ಯಕ್ಷ ಶಿವರಾಜ್ ತಂಗಡಗಿ ಅವರು ಅಕ್ಟೋಬರ್ 5 ನೇ ತಾರೀಖಿನಂದು ನಡೆದ ಸಭೆಯಲ್ಲಿ ಹೇಳಿದ್ದಾರೆ.

ವಿಕಾಸಸೌಧದಲ್ಲಿ ಗುರುವಾರ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ತುಂಗಭದ್ರಾ ಯೋಜನೆಯ ತುರ್ತು ನೀರಾವರಿ ಸಲಹಾ ಸಮಿತಿ ಸಭೆ ಬಳಿಕ ಸಚಿವರು ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ ಈ ವಿಷಯ ಬಹಿರಂಗಪಡಿಸಿದರು.

ತುಂಗಭದ್ರಾ ಬಲದಂಡೆ ಮೇಲ್ಮಟ್ಟದ ಕಾಲುವೆಗೆ ನ.10ರವರೆಗೆ 1000 ಕ್ಯೂಸೆಕ್ಸ್ ನಂತೆ(ಖಟಿಭಿಟಣಜುಟಿರ ಟಥಿಭ), ಜಲಾಶಯದ ನೀರಿನ ಮಟ್ಟ 1600ಅಡಿ ತಲುಪುವವರೆಗೆ ಲಭ್ಯತೆ ಅನುಸಾರ ಮುಂಬರುವ ಒಳಹರಿವಿನ ಪರಿಗಣಿಸಿ ಮುಂದುವರೆಸಲಾಗುವುದು ಎಂದು ತಿಳಿಸಿದರು.

ಬಲದಂಡೆ ಕೆಳಮಟ್ಟದ ಕಾಲುವೆಗೆ ನ.30ರವರೆಗೆ 850 ಕ್ಯೂಸೆಕ್ಸ್ ನ ಬದಲಾಗಿ 750 ಕ್ಯೂಸೆಕ್ಸ್ ನಂತೆ, ತುಂಗಭದ್ರಾ ಎಡದಂತೆ ಮೇಲ್ಮಟ್ಟದ ಕಾಲುವೆಗೆ ನ.30ವರೆಗೆ 23 ಕ್ಯೂಸೆಕ್ಸ್ ನಂತೆ ನೀರು ಹರಿಸಲಾಗುವುದು. ಉಳಿದಂತೆ ಇನ್ನು ರಾಯ ಬಸವಣ್ಣ ಕಾಲುವೆಗೆ ನ. 30ರವರೆಗೆ ಒಟ್ಟು ಕೊರತೆ ಬೀಳುವ ನೀರು 0.109 ಟಿಎಂಸಿ ಆಗಲಿದೆ. ಪ್ರಸ್ತುತ ಕಾಲುವೆಯಲ್ಲಿ ಕಾಮಗಾರಿ ಕೈಗೊಳ್ಳುವುದರಿಂದ ಡಿ.10ರಿಂದ ಫೆ.10ರತನಕ ನೀರು ಸ್ಥಗಿತಗೊಳಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಜಲಾಶಯದಲ್ಲಿ ನೀರಿನ ಸಂಗ್ರಹ ಲಭ್ಯತೆ ಹಾಗೂ ರೈತರಿಗೆ ಈ ಹಿಂದೆ ತಾವು ನೀಡಿದ್ದ ಭರವಸೆಯಂತೆ ಈ ತೀರ್ಮಾನ ಕೈಗೊಳ್ಳಲಾಗಿದೆ, ಪ್ರಸ್ತುತ ಡ್ಯಾಂ ನಲ್ಲಿ ಐದು ಟಿಎಂಸಿ ನೀರು ಕೊರತೆ ಇದ್ದು, ಒಳ ಹರಿವಿನ ಪ್ರಮಾಣ ಕಡಿಮೆಯಾಗಿದೆ. ರೈತರು ಆತಂಕಪಡುವ ಅಗತ್ಯವಿಲ್ಲ ಎಂದರು.



ಆಂಧ್ರ ಕೋಟಾದಲ್ಲಿ ನೀಡಲಾಗುವ ನೀರನ್ನು ನಮಗೆ ಬಿಡುವಂತೆ ಅಲ್ಲಿನ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗುವುದು. ಈ ಹಿಂದೆ 2018ರಲ್ಲಿ ನೀರಿಗೆ ಸಮಸ್ಯೆಯಾದಾಗ ತೆಲಂಗಾಣ ಸರ್ಕಾರಕ್ಕೆ ಮನವಿ ಮಾಡಿಕೊಂಡಾಗ ಅಲ್ಲಿನ ಸರ್ಕಾರ ಅವರ ಪಾಲಿನ ಒಂದು ಟಿಎಂಸಿ ಯಷ್ಟು ನೀರು ನೀಡಿತ್ತು. ಪ್ರಸ್ತುತ ಅಲ್ಲಿನ ಸರ್ಕಾರಕ್ಕೆ ಇಲ್ಲಿನ ವಾಸ್ತವ ಸ್ಥಿತಿ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ವಿವರಿಸಿದರು.

### ರೈತರ ಹಿತ ಕಾಪಾಡಲು ಸರ್ಕಾರ ಬದ್ಧ

ಈ ಹಿಂದೆ ಆಗಸ್ಟ್ ನಲ್ಲಿ ಸಲಹಾ ಸಮಿತಿ ಸಭೆ ನಡೆಸಿದ ನಮಗೆ 11 ಟಿಎಂಸಿ ನೀರಿನ ಲಭ್ಯತೆ ಕೊರತೆ ಇತ್ತು. ಮಲೆನಾಡು ಭಾಗದಲ್ಲಿ ಮಳೆಯಾಗುತ್ತದೆ ಎಂದು ಭಾವಿಸಿದ್ದೆವು. ಸೂಕ್ತ ಮಳೆಯಾಗದ ಕಾರಣ ಇದೀಗ ನೀರಿಗೆ ಸಮಸ್ಯೆ ಎದುರಾಗಿದೆ. ತುಂಗಭದ್ರಾ ಎಡದಂಡೆಯ ರೈತರು ಪ್ರಸುತ್ತ ಐದು ಲಕ್ಷಕ್ಕಿಂತ ಹೆಚ್ಚು ಭತ್ತ ಬೆಳೆದಿದ್ದಾರೆ. ಒಟ್ಟು 2,300 ಕೋಟಿಯಷ್ಟು ಬೆಳೆ ಇದೆ. ಆ ಬೆಳೆಯನ್ನು ಉಳಿಸುವ ಕೆಲಸ ಮಾಡಬೇಕಿದ್ದು, ರೈತರ ಹಿತ ಕಾಪಾಡಲಾಗುವುದು ಎಂದರು.

ಸಭೆಯಲ್ಲಿ ಸಚಿವರಾದ ಶರಣ್ ಪ್ರಕಾಶ್ ಪಾಟೀಲ್, ಎನ್. ಎಸ್.ಬೋಸರಾಜ್, ಬಿ.ನಾಗೇಂದ್ರ, ಸಂಸದ ಕರಡಿ ಸಂಗಣ್ಣ, ಶಾಸಕರಾದ ಬಸನಗೌಡ ತುರುವಿಹಾಳ್, ಎಚ್.ಆರ್.ಗವಿಯಪ್ಪ, ಹಂಪನಗೌಡ ಬಾದರ್ಲಿ, ಗಣೇಶ್, ರೈತ ಮುಖಂಡರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪ್ರತಿ ಸಂಚಿಕೆಯ ಪುಟ 32, 33 ರಲ್ಲಿ ಪ್ರಕಟವಾಗುತ್ತಿದ್ದ ಕೃಷಿ ಇಲಾಖೆಯ "ರೈತರಿಗೆ ಸಲಹೆ" ಈ ಸಂಚಿಕೆಯಲ್ಲಿ ಬರಗಾಲದ ಕಾರಣ ಪ್ರಕಟ ಮಾಡಿಲ್ಲ. ಬದಲಿಗೆ ಸರ್ಕಾರದ ಎರಡು ಸುದ್ದಿಗಳನ್ನು ವಾಹಿನಿ ಓದುಗರಿಗಾಗಿ ನೀಡಲಾಗಿದೆ.

–ಸಂ



# ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳು ಜಾಗತೀಕರಣದಲ್ಲಿ ಮುಂದಿವೆ

ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳು ಜಾಗತೀಕರಣದಲ್ಲಿ ಮುಂಚೂಣಿಯಲ್ಲಿವೆ. ಅತ್ಯಾಧುನಿಕ ತಾಂತ್ರಿಕತೆಯಲ್ಲಿ ಎರಡು ದಶಕಗಳಿಂದ ಅಭಿವೃದ್ಧಿ ಹೊಂದುವಲ್ಲಿ ಮೈಲಿಗಲ್ಲು ಸಾಧಿಸಿವೆ ಎಂದು ವಿಶ್ರಾಂತ ಉಪ ಮಹಾ ನಿರ್ದೇಶಕರು, ಅಂತರಾಷ್ಟ್ರೀಯ ಅರೆ-ಶುಷ್ಕ ಉಷ್ಣವಲಯ ಬೆಳೆಗಳ ಸಂಶೋಧನಾ ಸಂಸ್ಥೆ, ಹೈದರಾಬಾದ್ ಮತ್ತು ಮೈಸೂರಿನ ಜಿ.ಆರ್.ಎಸ್.ವಿ. ಸಲಹಾ ಸೇವೆಗಳ ಸಹ-ಸಂಸ್ಥಾಪಕರಾದ ಸಿ.ಎಲ್. ಲಕ್ಷ್ಮೀಪತಿ ಗೌಡ ಅವರು ತಿಳಿಸಿದರು.

ಜಿಕೆವಿಕೆ ಆವರಣದ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರಾಷ್ಟ್ರೀಯ ಸಮಾವೇಶ ಭವನದಲ್ಲಿ 58ನೇ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸಿ, ಪ್ರಶಸ್ತಿ ವಿತರಿಸಿ ಮಾತನಾಡಿದ ಅವರು ಬೆಂಗಳೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯ ಮತ್ತು ಭಾರತದಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆಗೆ ಗಣನೀಯವಾಗಿ ಕೊಡುಗೆ ನೀಡುತ್ತಿದೆ. ಈ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ದೇಶ, ವಿದೇಶಗಳಲ್ಲಿ ಕೃಷಿ ಆರ್ ಅಂಡ್ ಡಿ ವಲಯದಲ್ಲಿ ಮಹತ್ವದ ಪ್ರಭಾವ ಬೀರಿದ್ದಾರೆ ಎಂದು ತಿಳಿಸಿದರು.

ಬೆಳೆ ತಂತ್ರಜ್ಞಾನಗಳು ಮತ್ತು ಒಣಭೂಮಿ ಬೆಳೆ ಸುಧಾರಣೆ ಶ್ಲಾಘನೀಯವಾಗಿದೆ. ಯುಎಎಸ್‌ಬಿ ವಿಜ್ಞಾನಿಗಳು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ವಿವಿಧ ವಲಯಗಳಲ್ಲಿ ಕೃಷಿಗಾಗಿ ಹಲವು ಹೊಸ ಬೆಳೆ ತಳಿಗಳನ್ನು ಬಿಡುಗಡೆ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಹೊಸ ತಳಿಗಳ ಸಂಶೋಧನೆಯು ಇನ್ನಷ್ಟು ಆಗಬೇಕು. ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುವುದರಲ್ಲಿ ಸತತ ಪ್ರಯತ್ನವಿರಬೇಕು ಎಂದರು.


ಅಂತಾರಾಷ್ಟ್ರೀಯ ಕೃಷಿ ಸಂಶೋಧನಾ ಕೇಂದ್ರವಾದ ಅರೆ-ಶುಷ್ಕ ಉಷ್ಣವಲಯ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ ನನ್ನ 4 ದಶಕಗಳ ವೃತ್ತಿಜೀವನವು ಸಾಗಿತ್ತು. ದೇಶ ವಿದೇಶಗಳಲ್ಲಿ ಮತ್ತು ಕೃಷಿ ಇಲಾಖೆಯ ವಿಸ್ತರಣಾ ಸಿಬ್ಬಂದಿಗಳೊಂದಿಗೆ ಕೆಲಸ ಮಾಡಿದ್ದೇನೆ. 2020 ಕೋವಿಡ್ ಸಾಂಕ್ರಾಮಿಕ ರೋಗದ ನಂತರ ವಿಶ್ವವಿದ್ಯಾಲಯಗಳೊಂದಿಗಿನ ನನ್ನ ಸಂವಹನಗಳು ಬಹಳ ಸೀಮಿತವಾಗಿವೆ ಎಂದರು.

ವಿದ್ಯಾರ್ಥಿಗಳು ಪದವಿ ಕೋರ್ಸ್‌ಗೆ ಸೇರುವ ಮತ್ತು ವಿಶ್ವವಿದ್ಯಾನಿಲಯದಿಂದ ಪದವಿ ಪಡೆಯುವ ಸಮಯದ ನಡುವೆ ಶೇ. 25 ರಷ್ಟು ಹೊಸ ತಂತ್ರಜ್ಞಾನ ಮತ್ತು ಜ್ಞಾನವು ಉತ್ಪತ್ತಿಯಾಗುತ್ತದೆ. ಶಿಕ್ಷಕರು ಬೋಧನೆಯಲ್ಲಿ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನದಲ್ಲಿ ಮುಂದುವರೆದು ದೇಶಕ್ಕೆ ಕೀರ್ತಿ ತರಬೇಕು ಎಂದರು.

ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯು ಕೇವಲ ಪುಸ್ತಕಕ್ಕೆ ಸೀಮಿತವಾಗದೆ ಜ್ಞಾನಾರ್ಜನೆಗೆ ಅನುಕೂಲವಾಗಿದೆ. ಇದರಿಂದ ವಿದ್ಯಾರ್ಥಿಗಳ ಭವಿಷ್ಯವು ಉತ್ತಮವಾಗಿ ನಿರ್ಮಾಣವಾಗಲು ಸಹಾಯವಾಗುತ್ತದೆ ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ: ಎಸ್.ವಿ. ಸುರೇಶ, ಅವರು ಮಾತನಾಡಿ, ಸಂಸ್ಥಾಪನಾ ದಿನವನ್ನು ಆಚರಿಸುವುದರಿಂದ ಕೃಷಿ ವಿಶ್ವವಿದ್ಯಾಲಯದ ಏಳಿಗೆಗೆ ಶ್ರಮಿಸಿದವರನ್ನು ಸ್ಮರಿಸಿಕೊಳ್ಳಲು ಸದಾವಕಾಶವಾಗಿದೆ. ಬೀಜ ಪೂರೈಕೆ ಸರಪಳಿಯಲ್ಲಿನ ಅಡೆತಡೆಗಳನ್ನು ನಿವಾರಿಸಲು ಈ ವರ್ಷದಿಂದ ಕೃಷಿಮೇಳದಲ್ಲಿ ಬೀಜ ಮೇಳವನ್ನು ಆಯೋಜಿಸಲು ರೂಪುರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸರ್ಕಾರಿ - ಖಾಸಗಿ ಸಹಭಾಗಿತ್ವದಲ್ಲಿ ಬೀಜ ಉತ್ಪಾದನೆಯ ಬಗ್ಗೆ ಸಂಶೋಧನೆ ಕೈಗೊಳ್ಳಲು ಕ್ರಮಕೈಗೊಳ್ಳಲಾಗುವುದು. ವಿದೇಶ ವಿಶ್ವವಿದ್ಯಾನಿಲಯಗಳ ಜೊತೆ ಒಡಂಬಡಿಕೆ ಮಾಡಿಕೊಂಡು ಏಕಕಾಲದಲ್ಲಿ ಎರಡು ಸ್ನಾತಕ ಪದವಿಗಳನ್ನು ಪಡೆಯುವ ಅವಕಾಶ ಕಲ್ಪಿಸಲಾಗಿದೆ. ಕೃಷಿ ವಿಸ್ತರಣೆ, ಕೃಷಿ ಶಿಕ್ಷಣ ಮತ್ತು ಕೃಷಿ ಸಂಶೋಧನೆಯಲ್ಲಿ ಸಮಗ್ರ ಅಭಿವೃದ್ಧಿಗೆ ಕೃಷಿ ವಿಶ್ವವಿದ್ಯಾನಿಲಯ ಅನೇಕ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ರೈತರ ಏಳಿಗೆಗೆ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಹಾಗೂ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಸಂಪಾದಕ

ಪ್ರಿಯ ರೈತ ಬಂಧುಗಳೇ,

## ಪ್ರಕೃತಿಯ ಮುನಿಸಿಗೆ – ಸಾಲದ ಹೊರೆಗೆ ರೈತನ ಬಲಿಯನ್ನು ಸಹಿಸಲಾಗದು.

ಅಕ್ಟೋಬರ್ 6, 2023 ರಂದು ಡೆಕನ್ ಹೆರಾಲ್ಡ್ ಪತ್ರಿಕೆಯ ವರದಿಯೊಂದು ಎದೆ ನಡುಗಿಸಿತು. ತೊಗರಿ ಬೆಳೆಗೆ ಹೆಸರಾದ ಕಲ್ಬುರ್ಗಿ ಜಿಲ್ಲೆಯಲ್ಲಿ ಮುಂಗಾರು ಕೈಕೊಟ್ಟು ಬೆಳೆ ನಷ್ಟವಾಗಿ, ಸಾಲದ ಹೊರೆಯನ್ನು ತಡೆಯಲಾರದೆ ರೈತರ ಸರಣಿ ಆತ್ಮಹತ್ಯೆಗಳು ನಡೆಯುತ್ತಿವೆ ಎಂಬ ವರದಿ ಅದು. ಕಲ್ಬುರ್ಗಿ ಒಂದು ಜಿಲ್ಲೆಯಲ್ಲಿ ಕಳೆದ ಜೂನ್ ನಿಂದ ಸೆಪ್ಟೆಂಬರ್ ಕೊನೆಯವರೆಗೆ ಸಾಲದ ಸುಳಿಯಲ್ಲಿದ್ದ 29 ರೈತರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಕಲ್ಬುರ್ಗಿ ಜಿಲ್ಲಾ ಕ್ರೈಂ ರೆಕಾರ್ಡ್ಸ್ ಬ್ಯೂರೋ ವರದಿ ಮಾಡಿದೆ. ಜೂನ್ ತಿಂಗಳಲ್ಲಿ 3 ರೈತರು, ಜುಲೈನಲ್ಲಿ 5, ಆಗಸ್ಟ್ ಮಾಸದಲ್ಲಿ 7 ಮತ್ತು ಸೆಪ್ಟೆಂಬರ್ ಮಾಸದಲ್ಲಿ 14 ರೈತರ ಆತ್ಮಹತ್ಯೆಗಳಾಗಿವೆ. ಅಲ್ಲದೆ ಕಳೆದ ಏಪ್ರಿಲ್‌ನಿಂದ ರಾಜ್ಯದಲ್ಲಿ 251 ರೈತರು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿಗಳು ಹೇಳುತ್ತಿವೆ.

ಮುಂಗಾರು ಕೈಕೊಟ್ಟ ಕಾರಣ ಬೆಳೆ ನಷ್ಟ ಅನುಭವಿಸಿದ ಕಲ್ಬುರ್ಗಿ ರೈತರು ಹಿಂದಿನ ವರ್ಷ ವಿಪರೀತ ಮಳೆಯಿಂದಾಗಿ ಬೆಳೆ ಕಳೆದುಕೊಂಡಿದ್ದರು. ಇದು ಗಾಯದ ಮೇಲೆ ಬರೆ ಎಳೆದಂತಾಗಿದೆ. ತೊಗರಿ ಬೆಳೆಯುವ ಇತರೆ ಜಿಲ್ಲೆಗಳಲ್ಲೂ ರೈತರ ಆತ್ಮಹತ್ಯೆಗಳು ಹೆಚ್ಚುತ್ತಿರುವುದು ವರದಿಗಳಿಂದ ತಿಳಿದು ಬಂದಿದೆ. ಜೂನ್ ನಿಂದ ಸೆಪ್ಟೆಂಬರ್ ವರೆಗೆ ಬೀದರ್ ಜಿಲ್ಲೆಯಲ್ಲಿ 35 ರೈತರು, ವಿಜಯಪುರದಲ್ಲಿ 21 ರೈತರು ಮತ್ತು ಯಾದಗಿರಿಯಲ್ಲಿ 21 ರೈತರು ಅತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೃಷಿ ಇಲಾಖೆಯ ಪ್ರಕಾರ ಕಲ್ಬುರ್ಗಿಯಲ್ಲಿ 5,95,250 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯಲಾಗುತ್ತಿದೆ. ಇದು ಸಾಮಾನ್ಯವಾಗಿ ಬೆಳೆಯಲಾಗುವ ಪ್ರದೇಶದ ಶೇಕಡಾ 69 ರಷ್ಟು ಮಾತ್ರ. ಒಂದು ಅಂದಾಜಿನ ಪ್ರಕಾರ ಶೇಕಡಾ 33 ರಷ್ಟು ತೊಗರಿ ಪ್ರದೇಶ ಮಳೆ ಇಲ್ಲವಾಗಿ ತೀವ್ರ ಹಾನಿಗೊಳಗಾಗಿದೆ. ಅಸಹಜ ಮುಂಗಾರಿನ ಕಾರಣ ಬೀದರ್, ರಾಯಚೂರು ಹಾಗೂ ಯಾದಗಿರಿಯಲ್ಲಿಯೂ ಬೆಳೆ ನಷ್ಟವಾಗಿದೆ. ಸೆಪ್ಟೆಂಬರ್ ಅಂತ್ಯಕ್ಕೆ ನಾಲ್ಕು ಅಡಿ ಬೆಳೆಯಬೇಕಿದ್ದ ತೊಗರಿ ಸಸ್ಯಗಳು ಕೇವಲ ಎರಡು ಅಡಿ ಬೆಳೆದಿವೆ ಎಂದು ತಜ್ಞರು ಹೇಳಿದ್ದಾರೆ. ಇದು ಇಳುವರಿ ಹಾಗೂ ಬೆಳೆಯ ಗುಣಮಟ್ಟದ ಮೇಲೆ ತೀವ್ರ ದುಷ್ಪರಿಣಾಮ ಉಂಟುಮಾಡಲಿದೆ. ಮಳೆ ಮುನಿಸಿಗೆ ಮನುಜನ ಅಂತ್ಯವಾಗುತ್ತಿರುವ ಕಾಲಕ್ಕೆ ನಾವೆಲ್ಲಾ ಸಾಕ್ಷಿಯಾಗುತ್ತಿದ್ದೇವೆ.

ಜೇವರ್ಗಿ ತಾಲ್ಲೂಕಿನ ಬಾಳಪ್ಪ ಕೆಂಬಾವಿ ತಮ್ಮ ಏಳು ಎಕರೆಯಲ್ಲಿ ತೊಗರಿ ಹಾಗೂ ಹತ್ತಿ ಬೆಳೆಯಲು 6 ಲಕ್ಷ ರೂಗಳನ್ನು ಬ್ಯಾಂಕಿನಲ್ಲಿ ಸಾಲಪಡೆದಿದ್ದರು, ಬೆಳೆ ನಷ್ಟವಾದ ಕಾರಣ ಸಾಲದ ಹೊರೆ ತಾಳಲಾರದೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಅವರ ಮಗ ಮಾರಪ್ಪ ಹೇಳುತ್ತಾರೆ.

ಜೇವರ್ಗಿಯ ಮನಸಿವಂಗಿ ಗ್ರಾಮದ 28 ವರ್ಷದ ಯುವ ರೈತ ಗುರು ರೇವಣ್ಣಸಿದ್ಧ ಪೂಜಾರ್ ಸಾಲ ವಸೂಲಾತಿಗೆ ಬ್ಯಾಂಕ್ ನಿಂದ ಬಂದ ಒತ್ತಡ ತಾಳಲಾರದೆ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದು ಬಂದಿದೆ.

ರೈತರು ಬೆಳೆಗಾಗಿ ಮಾಡಿದ ಸಾಲ ವಸೂಲಾತಿಗೆ ಬ್ಯಾಂಕ್ ಗಳು ಒತ್ತಡ ಹೇರಬಾರದು. ಹಾಗೇನಾದರೂ ಒತ್ತಡ ಹೇರಿದರೆ ಕ್ರಮ ಕೈಗೊಳ್ಳುವುದಾಗಿ ಬಂದು ಹೋಗುವ ಎಲ್ಲಾ ಸರ್ಕಾರಗಳೂ ಹೇಳುವುದನ್ನು ನಾವೆಲ್ಲಾ ಕೇಳುತ್ತಿದ್ದೇವೆ. ವರದಿ ಮಾಡುತ್ತಿದ್ದೇವೆ. ಆದರೆ ವಾಸ್ತವವೇ ಬೇರೆ ಇದೆ. ಬರಗಾಲ, ಬೆಳೆ ನಷ್ಟ, ಸಾಲದ ಸುಳಿಯಲ್ಲಿ ಸಿಲುಕಿರುವ ರೈತರ ರಕ್ಷಣೆಗೆ ಸರ್ಕಾರ ಮುಂದಾಗಬೇಕು. ರೈತರು ಯಾವುದೇ ಮೂಲದಿಂದ ಪಡೆದಿರುವ ಸಾಲವನ್ನು ಹಿಂದಿರುಗಿಸಲು ಅಗತ್ಯ ಕಾಲಾವಕಾಶ ಸಿಗಬೇಕು. ಅದಕ್ಕಾಗಿ ಸರ್ಕಾರದ ಮಧ್ಯಸ್ಥಿಕೆ ಶೀಘ್ರ ಆಗಬೇಕಿದೆ. ಆಗ ಮಾತ್ರ ಸ್ವಾಭಿಮಾನಿ ರೈತನಿಗೂ ಬದುಕುವ ಭರವಸೆ ಸಿಗಬಹುದು. ಆ ಬಗ್ಗೆ ಸರ್ಕಾರ ಚಿಂತಿಸಲಿ ಎಂದು ಒತ್ತಾಯಿಸುತ್ತೇವೆ.

**ನಾಗೇಶ್ ಕೆ. ಎನ್.**

# ಮಲ್ಟಿಪ್ಲೆಕ್ಸ್
# ಜೀವಾಯುಷ್

**ಜೈವಿಕ ಪ್ರಚೋದಕ**

ಮಲ್ಟಿಪ್ಲೆಕ್ಸ್ ಜೀವಾಯುಷ್ ಉತ್ಪನ್ನದಲ್ಲಿ ಹ್ಯೂಮಿಕ್ ಆಮ್ಲ, ಫಲ್ವಿಕ್ ಆಮ್ಲ, ಪ್ರಧಾನ ಪೋಷಕಾಂಶಗಳು ಹಾಗೂ ಲಘುಪೋಷಕಾಂಶಗಳು ಸಮತೋಲನವಾದ ಪ್ರಮಾಣದಲ್ಲಿದ್ದು ಸಸ್ಯಗಳು ಸುಲಭದಲ್ಲಿ ಹೀರಿಕೊಳ್ಳುವ ರೂಪದಲ್ಲಿವೆ.

**ಹನಿ ನೀರಾವರಿ ಪದ್ಧತಿ**
ಪ್ರತಿ ಎಕರೆಗೆ 100 ಗ್ರಾಂ

**ಭೂಮಿ ತೋಯಿಸಲು**
ಪ್ರತಿ ಲೀಟರ್ ನೀರಿಗೆ 0.5 ಗ್ರಾಂ

**ಸಸ್ಯ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಕೊಡಬೇಕು**

- ಬಿತ್ತನೆ ಮಾಡಿದ ಅಥವಾ ಸಸ್ಯ ನಾಟಿ ಮಾಡಿದ 10–15 ದಿನಗಳಲ್ಲಿ
- ಹೂವು ಮೂಡುವ ಮುನ್ನ
- ಕಾಯಿ ಅಭಿವೃದ್ಧಿ ಹೊಂದುವ ಸಮಯದಲ್ಲಿ




## ಉಪಯೋಗಗಳು

- ಮೊಳಕೆ ಪ್ರಮಾಣ ವೃದ್ಧಿಯಾಗುತ್ತದೆ
- ದ್ಯುತಿಸಂಶ್ಲೇಷಣೆ ಕ್ರಿಯೆ ಹೆಚ್ಚುತ್ತದೆ
- ಸಸ್ಯಗಳು ಪುಷ್ಕಳವಾಗಿ ಬೆಳೆಯುತ್ತವೆ
- ಹೂವುಗಳ ಪ್ರಮಾಣ, ಕಾಯಿ/ಕಾಳು ಕಚ್ಚುವ ಪ್ರಮಾಣ ವೃದ್ಧಿಯಾಗುತ್ತದೆ
- ಇಳುವರಿಯ ಗುಣಮಟ್ಟ ಹಾಗೂ ಪ್ರಮಾಣ ಹೆಚ್ಚುತ್ತದೆ

Multiplex Vaahini, Kannada Bi-monthly | RNI:KARKAN/2015/65415




Multiplex Vaahini, Kannada Bi-Monthly, Printed, Published, Owned and Edited by Mahesh G Shetty, No.180, 1st Main Mahalakshmi Layout Extension Bangalore-560 086. Editor- Mahesh G Shetty. Printed at Benaka Prints No 42, 4th Cross, 9th Main, Hampinagar, Vijaynagar 2nd Stage, Bangalore-560 104. Published at No.180, 1st Main, Mahalakashmi Layout Extension, Bangalore-560 086.
Ph: 080 – 23494406, 23497360, 23497464 | Mo: 98455 48313 | Email: nagesh.kalenahalli@gmail.com